ಕಲ್ಯಾಣ ಕಿರಣ

ಮೇ-2007 ಬೆಲೆ-6.00





ಪೀಠಾರೋಹಣಕ್ಕೆ ಮೊದಲು ಪೂಜ್ಯ ಮಾತಾಜಿಯವರಿಂದ ಪೂಜ್ಯ ಶ್ರೀ ಸಿದ್ಧರಾಮೇಶ್ವರ
ಸ್ವಾಮಿಗಳಿಗೆ ವಿಭೂತಿ ಧಾರಣೆ



ಪೀಠಾರೋಹಕ್ಕೆ ಮೊದಲು ಪೂಜ್ಯ ಮಾತಾಜಿಯವರ ಪಾದಪೂಜೆ
ನೆರವೇರಿಸುತ್ತಿರುವ ಜಂಗಮ ಮೂರ್ತಿಗಳು

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-37 ಬಸವ ಶಕೆ-873-874 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-1 ಮೇ-2007 ವಾರ್ಷಿಕ ಚಂದಾ 60/- ರೂ.

ಮಹಾಮನೆಯ ಕರೆ

ಬನ್ನಿ ಮಹಾಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯ ನೀಡುತಿದೆ || ಪ ||

ಮಹಾಮನೆಯ ಭಕ್ತಿ ಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ || ಅ.ಪ ||

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮ ಪ್ರಭುದೇವ
ಪ್ರೇಮದ ಚಿಕ್ಕಪ್ಪ ಸಿದ್ಧರಾಮ ||

ಅಕ್ಕಮಹಾದೇವಿ ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆ ಮಾವ
ಹರಳಯ್ಯ - ಮಧುವಯ್ಯ - ಮೋಳಿಗೆಯ ಅಯ್ಯ ಈ
ಶರಣರೆಮ್ಮೆಯ ಬಂಧು ಬಳಗ ||

ಇಂಥ ಮಹಾಮನೆಯು ಜಗದೊಳೆಲ್ಲೂ ಇಲ್ಲ
ಅಂತೆಲ್ಲ ದರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ||

ಕಲ್ಯಾಣ ಮಹಾಮನೆಯು ಮರುಹುಟ್ಟು ಪಡೆದಿಹುದು
ಕೂಡಲ ಸಂಗಮದಿ ತಲೆ ಎತ್ತಿ ನಿಂತಿಹುದು-
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವ ಪ್ರೇಮ ಸಾರುತಿಹುದು ||

ಹುಟ್ಟನಿಂದಲಿ ನೀವು ಏನೇ ಇರಬಹುದು
ಸದ್ಯದ ಗುಣದಲ್ಲಿ ಹೇಗೇ ಇರಬಹುದು
ಕಲ್ಯಾಣ ಪರ್ವಕೆ ಬರಲು ಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ||


ಬಸವ ಕಲ್ಯಾಣ ಶರಣ ಭೂಮಿಯಲ್ಲಿ
ನಡೆಯುತಿಹ ಪರ್ವವು ತೌರಿನ ಹಬ್ಬ
ಕಾಯಕ ದಿನದಿ ಶರಣರನು ಸೇರಿಸಿ
ಬಸವ ಸಂತಾನಕೆ ತರುತಿದೆ ಉಬ್ಬ ||

ಮಹಾಮನೆಯ ಐಸಿರಿಯ ನೋಡಲು ಬನ್ನಿ
ವಚನಾಮೃತದ ಬುತ್ತಿ ಉಣ್ಣಲು ಬನ್ನಿ
ತತ್ವದ ಜ್ಯೋತಿಗಳು ಬೆಳಗುತಿಹವಿಲ್ಲಿ
ಸಚ್ಚಿದಾನಂದನೊಲುಮೆ ಪಡೆಯಲು ಬನ್ನಿ ||

- ಬಸವಾತ್ಮಜೆ

★ ಕಲ್ಯಾಣ ಕಿರಣ ★

ಕಿರಣ ಗನ್ನಡಿ



ದಿ.30-6-1995ರಂದು ಲಿಂಗೈಕ್ಯರಾದ ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ 12 ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಜೂನ್ 30ರಂದು ಆಚರಿಸಲಾಗುತ್ತದೆ.

ಮುಖಪುಟ: ಬಸವ ಕಲ್ಯಾಣದ ಶೂನ್ಯ ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

(ದಿ.18-4-2007ರಂದು ಯಾವುದೋ ಒಂದು ಸಾಮಾನು ಹುಡುಕುವಾಗ ದಿ.26-3-1993ರಂದು ಬಾಗಲಕೋಟೆಯ ವಿದ್ಯಮಾನ ಪತ್ರಿಕೆಯಲ್ಲಿ ಪ್ರಕಟವಾದ ಶ್ರೀಮತಿ ಸುವರ್ಣ ಲತಾ ಪಟ್ಟಣ ಶೆಟ್ಟಿ ಅವರ ಲೇಖನಕ್ಕೆ ನಾನು ಉತ್ತರ ರೂಪವಾಗಿ ಒಂದು ಲೇಖನ ಬರೆದುದು ಸಿಕ್ಕಿತು. ಅದನ್ನು ಯಥಾವತ್ತಾಗಿ ಪ್ರಕಟಿಸಲಾಗುತ್ತಿದೆ.)

ಕೂಡಲ ಸಂಗಮ ಅಭಿವೃದ್ಧಿ ವಿಳಂಬ ಯಾರಿಂದ ?

-ಮಾತಾಜಿ

ವಿದ್ಯಮಾನ ಪತ್ರಿಕೆಯ ದಿ.26-3-1993, ಪುಟ 2-3ರಲ್ಲಿ ಶ್ರೀಮತಿ ಸುವರ್ಣ ಲತಾ ಪಟ್ಟಣಶೆಟ್ಟಿ ಅವರ ಬರಹ "ಕೂಡಲ ಸಂಗಮ ಕ್ಷೇತ್ರದ ರಕ್ಷಣಾ ಕಾರ್ಯಕ್ಕೆ ಮತ್ತೆ ಆತಂಕ" ಎಂಬ ಶೀರ್ಷಿಕೆಯಡಿಯಲ್ಲಿ ಕೆಲವು ಅಸಂಗತ ವಿಚಾರಗಳನ್ನು ಗಮನಿಸಿ ಈ ಬರಹವನ್ನು ಕಳಿಸುತ್ತಿದ್ದೇನೆ.

ಕೂಡಲ ಸಂಗಮದ ದೇವಾಲಯಕ್ಕೆ ಸಂಬಂಧಿಸಿದಂತೆ ಕೆಲಸಗಳು ವಿಳಂಬವಾಗುತ್ತಿರುವುದು ವಿಷಯದ ಬಗ್ಗೆ ಸರಿಯಾದ ಮಾಹಿತಿಯಿಲ್ಲದೆ ಮನಸಿಗೆ ಬಂದಂತೆ ಬರೆಯುವ ಜನರಿಂದ ಮತ್ತು ಯಾವುದೇ ವಿಧಾಯಕ ಕಾರ್ಯಕ್ರಮಕ್ಕೆ ಪರಸ್ಪರ ಸಹಕರಿಸುವ ಮನೋಭಾವವಿಲ್ಲದೆ ಒಗಟ್ಟಿನ ಕೊರತೆಯಿರುವ ಸಣ್ಣ ಮನಸ್ಸಿನ ಜನರಿಂದ! ಒಂದು ದೊಡ್ಡ ಕಾರ್ಯವಾಗುವಾಗ ಸಣ್ಣ ಪುಟ್ಟ ವೈಯಕ್ತಿಕ ದ್ವೇಷಾಸೂಯೆಗಳಿಂದ ವರ್ತಿಸುವ ಜನರನ್ನು ಕಂಡಾಗ ಇವರಿಂದ ಒಳ್ಳೆಯ ಕಾರ್ಯಗಳು ಎಂದೆಂದೂ ಸಾಧ್ಯವಾಗುವುದಿಲ್ಲ ಎಂದು ಹತಾಶರಾಗಿ ಉತ್ಸಾಹಭರಿತರಾದ ಕಾರ್ಯೋನ್ಮುಖರು ಸಹ ಕೈ ಚೆಲ್ಲಿ ಕೂರುವ ಪರಿಸ್ಥಿತಿ ಬರುತ್ತಿದೆ. ಈ ವಿಷಯ ಕುರಿತು ಬರಹಗಳಿಗೆ ತಪ್ಪು ಮಾಹಿತಿ ಒದಗಿಸುವ ಕೆಲವರು ಇದ್ದಾರೆ; ಇವರಿಗೆ ಸಂಗಮ ಕ್ಷೇತ್ರದ ಅಭಿವೃದ್ಧಿ ಬೇಕಾಗಿಲ್ಲ, ವಿವಾದವನ್ನು ಜೀವಂತವಾಗಿ ಇಡ ಬಯಸುತ್ತಾರೆ. ತಾವೇ ಕ್ಷೇತ್ರದ ಹಿತ ಚಿಂತಕರೆಂದು ಕೀರ್ತಿಯನ್ನು ಹೊಂದ ಬಯಸಿ ಜನರಲ್ಲಿ ವಾಸ್ತವದ ಕಲ್ಪನೆ ಬರದಂತೆ ಮಾಡುತ್ತಾರೆ ಎಂದು ಎನ್ನಿಸದೆ ಇರದು. ಇರಲಿ, ವಿಷಯಕ್ಕೆ ಬರೋಣ.

ಕೂಡಲ ಸಂಗಮ ಕ್ಷೇತ್ರದ ಸಂರಕ್ಷಣೆ ಮತ್ತು ಅಭಿವೃದ್ಧಿ ಎಂಬ ಎರಡು ಅಂಶಗಳನ್ನು ಒಳಗೊಂಡ ಒಂದು ವರದಿ 1988ರಲ್ಲಿ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಅಧ್ಯಕ್ಷತೆಯಲ್ಲಿ ಸಿದ್ಧವಾಯಿತು. ಸಚಿವ ಸಂಪುಟದಿಂದ ಒಪ್ಪಿತವೂ ಆಯಿತು. 1988ರಿಂದ ಈಚೆಗೆ ಕೃಷ್ಣಾ-ಮಲಪ್ರಭೆಯರಲ್ಲಿ ಅದೆಷ್ಟು ನೀರು ಹರಿದು ಹೋಯಿತೋ, ಈ ವರದಿಯ ಒಂದು ಸಣ್ಣ ಅಂಶವೂ ಜಾರಿಗೆ ಬಂದಿಲ್ಲ. ಒಂದು ಗಮನಾರ್ಹ ಸಾಧನೆ ಎಂದರೆ ಅಧಿಕಾರದಿಂದ ಕೆಳಗಿಳಿಯುವ ಕೆಂಪು ಸಿಗ್ನಲ್ ಕಾಣ ತೊಡಗುತ್ತಲೇ ದಿಢೀರನೆ ಹೆಲಿಕಾಪ್ಟರಲ್ಲಿ ಹಾರಾಡಿ ಶ್ರೀ ಬಂಗಾರಪ್ಪನವರು ಒಂದು ಕಲ್ಲಿಟ್ಟು ಹೋದರು ಅವರು ಭಾಷಣ ಮಾಡಲು ಮಾಡಿದ ಒಂದು ವೇದಿಕೆ "ಬಂಗಾರಪ್ಪನ ಕಟ್ಟೆ" ಎಂಬ ಸ್ಮಾರಕ ಆಗಿದೆ. ಕೆಲವಾರು ವರ್ಷ ಸರಿದ ನಂತರ "ಬಂಗಾರಪ್ಪನ ಕಟ್ಟೆ" ಬಗ್ಗೆ ಸ್ಥಳ ಪುರಾಣ ಹುಟ್ಟಿಕೊಂಡು ಅದೂ ಒಂದು ಸ್ಮಾರಕವಾಗಿ, ಪುನರ್ವಸತಿ ಯೋಜನೆಯಡಿಯಲ್ಲಿ ಇನ್ನೊಂದು ಸ್ಮಾರಕಕ್ಕೆ ಯು.ಕೆ.ಪಿ. ಅಧಿಕಾರಿಗಳು ಸಿದ್ಧತೆ ನಡೆಸಿದರೂ ನಡೆಸಬಹುದು !

ವಿಶ್ವನಾಥ ರೆಡ್ಡಿ ಮುದ್ನಾಳ್ ವರದಿ ಪೂರ್ವಾರ್ಧದಲ್ಲಿ ಶ್ರೀ ಸಂಗಮೇಶ್ವರ ದೇವಾಲಯವನ್ನು ರಕ್ಷಿಸುವ ಬಗ್ಗೆ ಚರ್ಚಿಸುತ್ತದೆ. ತಂತ್ರಜ್ಞಾನಿಗಳ ಸಮಿತಿಯ ವರದಿಯ ಆಧಾರದ ಮೇಲೆ ದೇವಾಲಯದ ತಳಭಾಗವನ್ನು ಹೇಗೆ ಶಿಲೀಕರಿಸ (Solidify) ಬೇಕು, ಇದಕ್ಕೆ ಕೆಮಿಕಲ್ ಮತ್ತು ಸಿಮೆಂಟ್ ಗ್ರೌಟಿಂಗ್ ಮಾಡಬೇಕು, ಸುತ್ತುವರಿದ ನೀರಿನ ಮಧ್ಯೆ ಇರುವ ಭಾಗವನ್ನು ಗ್ರೌಟಿಂಗ್ ಮಾಡಿ ನಂತರ ಮೂಲ ಸ್ಥಳದಲ್ಲಿಯೇ ದೇವಾಲಯವನ್ನು ಸುಂದರವಾಗಿ ಪುನರ್ನಿರ್ಮಾಣ ಮಾಡಬೇಕು. ಬಸವೇಶ್ವರ ಐಕ್ಯ ಮಂಟಪಕ್ಕೆ ಮೆಟ್ಟಿಲು ಮಾಡಬೇಕು. ಅಲಂಕಾರಿಕವಾದ ಗೂಟಗಳನ್ನು ನೆಟ್ಟು, ಶಿಲಾಸನಗಳನ್ನು ಮಾಡಿ ಆ ಪರಿಸರವನ್ನೆಲ್ಲ ಸುಂದರ ಗೊಳಿಸಬೇಕು ಇತ್ಯಾದಿ. ವರದಿ ಓದುತ್ತಾ ಕಣ್ಣು ಮುಚ್ಚಿಕೊಂಡು ಕನಸು ಕಾಣುವುದರಲ್ಲೇ ಬಹುಶಃ ನಮ್ಮ-ನಿಮ್ಮ ಜೀವನದ ಶೇಷಾಯುಷ್ಯವನ್ನು ಕಳೆಯಬೇಕಾದೀತೇನೋ, ಯಾವುದೇ ಸರ್ಕಾರಿ ಸಂಸ್ಥೆ ಇಂಥದನ್ನು ಮಾಡಿ ತೋರಿಸಿದ್ದನ್ನು ನಮ್ಮ ದೇಶದಲ್ಲಿ ಕಾಣುವುದು ಕಷ್ಟ ಸಾಧ್ಯ.

ವರದಿಯ ಉತ್ತರಾರ್ಧದಲ್ಲಿ ಇನ್ನೊಂದು ಸುಂದರ ಕನಸಿದೆ. ಅದುವೇ ಅಂತರ ರಾಷ್ಟ್ರೀಯ ಬಸವ ಕೇಂದ್ರ, ಅನುಭವ ಮಂಟಪ, ತಂಗು ಭವನ, ವಾಣಿಜ್ಯ ಕೇಂದ್ರ ಇತ್ಯಾದಿ ನಿರ್ಮಾಣ. ಇದಕ್ಕಾಗಿ ಈಗ ವಶಪಡಿಸಿಕೊಂಡು ಪಾಳುಬಿಟ್ಟು, ಜಾಲಿ ಮತ್ತು ಪಾರ್ಥೇನಿಯಮ್ ವನ ಬೆಳೆಸಿರುವ 102 ಎಕರೆ ಜೊತೆಗೆ ಪುನಃ 300 ಎಕರೆ ಬೆಳೆಯುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಮುದ್ನಾಳ್ ವರದಿ ಶಿಫಾರಸು ಮಾಡಿದೆ. ಚಿಂತನ ಶೀಲರಾದ ಜನರಿಗೆ ದಿಗ್ಭ್ರಾಂತಿಯನ್ನುಂಟು ಮಾಡಿರುವ ಸಮಸ್ಯೆ ಏನು ಎಂದರೆ ವರದಿ ಸಿದ್ಧಪಡಿಸಲು ಸಮಿತಿಯನ್ನು ಸರ್ಕಾರ ನೇಮಿಸಿದ್ದು ಕೂಡಲ ಸಂಗಮೇಶ್ವರ ದೇವಾಲಯವನ್ನು ಸಂರಕ್ಷಿಸುವುದು ಹೇಗೆ ಎಂಬ ಬಗ್ಗೆ ಸಲಹೆ-ಸೂಚನೆ ನೀಡಲು. ಆ ಕೆಲಸವನ್ನು ಮೊಟ್ಟಮೊದಲು ಮತ್ತು ಸಮಯ ಕಳೆಯದೆ ಸರ್ಕಾರ ಆರಂಭಿಸಬೇಕು ಎಂಬ ಬಗ್ಗೆ ಯಾರೂ ಸರ್ಕಾರಕ್ಕೆ ಒತ್ತಾಯ ತರುತ್ತಿಲ್ಲ. ಮಳೆಗಾಲಗಳು ಬರುತ್ತಿವೆ ಬಸವ ಸಾಗರ ಜಲಾಶಯದಲ್ಲಿ ನೀರು ಸತತವಾಗಿ ನಿಲ್ಲುತ್ತದೆ. ಆದ್ದರಿಂದ ದೇವಾಲಯದ ತಳಪಾಯ ಭದ್ರ ಪಡಿಸಬೇಕು ಎಂಬ ಬಗ್ಗೆ ತ್ವರಿತ ಆಂದೋಲನ ಶುರುವಾಗಬೇಕು. ಇಲ್ಲವೇ ಸರ್ಕಾರಕ್ಕೆ ಗಡುವು ಕೊಟ್ಟು ನಿಮಗೆ ಆಗದಿದ್ದರೆ ಬಿಟ್ಟು ಬಿಡಿ ನಾವು ಮಾಡುತ್ತೇವೆ ಎಂದು ಕೆಲಸ ಕೈಗೆತ್ತಿಕೊಂಡು ಪೂರೈಸುವ ಭಕ್ತವೃಂದ ತಯಾರಾಗಬೇಕು.

ಈ ಪ್ರಥಮ ಆದ್ಯತೆಯ ಕೆಲಸ ಬಿಟ್ಟು, ಯು.ಕೆ.ಪಿ.ಯವರು ಅಂತರ ರಾಷ್ಟ್ರೀಯ ಬಸವ ಕೇಂದ್ರಕ್ಕೆ 300 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ತರಾತುರಿಯಲ್ಲಿದ್ದು, ಭೂ ಸ್ವಾಧೀನ ಕಾಲಂ 4(1)ರ ಪ್ರಕಾರ ನೋಟೀಸ್ ಜಾರಿ ಮಾಡಿದ್ದಾರೆ. ಈ ಮಧ್ಯೆ ಪ್ರಸ್ತಾಪಿಸಬೇಕಾದ ಇನ್ನೊಂದು ಮಹತ್ವದ ಸಂಗತಿ, ಸಂಗಮ ಗ್ರಾಮದ ಪುನರ್ವಸತಿ ಯೋಜನೆ; ಬಸವ ಸಾಗರ ಜಲಾಶಯದ ನೀರು ವಿಸ್ತಾರಗೊಂಡು ನಿಂತು ಗ್ರಾಮವು ನದಿಯ ದಂಡೆಗೆ ಸಮೀಪವಾಗಿ ಸೊಳ್ಳೆಯ ಕಾಟ ವಿಪರೀತವಾಗಿ ಮಲೇರಿಯಾದ ಬಾಧೆ ಜಾಸ್ತಿಯಾಗಿದೆ. ಸರಿಯಾದ ನಿವೇಶನಗಳನ್ನು ಒದಗಿಸಿಕೊಟ್ಟು ಗ್ರಾಮದ ಪುನರ್ವಸತಿ ಮಾಡುವುದು ಇನ್ನೂ ಆದ್ಯತೆಯ ಸಂಗತಿಯಾಗಿದೆ. ಗ್ರಾಮದ ಜನರು, ಪುರ ಪ್ರಮುಖರ ಹಿರಿತನದಲ್ಲಿ ಸಭೆ ಸೇರಿ, ತಮಗೆ ಕೊಡಲಾಗುವ ನಿವೇಶನಗಳು ಸಂಗಮೇಶ್ವರ ದೇವಾಲಯ ದಿಂದಲಾಗಲೀ, ಹಳೆಯ ಊರಿನಿಂದಾಗಲೀ ತೀರಾ ದೂರವಾಗಬಾರದೆಂದು, ಸಂಗಮ ಕಾಂಪ್ಲೆಕ್ಸ್ ಗೆಂದು ವಶಪಡಿಸಿಕೊಂಡು ಸರ್ಕಾರ ಇಟ್ಟುಕೊಂಡಿರುವ ಪ್ರದೇಶಕ್ಕೆ ಹೊಂದಿಕೊಂಡಿರುವ ಜಮೀನುಗಳನ್ನು ಕೊಡಿಸಬೇಕೆಂದು ಬೇಡಿಕೆ ಸಲ್ಲಿಸಿದ್ದಾರೆ. ಈ ಬೇಡಿಕೆ ವಾಸ್ತವಿಕವೂ ಮತ್ತು ಅಗತ್ಯವಾದುದೂ ಆಗಿದೆ. ಸೊಳ್ಳೆ, ಹುಳು-ಹುಪ್ಪಟೆಗಳಿಂದ ಗ್ರಾಮದ ಜನರು ಅನುಭವಿಸುವ ಯಾತನೆ ಅಪಾರವಾಗಿದೆ. ಮನೆಗಳನ್ನು ಕಟ್ಟಿಸಲು ಭೂಮಿಯ ಗುಣವೂ ಅನುಕೂಲಕರವಾಗಿರುವುದು ಈ ಆಯ್ಕೆಗೆ ಕಾರಣ. ಗ್ರಾಮಸ್ಥರ ಬೇಡಿಕೆಯಲ್ಲಿರುವ ವಸ್ತು ನಿಷ್ಠ ಸತ್ಯವನ್ನು ಗುರುತಿಸಿ ಭೂ ಸ್ವಾಧೀನಾ -ಧಿಕಾರಿಗಳು ಸಹಾನುಭೂತಿಯಿಂದ ಪರಿಶೀಲಿಸುತ್ತಿರುವಾಗಲೇ ವೈಯಕ್ತಿಕ ದ್ವೇಷದಿಂದ ಅಡ್ಡಗಾಲು ಹಾಕುವ ಕೆಲಸ ತೆರೆಯ ಮರೆಯಲ್ಲಿ ಮತ್ತು ಪತ್ರಿಕಾ ಬರಹಗಳ ಮೂಲಕ ಕೆಲವರಿಂದ ನಡೆದಿದೆ. ಬಾಗಲುಕೋಟೆಯಲ್ಲಿ ವಾಸವ್ಯ ಮಾಡಿರುವ ವಕೀಲ ಬರಹಗಾರರಿಗಾಲೀ, ಹುನಗುಂದ - ಹುಬ್ಬಳ್ಳಿಗಳಲ್ಲಿ ಕುರಿತು ಓದುಗರ ವೇದಿಕೆಗೆ ಪತ್ರ ಬರೆಯುವವರಿಗಾಗಲೀ ಸಂಗಮ ಗ್ರಾಮದ ಜನರ ಕಷ್ಟ ಏನು ತಿಳಿದೀತು? ಗಾಳಿಯಾಡದ ಮನೆಗಳು, ಹೊರಗೆ ಮಲಗಲು ವಿಪರೀತ ಸೊಳ್ಳೆಗಳು ಮತ್ತು ಮಳೆಗಾಲದಲ್ಲಿ ವಿಪರೀತ ರೊಜ್ಜು, ಏನೇ ಇರಲಿ, ಮೊದಲು ಮನೆಗಳು ಸ್ಥಳಾಂತರಗೊಳ್ಳಬೇಕು. ಇದು ಮೂಲಭೂತ ಮಾನವೀಯತೆಯ ಪ್ರಶ್ನೆ. ಸ್ಥಳಾಂತರ ಎಂದ ತಕ್ಷಣ ಬಾಗಲಕೋಟೆ, ಹುನಗುಂದಕ್ಕೊ? ಸಂಗಮೇಶ್ವರ ದೇವಾಲಯದೊಡನೆ ಭಾವನಾತ್ಮಕ ಸಂಬಂಧ ಹೊಂದಿದ ಗ್ರಾಮಸ್ಥರು ಒಂದು ಒಂದೂವರೆ ಕಿಲೋಮೀಟರ್ ಆಚೆ ಹೊಸ ಗ್ರಾಮಕ್ಕೆ ಹೋಗುವುದು ಬೇಡ ಎನ್ನುವುದು ತೀವ್ರತರ ಅಪರಾಧವೇ? ಮುಳುಗಡೆ ಪ್ರದೇಶದ ಹೊರಗಿರುವ ಪ್ರೌಢ ಶಾಲೆ, ಸಂಗಮೇಶ್ವರ ಬೋರ್ಡಿಂಗ್, ಪದವಿ ಪೂರ್ವ ಕಾಲೇಜು ಇವೆಲ್ಲವುಗಳಿಂದ 5-6 ಕಿ.ಮಿ ದೂರಕ್ಕೆ ಹೊಸ ಊರಿಗೆ ಹೋಗುವುದು ಉಚಿತವೇ? ಮುದ್ನಾಳ್ ವರದಿ ಆಗಿರುವ ಪೂರ್ವದಲ್ಲೇ ಯು.ಕೆ.ಪಿ ಅವರು ಒಂದು ಬೃಹತ್ ಯೋಜನೆಯನ್ನು ತಯಾರಿಸಿ ಆಮೆ ನಡಿಗೆಯಲ್ಲಿ ಮಾಡುತ್ತಾ ಹೊಸದಾಗಿ ಪ್ರಾಥಮಿಕ ಶಾಲೆ, ಬಾಲವಾಡಿ, ಪ್ರಾಥಮಿಕ

ಆರೋಗ್ಯ ಕೇಂದ್ರ ಮುಂತಾದವನ್ನು ಕಟ್ಟಿಸಿದ್ದಾರೆ. ಗ್ರಾಮಸ್ಥರು ಕೇಳುತ್ತಿರುವ ನಿವೇಶನಗಳ ಸ್ಥಳ ಈ ಘಟಕಗಳ ಸನಿಹವಿದೆ. ಗ್ರಾಮದವರು, ಸರ್ಕಾರದವರು ಈಗಾಗಲೇ ಸಂಗಮ ಸಂಕೀರ್ಣಕ್ಕೆ ವಶ ಪಡಿಸಿಕೊಂಡು ಇಟ್ಟಿರುವ ಭೂಮಿಯನ್ನು ಕೇಳುತ್ತಾರೆ, ಎಂದು ಶ್ರೀಮತಿ ಸುವರ್ಣ ಲತಾ ಅವರು ಬರೆದಿದ್ದಾರೆ. ಇದು ತಪ್ಪು. ಪುನರ್ವಸತಿ ಆಗುವುದು ತೀರಾ ಅಗತ್ಯ ಎಂದು ವೈದ್ಯರು ಮುಂತಾಗಿ ಎಲ್ಲರೂ ಅಭಿಪ್ರಾಯ ಕೊಡುತ್ತಿರುವುದರಿಂದ ಭೂಸ್ವಾಧಿನಾಧಿಕಾರಿಗಳು ಊರಿಗಾಗಿ ಭೂಸ್ವಾಧೀನ ಮಾಡಿಕೊಳ್ಳಲು ಜಮೀನುಗಳನ್ನು ಆಯ್ಕೆ ಮಾಡುತ್ತಿದ್ದಾರೆ. ಈ ಹಂತದಲ್ಲಿ ಗ್ರಾಮದ ಜನರು ತಮ್ಮ ಅಗತ್ಯಕ್ಕನುಗುಣವಾಗಿ ಸೂಚಿಸಿದ್ದಾರೆ. ಸಂಗಮೇಶ್ವರ ದೇವಾಲಯದ ರಕ್ಷಣೆ ಮತ್ತು ಪುನರ್ ನಿರ್ಮಾಣಕ್ಕೆ ಯಾರೂ ಅಡ್ಡಿಯಾಗಿಲ್ಲ. ಗ್ರೌಟಿಂಗ್ ಮುಂತಾದ ಕಾರ್ಯ ಮಾಡಲು ಯಾರಿಂದಲೂ ಯಾವುದೇ ಆತಂಕವಾಗಿಲ್ಲದಿದ್ದರೂ ಸರ್ಕಾರವು ಏಕೆ ಇದನ್ನು ಪ್ರಾರಂಭಿಸುತ್ತಿಲ್ಲ ಎಂಬುದು ಬಗೆಹರಿಯಲಾರದ ಒಗಟಾಗಿದೆ.

ನಾವು ಬಸವ ಧರ್ಮ ಪೀಠ ಟ್ರಸ್ಟ್ ಅನ್ನು 1987ರಲ್ಲಿಯೇ ಆರಂಭಿಸಿದೆವು. ವಿವಿಧ ಬಗೆಯ ಯೋಜನೆಗಳನ್ನು ಹಮ್ಮಿಕೊಳ್ಳಲು 1987ರ ಜುಲೈ ತಿಂಗಳಲ್ಲಿಯೇ ಜಮೀನು ಖರೀದಿಸಿದ್ದೆವು. ಈ ಜಮೀನುಗಳು ಯಾವುವೂ ಮುಳುಗಡೆ ಪ್ರದೇಶದಲ್ಲಿ ಇಲ್ಲ. ಮುಳುಗಡೆ ಪ್ರದೇಶದಲ್ಲಿ ಬರದ ಜಮೀನುಗಳ ಖರೀದಿ ಮಾತ್ರ ಸಾಧ್ಯವಿದ್ದ ಕಾರಣ ನಾವು ಖರೀದಿಸಿ ಅನೇಕ ಕಟ್ಟಡಗಳನ್ನು ಕಟ್ಟಿಸಿದ್ದೇವೆ. ವಿಶ್ವನಾಥ ರೆಡ್ಡಿ ಮುದ್ನಾಳ ವರದಿ ಸಿದ್ಧವಾದುದು 1988 ಜೂನ್‌ದಲ್ಲಿ. ಅಲ್ಲಿಗಾಗಲೇ ನಮ್ಮ ಎಷ್ಟೋ ಕಟ್ಟಡಗಳು ಕಟ್ಟಲ್ಪಟ್ಟಿದ್ದವು. ಮುದ್ನಾಳ್ ವರದಿ ಜಾರಿಗೆ ಬಂದರೆ ಕ್ಷೇತ್ರದ ಬೆಳವಣಿಗೆ ಸರ್ಕಾರದ ವತಿಯಿಂದಲೇ ಚನ್ನಾಗಿ ಮತ್ತು ತ್ವರಿತವಾಗಿ ಆಗುವುದೆಂದು ಅಖಿಲ ಭಾರತ ವೀರಶೈವ ಮಹಾ ಸಭೆಯ ಮೂಲಕ ಸುಂದರ ಯೋಜನೆಯನ್ನು ರೂಪಿಸಿಕೊಟ್ಟವರು ನಾವೆಯೇ. ಮುದ್ನಾಳ್ ವರದಿ ಜಾರಿ ಆಗಲೇ ಬೇಕು ಆದರೆ ಸಾರ್ವಜನಿಕ ಸಂಸ್ಥೆಗಳಾದ ಬಸವ ಧರ್ಮದ ಮಹಾ ಜಗದ್ಗುರು ಪೀಠ, ಬಸವ ಮಂಟಪ, 50 ಕೋಣೆಗಳ ಅತಿಥಿಗೃಹ, ಶರಣ ಮೇಳಕ್ಕೆ ಟೆಂಟ್ ಹಾಕುವ ಸ್ಥಳ ಮುಂತಾದವು ಬಸವ ಧರ್ಮ ಪೀಠದ ಟ್ರಸ್ಟಿನ ಜಮೀನುಗಳು, ಶ್ರೀ ಸಂಗಮೇಶ್ವರ ಮಾಧ್ಯಮಿಕ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು, ಸಂಗಮೇಶ್ವರ ಬೋರ್ಡಿಂಗ್ ಅಥವಾ ವೈಯಕ್ತಿಕ ಕಾರಣಗಳಿಗಾಗಿ ಕೆಲವರ ಜಮೀನು (ಈಗಾಗಲೆ ಅವರು ಮುಳುಗಡೆ, ಪುನರ್ವಸತಿ, ಸಂಗಮ ಸಂಕೀರ್ಣ ಎಂಬೆಲ್ಲ ನೆಪದಲ್ಲಿ ಸಾಕಷ್ಟು ಜಮೀನು ಕಳೆದು ಕೊಂಡಿದ್ದಾರೆ) ಬಿಟ್ಟು, ಉಳಿದವನ್ನು ಸ್ವಾಧೀನ ಪಡಿಸಿಕೊಂಡು ಕೆಲಸ ಆರಂಭಿಸಲು ಏನು ತೊಂದರೆಯೂ ಇಲ್ಲ.

ನಮ್ಮ ಜಮೀನು ಮುಳುಗಡೆಯಲ್ಲಿ ಬರುತ್ತವೇನೋ ಅದಕ್ಕಾಗಿ ವರದಿ ಜಾರಿಗೆ ಅಡ್ಡಿ ಮಾಡುತ್ತಿದ್ದೇವೆ ಎಂದು ಶ್ರೀಮತಿ ಸುವರ್ಣ ಲತಾರವರು ಸರಿಯಾಗಿ ತಿಳಿದುಕೊಳ್ಳದೆ ಬರೆದುದನ್ನು ನೋಡಿದರೆ ಸೋಜಿಗವಾಗುತ್ತದೆ. ಮುಳುಗಡೆ ಪ್ರದೇಶಗಳು ಆಗಲೇ ಗುರುತಿಸಲ್ಪಟ್ಟು, ಸ್ವಾಧೀನಗೊಂಡು, ಹಣವು ಸಂಬಂಧಿಸಿದ ಮಾಲೀಕರಿಗೆ ಮುಟ್ಟಿ ಈ ಪ್ರಕ್ರಿಯೆ ಮುಗಿದೇ ಹೋಗಿದೆ. ಕನ್ಯಾಕುಮಾರಿಯಲ್ಲಿ ಶ್ರೀ ವಿವೇಕಾನಂದ ಶಿಲಾ ಸ್ಮಾರಕ ಮಾಡುವಾಗ ಅಖಿಲ ಭಾರತ ಮಟ್ಟದ ಸಮಿತಿ ಮಾಡಿ ಯೋಜನೆಯನ್ನು ಪೂರ್ಣಗೊಳಿಸಲಾಯಿತು. ಸರ್ಕಾರದ ವತಿಯಿಂದ ಕೆಲಸ ಮಾಡುವ ವಿಶ್ವಸ್ಥ ಮಂಡಳಿಗಳು ಎಷ್ಟು ಕಳಕಳಿಯಿಂದ ಕೆಲಸ ಮಾಡಬಲ್ಲವು? ಅಖಿಲ ಭಾರತ ವ್ಯಾಪ್ತಿಯ ಸಮಿತಿ ಮಾಡದಿದ್ದರೆ ಅಖಿಲ ಕರ್ನಾಟಕ ಮಟ್ಟದ, ಪ್ರೌಢರು-ಚಿಂತನ ಶೀಲರು ಕಳಕಳಿವುಳ್ಳವರ ಸಮಿತಿ ಮಾಡಿ ಕೂಡಲ ಸಂಗಮವನ್ನು ಇಂದು ಸರ್ವಾಂಗ ಸುಂದರವಾಗಿ ಬೆಳೆಸುವುದು ಅತ್ಯಗತ್ಯವಾಗಿದೆ. ಹೀಗಲ್ಲದೆ ಸಣ್ಣ ಸಣ್ಣ ವಿವಾದಗಳನ್ನು ಬೃಹದಾಕಾರದಲ್ಲಿ ಬೆಳೆಸಿ ಎಲ್ಲ ಕೆಲಸಗಳನ್ನು ಕೆಡಿಸುವ ವಿಘ್ನ ಸಂತೋಷಗಳು ಇರುವವರೆಗೆ ಸಂಗಮನಾಥನ ದೇವಾಲಯ ದೀನ ಸ್ಥಿತಿಯಲ್ಲಿ ಉಳಿಯುವಂತಾಗುವಂತೆ ತೋರುತ್ತದೆ. ಮುದ್ನಾಳ್ ಸಮಿತಿ ಕಾರ್ಯದ ಉಸ್ತುವಾರಿ ಮತ್ತು ಅನುಷ್ಠಾನ ಮಾಡಲು ಒಂದು ವಿಶ್ವಸ್ಥ ಮಂಡಳಿಯನ್ನು ಸೂಚಿಸಿದೆ. ಅದಕ್ಕೆ ಮುಖ್ಯ ಮಂತ್ರಿಗಳು ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರು, ಬಸವ ಸಮಿತಿಯ ಅಧ್ಯಕ್ಷರು ಇದರಲ್ಲಿ ಸದಸ್ಯರು. ಈ ಭವ್ಯವಾದ ವಿಶ್ವಸ್ಥ

ಮಂಡಳಿಯು ಆಕಾಶದ ಗಾವಿನ ಫಲದಂತೆ ತೋರುತ್ತದೆ. ವರದಿಯಾದುದು 1988ರಲ್ಲಿ; ಮುಖ್ಯ ಮಂತ್ರಿಗಳು ಅತ್ತ ಇರಲಿ ಮಂಡಳಿಯ ಸಲಹೆಗಾರರೆಂದು ಸೂಚಿಸಲ್ಪಟ್ಟ ಮಹಾಸಭೆಯ ಅಧ್ಯಕ್ಷರಾಗಲಿ, ಬಸವ ಸಮಿತಿಯ ಅಧ್ಯಕ್ಷರಾಗಲಿ ಅಂದಿನಿಂದ ಇಂದಿನವರೆಗೆ ಬಂದು ಕಣ್ಣೆತ್ತಿ ನೋಡಿರುವರೆ? ಯಾರಿಗೂ ತಿಳಿಯದಂತೆ ಗುಟ್ಟಾಗಿ ಬಂದು ಹೋಗಿದ್ದರೆ ನಮಗೆ ಗೊತ್ತಿಲ್ಲ. ಅಂಥವರನ್ನು ನಂಬಿ ಕೈಚೆಲ್ಲಿ ಕುಳಿತುಕೊಳ್ಳಬಾರದು. ಸಮಾನ ಮನಸ್ಕರು, ಕ್ಷೇತ್ರದ ಅಭಿವೃದ್ಧಿಯಲ್ಲಿ ಆಸಕ್ತರಾದವರು, ಚಿಂತನ ಶೀಲರು ಒಟ್ಟಿಗೆ ಸೇರಿ ಸೂಕ್ತ ಮಾರ್ಗ ಹುಡುಕಿ ಕೂಡಲ ಸಂಗಮವನ್ನು ಸರ್ವಾಂಗೀಣವಾಗಿ ಬೆಳೆಸುವ ಯೋಜನೆ ಹಾಕಬೇಕು ಇಲ್ಲವೆ ಬಲವಾದ ಒತ್ತಡ ತಂದು ಸರ್ಕಾರದಿಂದ ಕೆಲಸ ಮಾಡಿಸಿಕೊಳ್ಳಬೇಕು. ಮಗು ಅಳದ ಹೊರತು ತಾಯಿ ಸಹ ಹಾಲು ಕೊಡುವುದಿಲ್ಲ ಅಲ್ಲವೆ?

ಆದ್ದರಿಂದ ಶ್ರೀಮತಿ ಪಟ್ಟಣಶೆಟ್ಟಿ ಅವರಂಥ ವಿದ್ಯಾವಂತರು, ಚಿಂತನ ಶೀಲರು, ವಿವಾದಾತ್ಮಕ ಬರಹಗಳನ್ನು ಬರೆಯುವುದರಲ್ಲಿ ಸಮಯ ವ್ಯರ್ಥ ಮಾಡದೆ, ವರದಿ ಅನುಷ್ಠಾನ ಕುರಿತು ವಿವರವಾಗಿ ಚಿಂತನೆ ಮಾಡಿ ಸರ್ಕಾರದ ಮೇಲೆ ಒತ್ತಡ ತರುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಯೋಗ್ಯವಾದುದು.

<u>ಹಿಂಬರಹ:</u> ಈ ಲೇಖನ ಸಿಕ್ಕಿದ್ದು ಅತ್ಯಂತ ಆಕಸ್ಮಿಕ. ಇದರಲ್ಲಿ ಬರುವ ಒಂದು ಅಂಶ ಗಮನಾರ್ಹ 26-3-1993ರವರೆಗೆ ಸಹ ಸರ್ಕಾರವು ಕೂಡಲ ಸಂಗಮದ ಅಭಿವೃದ್ಧಿಗಾಗಿ ಏನೇನೂ ಮಾಡಿರಲಿಲ್ಲ. ವರದಿ ಆಗಿದ್ದು ಜೂನ್1988ರಲ್ಲಿ. ನಾವು ಜಮೀನು ಖರೀದಿಸಿದ್ದು ಜುಲೈ 1987ರಲ್ಲಿ. 1993ರ ಹೊತ್ತಿಗೆ ಆಗಲೇ ಆರು ಶರಣ ಮೇಳಗಳು ನಡೆದಿದ್ದವು. 50 ಕೋಣೆಗಳ ಅಕ್ಕನಾಗಲಾಂಬಿಕಾ ಶರಣ ಧಾಮ ಸಿದ್ಧವಾಗಿತ್ತು.

ಕೂಡಲ ಸಂಗಮದವರು ಸಹಕರಿಸಲಿಲ್ಲ, ಬಸವನ ಬಾಗೇವಾಡಿಯವರು ಸಹಕರಿಸಿದರು ಎಂದು ಶ್ರೀ ಶಿವಾನಂದ ಜಾಮದಾರ 1 ವರ್ಷದ ಹಿಂದೆ ಪ್ರಿಂಟಾಗಿದ್ದ ಪುಸ್ತಕವನ್ನು ಈಗ ಬಿಡುಗಡೆ ಮಾಡಿ ಪತ್ರಿಕೆಗಳ ಮೂಲಕ ದೂಷಿಸಿದ್ದಾರೆ. ಉತ್ಕೃಷ್ಟವಾದ ನದಿ ದಂಡೆಯ ಜಮೀನನ್ನು ಮತ್ತು ಕೂಡಲ ಸಂಗಮದ ಸುತ್ತಲಿನ ಜಮೀನನ್ನು ಕಳೆದುಕೊಂಡು ತ್ಯಾಗ ಮಾಡಿದವರು ಸಂಗಮದ ಜನರು. ಆರಂಭದಲ್ಲಿ ಸರ್ಕಾರ ಕೊಡುತ್ತಿದ್ದ ಬೆಲೆ ತೀರಾ ಕಡಿಮೆ. ಹಿನ್ನೀರು ನಿಲ್ಲತೊಡಗಿದಾಗ, ಜನರಿಗೆ ಪುನರ್ವಸತಿಯನ್ನು ಬೇಗನೆ ಮಾಡದೇ ಇದ್ದಾಗ ಜನರು ಸೊಳ್ಳೆ, ಹುಳು-ಹುಪ್ಪಟೆಗಳ ಕಾಟದಿಂದ ಬಹಳಷ್ಟು ಬಾಧೆ ಪಟ್ಟರು. ಒಂದು ದೊಡ್ಡ ಟ್ಯಾಂಕ್ ಕಟ್ಟಿಸಿದರ್ಥಾದರೂ ಸರ್ಕಾರವು ಅದಕ್ಕೆ ನೀರನ್ನು ತುಂಬಲೇ ಇಲ್ಲ. ಎಷ್ಟೋ ವರ್ಷಗಳ ಕಾಲ ಕೂಡಲ ಸಂಗಮದ ಜನರು ಕುಡಿಯುವ ನೀರಿಗೂ ತೊಂದರೆ ಪಟ್ಟರು.

ಸರ್ಕಾರವು ಬರಬಾರದೆಂದು ನಾವು ಮತ್ತು ಕೂಡಲ ಸಂಗಮದ ಕೆಲವು ಮುಖಂಡರು ಪ್ರಯತ್ನಿಸಿದರೆಂದು ಶ್ರೀ ಜಾಮದಾರ ಅಪ್ಪಟ ಸುಳ್ಳನ್ನು ಹೇಳಿದ್ದಾರೆ. ಸಂಗಮೇಶ್ವರ ದೇವಾಲಯ ಅಭಿವೃದ್ಧಿ ಹೊಂದದೆ ಇರಲು ವಂಶ ಪಾರಂಪರ್ಯ ಆಡಳಿತ, ಆದಾಯ ಹಂಚಿಕೊಳ್ಳುವಿಕೆ ಕಾರಣ. ಸರ್ಕಾರ ಆಡಳಿತವನ್ನು ವಹಿಸಿಕೊಳ್ಳಬೇಕೆಂದು ಆಗ್ರಹಿಸಿದವರೇ ನಾವು!

ಸರ್ಕಾರವು ಅಭಿವೃದ್ಧಿ ಕಾರ್ಯ ಮಾಡಬಾರದೆಂದು ನಾವು ಹೈಕೋರ್ಟ್‌ನಿಂದ 5 ಸಲ ತಡೆಯಾಜ್ಞೆ ತಂದಿದ್ದೇವೆಂದು ಜಾಮದಾರ ಘನಘೋರ ಸುಳ್ಳು ಹೇಳಿದ್ದಾರೆ. ಬಸವ ಧರ್ಮ ಪೀಠ, ಸಂಗಮೇಶ್ವರ ಬೋರ್ಡಿಂಗ್ ಸೇರಿದಂತೆ 5 ಜಮೀನಿನ ಮಾಲಿಕರು ನಮ್ಮವು ಸಾರ್ವಜನಿಕ ಉದ್ದೇಶದ ಮತ್ತು ಧಾರ್ಮಿಕ ಸಂಸ್ಥೆಯಾದ ಕಾರಣ ಸರ್ಕಾರ ಮಾಡುವ (ಮತ್ತು ಮಾಡದೆ ಇರುವ) ಕಾರ್ಯಗಳನ್ನು ನಾವು ಮಾಡುವ ಕಾರಣ ನಮ್ಮ ಜಮೀನು ವಶಪಡಿಸಿಕೊಳ್ಳಬಾರದೆಂದು ಉನ್ನತ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದುಕೊಂಡೆವು.

ಗ್ರಾಮವು ಪುನರ್ವಸತಿಯಾಗುವ ಸ್ಥಳ ಹಳೆಯ ಊರಿನಿಂದ, ಮುಖ್ಯವಾಗಿ ದೇವಾಲಯದಿಂದ ತುಂಬಾ ದೂರ ಹೋಗಬಾರದೆಂದು, ಅಲ್ಲಿಗಾಗಲೇ ವಶಪಡಿಸಿಕೊಂಡ ಕೃಷಿ ಭೂಮಿಯು ಪಾಳು ಬಿದ್ದು ವ್ಯರ್ಥವಾಗುತ್ತಿರುವಾಗ ಮತ್ತಷ್ಟು ಭೂಮಿಯನ್ನು ನಾಶ ಪಡಿಸುವುದೇಕೆ? ಜನರು ತುಂಬಾ ಸಮಯದ ನಂತರ ಹಿನ್ನೀರು ಕಂಡಿದ್ದಾರೆ. ಭೂಮಿ ಫಲವತ್ತಾಗಿದೆ. ಕೃಷಿ ಭೂಮಿಯನ್ನು

ಹಾಳು ಮಾಡಬೇಡಿ ಎಂದು ಪುನಃ ಪುನಃ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಯಾವುದೇ ಅಡ್ಡಿಯನ್ನು ಉಂಟು ಮಾಡಲು ಅಥವಾ ಹೈಕೋರ್ಟಿನಲ್ಲಿ ತಡೆಯಾಜ್ಞೆ ತರುವ ಪ್ರಯತ್ನವನ್ನು ನಾವ್ಯಾರು ಮಾಡಲಿಲ್ಲ. ಏಕೆಂದರೆ ಕೂಡಲ ಸಂಗಮದ ಸರ್ವಾಂಗೀಣ ಅಭಿವೃದ್ಧಿ ನಮ್ಮ ಹೋರಾಟದ ಗುರಿಯಾಗಿತ್ತು. ಡಾ|| ಜಾಮದಾರರ ಸುಳ್ಳಿಗೆ ಧಿಕ್ಕಾರವಿರಲಿ!

(ಪ್ರಸ್ತುತ ಬರಹದಲ್ಲಿ ಇರುವ ವಿಚಾರಗಳನ್ನು ನಾವು ಸಾಕಷ್ಟು ಬಾರಿ ಬರೆದಿರುತ್ತೇವೆ. ಸಿರಿಗೆರೆಯ ತರಳುಬಾಳು ಮಠದ ಶಾಖಾಮಠದ ಅಧಿಕಾರಿಗಳಾಗಿ ಪೂಜ್ಯ ಸ್ವಾಮೀಜಿ ಬರೆದಿರುವುದು ಗಮನಾರ್ಹವಾದ ಕಾರಣ ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುತ್ತಿದೆ.)

(ಬಾಳ ಬುತ್ತಿ)

ಗುರು - ಶಿಷ್ಯ ಸಂಬಂಧ

ಹರ ಮುನಿದರೆ ಗುರು ಕಾಯ್ವನು ಎನ್ನುವ ಮಾತೊಂದಿದೆ. ಇದರರ್ಥ ದೇವರಿಗಿಂತಲೂ ಗುರುವಿನ ಸ್ಥಾನ ದೊಡ್ಡದು ಎಂದು. ದೇವರನ್ನು ಬಾಹ್ಯ ಚಕ್ಷುಗಳಿಂದ ನೋಡಿದವರು ಯಾರಿದ್ದಾರೆ? ದೇವರು ಅವರವರ ಭಾವನೆ, ಕಲ್ಪನೆ, ಊಹೆಗೆ ಬಿಟ್ಟಿದ್ದು. ಆದರೆ ಗುರು ಹಾಗಲ್ಲ. ಅವನು ನಮ್ಮ ಕಣ್ಣೆದುರೇ ಇರುತ್ತಾನೆ. ಭಕ್ತರ ನೋವು ನಲಿವು ಏನೆಂದು ಕೇಳುತ್ತಾನೆ. ಸಾಧ್ಯವಾದ ಪರಿಹಾರ ನೀಡುತ್ತಾನೆ. ಅವನು ಭಕ್ತರನ್ನು ಅಜ್ಞಾನದ ಅಂಧಕಾರದಿಂದ ಸುಜ್ಞಾನದ ಬೆಳಕಿನೆಡೆಗೆ ಕರೆದುಕೊಂಡು ಹೋಗಬಲ್ಲ. ಆ ಕಾರಣದಿಂದ ಅವನಿಗೆ ದೇವರಿಗಿಂತಲೂ ಮಿಗಿಲಾದ ಸ್ಥಾನ.

ಗುರು ತನ್ನ ಗುರುತ್ವವನ್ನು ಉಳಿಸಿಕೊಳ್ಳಬೇಕೆಂದರೆ ಅವನು ಮೊದಲು ಸುಜ್ಞಾನಿ ಆಗಬೇಕಾದುದ್ದು ಅನಿವಾರ್ಯ. ಜೊತೆಗೆ ಬಸವಣ್ಣನವರು ಹೇಳುವಂತೆ ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎನ್ನುವ ಹೃದಯ ವೈಶಾಲ್ಯತೆ ಬೆಳಸಿಕೊಂಡು ಭಕ್ತರಲ್ಲೂ ಆ ಗುಣವನ್ನು ಬೆಳಸಲು ಪ್ರಯತ್ನಿಸಬೇಕು. ಆಗ ಗುರು-ಶಿಷ್ಯ ಸಂಬಂಧಕ್ಕೆ ಮೆರುಗು ಬರುವುದು. ನಿಜವಾದ ಗುರುವನ್ನು ನಂಬಬೇಕು. ಇದರಿಂದ ಉಭಯತರಿಗೂ ಒಳಿತಾಗಿ ಅದರ ಫಲವಾಗಿ ಮಠ ಮತ್ತು ಸಮಾಜ ಅಭಿವೃದ್ಧಿ ಹೊಂದುವುದು.

ಗುರುವಾದವನು ಸಾಮಾಜಿಕ ಸಂಘಟನೆಗೆ ಒತ್ತು ಕೊಡಬೇಕು. ಸಂಘಟನೆ ಮಾಡುವುದು ಎಂದರೆ ಕೇವಲ ತಾನು ಪ್ರತಿನಿಧಿಸುವ ಮಠದ ಶಿಷ್ಯರ ಸಂಘಟನೆ ಅಲ್ಲ. ಅಂಥ ಸಂಘಟನೆ ಜಾತಿಯ ವೈಷಮ್ಯಕ್ಕೆ ಕಾರಣವಾಗಿ ಸಾಮಾಜಿಕ ಆರೋಗ್ಯವನ್ನು ಹಾಳು ಮಾಡುವುದು. ಸಂಘಟನೆ ಎಂದರೆ ಮತ್ತೊಬ್ಬರ ವಿರುದ್ಧ ಜನರನ್ನು ಎತ್ತಿ ಕಟ್ಟುವುದಲ್ಲ. ಸರ್ವ ಜನಾಂಗದ ಪ್ರೀತಿ ವಿಶ್ವಾಸ ಗಳಿಸಿ ಅವರಲ್ಲಿ ಇರಬಹುದಾದ ಸಂಕುಚಿತತೆಯನ್ನು ಹೋಗಲಾಡಿಸುವುದು. ಸಮಾನತೆಯ ತತ್ವದ ಮೇಲೆ ಸುಂದರ ಸಮಾಜದ ನಿರ್ಮಾಣಕ್ಕೆ ನಾಂದಿ ಹಾಡುವುದು. ಯಾವ ಸಮಾಜವೂ ಕೇವಲ ಜಾತಿ, ಅಧಿಕಾರ, ಹಣದಿಂದ ಶ್ರೀಮಂತವಾಗದು. ಸಂಸ್ಕೃತಿ ಸಂಸ್ಕಾರದಿಂದ ಸಮಾಜ ಶ್ರೀಮಂತವಾಗಬೇಕು. ಆ ಕೆಲಸವನ್ನು ನಿಜವಾದ ಗುರು- ಶಿಷ್ಯರು ಮಾಡಬೇಕು.

ಇವತ್ತು ಮಠವನ್ನು ಮತ್ತು ಅಲ್ಲಿರುವ ಸ್ವಾಮಿಗಳನ್ನು ಅಳೆಯುವ ಮಾನದಂಡ ಬದಲಾಗಬೇಕಾಗಿದೆ. ಆ ಸ್ವಾಮಿಗಳ ಮಠದ ಆಸ್ತಿ ಎಷ್ಟಿದೆ? ಅವರಿಗೆ ಎಷ್ಟು ಜನ ಭಕ್ತರು ಇದ್ದಾರೆ? ಎಂತೆಂಥ ವಿದ್ಯಾಸಂಸ್ಥೆಗಳನ್ನು ತೆರೆದಿದ್ದಾರೆ? ರಾಜಕಾರಣಿಗಳ ಸಂಪರ್ಕ ಹೇಗಿದೆ? ಇಂಥ ಕೆಲವು ವಿದ್ಯಮಾನಗಳನ್ನು ಅವಲಂಭಿಸಿ ಸ್ವಾಮಿತ್ವ ಅಳೆಯುವುದು ನಿಜಕ್ಕೂ ಸರಿಯಲ್ಲ. ಸ್ವಾಮೀಜಿ ಆಗುವುದು ಬಾಹ್ಯ ಸಂಪತ್ತಿನಿಂದ ಅಲ್ಲ. ಆಂತರಿಕ ಬೆಳವಣಿಗೆ, ಸಾಮಾಜಿಕ ಚಿಂತನೆ, ಧಾರ್ಮಿಕ ನೆಲಗಟ್ಟಿನ ಆಧಾರದಿಂದ. ಇದನ್ನು ಸ್ವಾಮಿಗಳು ಮತ್ತು ಶಿಷ್ಯರು ಗಮನಿಸದಿದ್ದರೆ ಅಂಥ ಸ್ವಾಮಿಗಳು ಬೇರೆಯವರನ್ನು ಇರಲಿ ತಮ್ಮನ್ನೇ ತಾವು ಕಾಯ್ದುಕೊಳ್ಳಲಾರರು. ಅಂಥವರಿಂದ ಭಕ್ತರ ಉದ್ಧಾರವೂ ಆಗದು.

- ಶ್ರೀ ಪಂಡಿತಾರಾಧ್ಯ ಸ್ವಾಮೀಜಿ

(ಪ್ರಜಾವಾಣಿ, 24-3-2007ರ ಸಂಚಿಕೆ)

(ಇದರಲ್ಲಿ ಕೆಲವು ಮಾತುಗಳು ಸಿರಿಗೆರೆ ಮಠಕ್ಕೆ ಹಿತೋಪದೇಶದಂತಿರುವುದು ಗಮನಾರ್ಹ - ಮಾತಾಜಿ)

ಕಲ್ಯಾಣ ಪರ್ವದಲಿ ಮೊಳಗಿದ "ಲಿಂಗದೇವ" ಶರಣ ಭೂಮಿಯಲ್ಲಿ ಆದಿ ಶರಣರ ಸ್ಮರಣೆ

ಲಿಂಗಾಯತ ಧರ್ಮ ಸಂಸ್ಥಾಪಕ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾದ ಬಸವ ಕಲ್ಯಾಣದಲ್ಲಿ ಮೇ 1, 2 ಮತ್ತು 3ರ ವರೆಗೆ ಜರುಗಿದ ಆರನೆಯ ಕಲ್ಯಾಣ ಪರ್ವ ಅಭೂತ ಪೂರ್ವವಾಗಿ ಜರುಗಿ, ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವಂಥದಾಗಿದೆ.

ಕನ್ನಡ ನಾಡಿನ ವಿವಿಧ ಭಾಗಗಳಿಂದ ಮಾತ್ರವಲ್ಲ ನೆರೆಯ ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ನವದೆಹಲಿಯಿಂದ ಆಗಮಿಸಿ ಕಲ್ಯಾಣದಲ್ಲಿ ಸಂಗಮಗೊಂಡಿದ್ದ ಸಹಸ್ರಾರು ಶರಣ-ಶರಣೆಯರು ಕಲ್ಯಾಣ ನಾಡಿನಲ್ಲಿ ಸಂಪನ್ನಗೊಂಡ ಈ ಮಹಾ ಪರ್ವಕ್ಕೆ ಸಾಕ್ಷಿಯಾದರು.

12ನೆಯ ಶತಮಾನದಲ್ಲಿ ಇದೇ ಪವಿತ್ರ ಭೂಮಿಯಲ್ಲಿ ದೇಶದ ವಿವಿಧ ಭಾಗಗಳಿಂದ ಬಂದ ಕಾಯಕ ಜೀವಿಗಳು, ಅನುಭಾವಿಗಳು, ಮುಮುಕ್ಷುಗಳು ಶ್ರೀ ಗುರು ಬಸವಣ್ಣನವರ ನೇತೃತ್ವದಲ್ಲಿ ಸಮ್ಮಿಲನಗೊಂಡು ಅನುಭವ ಮಂಟಪವೆಂಬ ಆದರ್ಶ ಸಂಸತ್ತಿನಲ್ಲಿ ನಡೆಸಿದ ಚಿಂತನ-ಮಂಥನಗಳಿಂದ ವಚನ ಸಾಹಿತ್ಯವೆಂಬ ಜಾಗತಿಕ ಸಂವಿಧಾನವನ್ನು ರೂಪಿಸಿದರು. ಅಂಥ ಸಾಹಿತ್ಯವೇ ನವ ನವೀನ ಲಿಂಗಾಯತ ಧರ್ಮ ವಿಶ್ವದಾದ್ಯಂತ ಪ್ರಸರಣಗೊಳ್ಳಲು ಕಾರಣವಾಯಿತು. ಪುರೋಹಿತ ಶಾಹಿಗಳಿಂದ ತೀವ್ರ ಪ್ರತಿರೋಧ -ಹಿಂಸೆ ಪ್ರಾರಂಭವಾದಾಗ ತಮ್ಮ ಪ್ರಾಣವನ್ನು ಲೆಕ್ಕಿಸದೇ ಹೋರಾಡಿ ಅರಣ್ಯ ಮಧ್ಯದ ಗವಿಗಳಲ್ಲಿ ವಚನ ಸಾಹಿತ್ಯವನ್ನು ಸಂರಕ್ಷಿಸಿದರು. ಆದಿ ಶರಣರ ಮಹೋನ್ನತ ತ್ಯಾಗ-ಬಲಿದಾನಗಳನ್ನು ಸ್ಮರಿಸಿ ಅವರಿಗೆ ಗೌರವಾರ್ಪಣೆ ಗೈಯುವುದು ಪ್ರತಿಯೊಬ್ಬ ಪ್ರಜ್ಞಾವಂತ ಲಿಂಗಾಯತ ಧರ್ಮ ಬಂಧುವಿನ ಆದ್ಯ ಕರ್ತವ್ಯ. ಆದ್ದರಿಂದಲೇ ಅನುಭವ ಮಂಟಪದ 770 ಅಮರ ಗಣಂಗಳ ಸಂಸ್ಮರಣೆ ಕಲ್ಯಾಣ ಪರ್ವದ ಬಹು ಮುಖ್ಯ ಧಾರ್ಮಿಕ ವಿಧಿ. ದಿ.2 ರಂದು ಅತ್ಯಂತ ಹೃದಯ ಸ್ಪರ್ಶಿಯಾಗಿ ನಡೆದ ಆದಿ ಶರಣರ ಸ್ಮರಣೆ ಆಧ್ಯಾತ್ಮಿಕ ದಿವ್ಯಾನುಭೂತಿಯನ್ನೇ ಧರೆಗಿಳಿಸಿತು. ಸಹಸ್ರಾರು ಪ್ರತಿನಿಧಿಗಳು ಬಸವ ಮಂತ್ರ ಸಹಿತ ಷಟ್ಕೋನ ಲಾಂಛನವುಳ್ಳ ಮೇಲು ವಸ್ತ್ರ ಧರಿಸಿ ಶಿಸ್ತಿನಿಂದ ಕುಳಿತು ಧರ್ಮಗುರು ಬಸವಣ್ಣನವರಾದಿಯಾಗಿ ಎಲ್ಲ ಅಮರ ಗಣಂಗಳನ್ನು ಭಕ್ತಿಯಿಂದ ಸ್ಮರಿಸಿದ ದೃಶ್ಯ ರೋಮಾಂಚನ ಉಂಟು ಮಾಡಿತು.

ಬಸವ ಮಹಾಮನೆಯ ಆವರಣದಲ್ಲಿ ಹಾಕಲಾಗಿದ್ದ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾ ಸ್ವಾಮೀಜಿ ಮಹಾ ಮಂಟಪದ ಹುತಾತ್ಮ ಹರಳಯ್ಯ ವೇದಿಕೆಯಲ್ಲಿ ಕಾಯಕ ದಿನವಾದ ಮೇ 1 ರಂದು ಶುಭಾರಂಭಗೊಂಡ ಕಲ್ಯಾಣ ಪರ್ವ ಮೂರು ದಿನಗಳವರೆಗೆ ಕಲ್ಯಾಣದಲ್ಲಿ ಅಕ್ಷರಶಃ ಹಬ್ಬದ ವಾತಾವರಣ ಸೃಷ್ಟಿಸಿತು. ಪ್ರಥಮ ದಿನದ ಉದ್ಘಾಟನಾ ಸಮಾರಂಭದಲ್ಲಿ ಪ್ರಸ್ತಾವನೆ ನೀಡಿದ ಉತವದ ಕೇಂದ್ರ ಬಿಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು - ವಿಶ್ವಸಹೋದರತ್ವ ಸಾರುವ ಉದ್ದೇಶದಿಂದ ಗುರು ಬಸವಣ್ಣನವರ ನೇತೃತ್ವದಲ್ಲಿ 12ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಮಹಾನ್ ಕ್ರಾಂತಿ ನಡೆಯಿತು. ಸಮಾನತೆ ಸಾರುವ ವಚನ ಸಾಹಿತ್ಯವನ್ನು ಸಂರಕ್ಷಿಸಲು ಅಂದು ಬಸವಾದಿ ಪ್ರಮಥರು ನೀಡಿದ ತತ್ವಗಳನ್ನು ವಿಶ್ವದಾದ್ಯಂತ ಪ್ರಸಾರ ಮಾಡುವುದು ಕಲ್ಯಾಣ ಪರ್ವದ ಮುಖ್ಯ ಉದ್ದೇಶ ಎಂದು ಸ್ಪಷ್ಟಪಡಿಸಿದರು.

ಜಾತಿ ಮತಗಳ ಹೆಸರಿನಲ್ಲಿ ಎಲ್ಲಾ ಕಡೆಗಳಲ್ಲಿ ನಿರ್ಮಾಣವಾಗಿರುವ ಗೊಂದಲಮಯ ಪರಿಸ್ಥಿತಿಯಲ್ಲಿ ಶ್ರೀ ಗುರು ಬಸವಣ್ಣನವರ ತತ್ವಗಳು ಅತ್ಯಂತ ಅವಶ್ಯಕವಾಗಿವೆ. ಕೂಡಲ ಸಂಗಮ ಹಾಗೂ ಶರಣ ಭೂಮಿ ಬಸವ ಕಲ್ಯಾಣ ಕ್ಷೇತ್ರಗಳು ಬಸವ ಭಕ್ತರಿಗೆ ಎರಡು ಕಣ್ಣುಗಳಿದ್ದಂತೆ. ಧರ್ಮ ಕ್ಷೇತ್ರವಾದ ಕೂಡಲ ಸಂಗಮವು ಇಂದು ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿ ಬೆಳೆಯುತ್ತಿದೆ. ಬಸವ ಕಲ್ಯಾಣವೂ ಸಹ ಅದೇ ಮಾದರಿಯಲ್ಲಿ ಅಭಿವೃದ್ಧಿಯಾಗಬೇಕು ಎನ್ನುವದು ತಮ್ಮ ಸಂಕಲ್ಪವಾಗಿದೆ ಎಂದರು. ಬಸವಣ್ಣನವರು ಜನಿಸಿದ್ದು ಶೈವ ಬ್ರಾಹ್ಮಣ ಮನೆತನದಲ್ಲಿಯೇ ವಿನಾ ಮಾದಿಗರಲ್ಲಿ ಅಲ್ಲ ಎಂದು ಖಡಾಖಂಡಿತವಾಗಿ ನುಡಿದ ಮಾತಾಜಿ ಬಂಜಗೆರೆ ಜಯಪ್ರಕಾಶ ತಮ್ಮ ಅಸಂಬದ್ಧ ತರ್ಕವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು. ಕಲ್ಯಾಣಪರ್ವವನ್ನು ಉದ್ಘಾಟಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ

ಗಂಗಾದೇವಿಯವರು ಆಶೀರ್ವಚನ ನೀಡಿ, ಕಳೆದ ಮೂರು ತಿಂಗಳಿಂದ ತಾವು ಕಲ್ಯಾಣ ಜ್ಯೋತಿ ಯಾತ್ರೆಯನ್ನು ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರದಿಂದ ಮಾಡುತ್ತಾ ಬರುವಾಗ ಎಲ್ಲಾ ಕಡೆಗಳಿಂದಲೂ ಉತ್ತಮ ಪ್ರತಿಕ್ರಿಯೆ ದೊರೆತಿದೆ ಎಂದು ತಮ್ಮ ಅನುಭವಗಳನ್ನು ವಿವರಿಸಿದರು.

ಮಹಾರಾಷ್ಟ್ರ ರಾಜ್ಯದ ಅಲ್ಲಮ ಪ್ರಭು ಗಿರಿಯಿಂದ ಶ್ರೀ ಬಸವ ಲಿಂಗ ಸ್ವಾಮಿಗಳ ನೇತೃತ್ವದಲ್ಲಿ ಆಗಮಿಸಿದ ಅಲ್ಲಮ ಪ್ರಭು ಜ್ಯೋತಿಯನ್ನು ಹಾಗೂ ಮಲೆ ಮಹದೇಶ್ವರ ಬೆಟ್ಟದಿಂದ ಗಂಗಾ ಮಾತಾಜಿಯವರ ನೇತೃತ್ವದಲ್ಲಿ ಆಗಮಿಸಿದ ಮಲೆಯ ಮಹದೇಶ್ವರ ಜ್ಯೋತಿಯನ್ನು ಪೂಜ್ಯ ಮಾತಾಜಿಯವರು ವೇದಿಕೆಗೆ ಬರಮಾಡಿಕೊಂಡರು. ಶರಣ. ಎಸ್. ಪುಟ್ಟರುದ್ರ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅಂದು ಸಂಜೆ ಅಲ್ಲಮ ಪ್ರಭು ಯೋಗ ಪೀಠದ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ಜರುಗಿದ ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿಯನ್ನು ನವದೆಹಲಿ ಬಸವ ಮಂಟಪದ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ಉದ್ಘಾಟಿಸಿದರು. ವಚನ ಸಾಹಿತ್ಯದ ಮೂಲಕ ಅಂಧ ಶ್ರದ್ಧೆ ನಿವಾರಣೆ ವಿಷಯ ಕುರಿತು ಉಪನ್ಯಾಸ ನೀಡಿದ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ ಎಸ್.ದಿವಾಕರ್ ವಚನ ಸಾಹಿತ್ಯದ ಮೌಲ್ಯವನ್ನು ಅರ್ಥ ಪೂರ್ಣವಾಗಿ ವಿವರಿಸಿದರಲ್ಲದೆ ವಚನ ಸಾಹಿತ್ಯದ ಅಧ್ಯಯನದಿಂದ ಪ್ರಜ್ಞಾವಂತ ಪ್ರಗತಿಪರ ವಿಚಾರಗಳ ವ್ಯಕ್ತಿಯಾಗುತ್ತಾನೆ ಎಂದರು.

ದಿ.2ರಂದು ಬೆಳಿಗ್ಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ವೈಭವದಿಂದ ಜರುಗಿತಲ್ಲದೆ ನಂತರ ಪೂಜ್ಯ ಮಾತಾಜಿಯವರ ಸನ್ನಿಧಿಯಲ್ಲಿ 770 ಅಮರ ಗಣಂಗಳ ನಾಮ ಸ್ಮರಣೆ "ಶರಣರಿಗೆ ಶರಣಾರ್ಥಿ" ಕಾರ್ಯಕ್ರಮ ದೈವೀಕಾರುಣ್ಯವನ್ನೇ ಧರೆಗಿಳಿಸಿದಂತಿತ್ತು. 12ನೆಯ ಶತಮಾನದಲ್ಲಿ ಇದೇ ಕಲ್ಯಾಣ ನಾಡಿನಲ್ಲಿ ಲಿಂಗಾಯತ ಧರ್ಮದ ಸಂಸ್ಥಾಪನೆಯ ಮಹಾ ಮಣಿಹಕ್ಕೆ ಶ್ರೀ ಗುರು ಬಸವಣ್ಣನವರೊಂದಿಗೆ ಅನುಭವ ಮಂಟಪದಲ್ಲಿ ಸಮಾಗಮ ಗೊಂಡಿದ್ದ 770 ಅಮರ ಗಣಂಗಳನ್ನು ಸ್ಮರಿಸಿ ಅವರಿಗೆ ಕೃತಜ್ಞತೆ ಅರ್ಪಿಸಿದ್ದು ಈ ಕಲ್ಯಾಣ ಪರ್ವದ ಬಹು ಮುಖ್ಯ ಧಾರ್ಮಿಕ ಕಟ್ಟಳೆಯಾಗಿತ್ತು. ಪೂಜ್ಯ ಮಾತಾಜಿಯವರು, ವಚನ ದುಂದುಭಿ ಎನ್ನುವ ಲಿಂಗಾಯತ ಧರ್ಮದ ಬಗ್ಗೆ 1000 ಪ್ರಶ್ನೋತ್ತರಗಳನ್ನೊಳಗೊಂಡ ಪುಸ್ತಕವನ್ನು ಬಿಡುಗಡೆ ಮಾಡಿ ಪ್ರವಚನ ನೀಡಿದರು.

ಸಂಜೆ ಪೂಜ್ಯ ಮಾತಾಜಿಯವರ ಸನ್ನಿಧಿಯಲ್ಲಿ ಜರುಗಿದ ರಾಷ್ಟ್ರೀಯ ಬಸವ ದಳದ ಮಹಾ-ಧಿವೇಶನವನ್ನು ಹಾಗು ಕಾಯಕ ಕಲಿ ಮಡಿವಾಳ ಮಾಚಿದೇವರ ಜಯಂತಿಯ ಉದ್ಘಾಟನೆಯನ್ನು ಆಜಾದಿ ಬಚಾವ್ ಆಂದೋಲನದ ಮುಖ್ಯಸ್ಥ ರಾಜೀವ್ ದೀಕ್ಷಿತ್ ನೆರವೇರಿಸಿ ಮಾತನಾಡಿ ಶ್ರೀ ಗುರು ಬಸವಣ್ಣನವರಂತಹ ವ್ಯಕ್ತಿ ಕೇವಲ ಭಾರತಕ್ಕೆ ಮಾತ್ರ ಸೀಮಿತವಲ್ಲ, ಅವರು ವಿಶ್ವಮಾನ್ಯ ವಿಶ್ವವಂದ್ಯ ವ್ಯಕ್ತಿಯಾಗಿದ್ದಾರೆ. ನಮ್ಮ ದೇಶದ ಕಾನೂನು, ಲೋಕ ಸಭೆ ಇವೆಲ್ಲ ಇಂಗ್ಲೆಂಡಿನ ಕೊಡುಗೆ ಎಂಬ ಭ್ರಾಂತಿ ಇತಿಹಾಸಕಾರರಲ್ಲಿದೆ. ಆದರೆ ನಾವಿಂದು ಸ್ಪಷ್ಟವಾಗಿ ಅರ್ಥೈಸಿಕೊಳ್ಳಬೇಕಾದುದೇನೆಂದರೆ ಅನುಭವ ಮಂಟಪವು ಇಡೀ ಜಗತ್ತಿನಲ್ಲಿಯೇ 850 ವರ್ಷಗಳ ಹಿಂದೆ ರೂಪುಗೊಂಡ ಮಾದರಿ ಲೋಕ ಸಭೆಯಾಗಿದೆ. ವಚನ ಸಾಹಿತ್ಯವು ಜಾಗತಿಕ ಸಂವಿಧಾನವಾಗಿದೆ. ಬಸವಣ್ಣನವರ ವಿಚಾರಧಾರೆಯಂತೆ ನಮ್ಮ ದೇಶದ ಆರ್ಥಿಕ ಧೋರಣೆಗಳು ರೂಪುಗೊಂಡರೆ ನಮ್ಮ ದೇಶ ವಿಶ್ವದ ಅತ್ಯಂತ ಸಂಪದ್ಭರಿತ ರಾಷ್ಟ್ರವಾಗುವುದರಲ್ಲಿ ಸಂದೇಹವಿಲ್ಲ ಎಂದರಲ್ಲದೆ ಬಸವಣ್ಣನವರ ವಿಚಾರಗಳನ್ನು ಉತ್ತರ ಭಾರತಕ್ಕೂ ಪರಿಚಯಿಸಿದ್ದು ಮಾತ್ರವಲ್ಲ ವಿದೇಶಗಳಲ್ಲಿ ಯಶಸ್ವಿಯಾಗಿ ಪ್ರಚಾರ ಮಾಡಿದ ಕೀರ್ತಿ ಪೂಜ್ಯ ಮಾತಾಜಿಯವರಿಗೆ ಸಲ್ಲುತ್ತದೆ ಎಂದು ರಾಜೀವ್ ದಿಕ್ಷಿತ್ ಹೇಳಿದರು. ಬೀದರ್ ಜಿಲ್ಲಾ ವಕೀಲ ಸಂಘದ ಅಧ್ಯಕ್ಷ ಗಂಗಶೆಟ್ಟಿ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ಬೀದರ್ ದಲಿತ ನೇತಾರ ಪಾಂಡುರಂಗ ಸೂರ್ಯವಂಶಿ ಮಾತನಾಡಿ ಭಾರತ ದೇಶದಲ್ಲಿ ದಲಿತೋದ್ಧಾರ ಗೈದ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತಂದ ಪ್ರಪ್ರಥಮ ವ್ಯಕ್ತಿ ಗುರು ಬಸವಣ್ಣನವರು ಎಂದು ಕೊಂಡಾಡಿದರು. ಆಂಧ್ರ ಪ್ರದೇಶರಾ.ಬ.ದಳದ ಕಾರ್ಯಾಧ್ಯಕ್ಷ ಹೈದರಾಬಾದಿನ ಧನರಾಜ ಜೀರಿಗೆ ಮತ್ತು ಬೆಳಗಾವಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಹಿರಿಯ ಎಲ್.ಐ.ಸಿ ಅಧಿಕಾರಿ ಕೆ.ಬಸವರಾಜ ಮುಂತಾದವರು ಉಪಸ್ಥಿತರಿದ್ದರು. ದಿ. 3ರಂದು ಬೆಳಿಗ್ಗೆ ಬಸವ ಕಲ್ಯಾಣದ ಕೋಟೆಯಿಂದ ಪ್ರಾರಂಭಗೊಂಡ ಬೃಹತ್ ಪಥ ಸಂಚಲನ 3 ಕಿ.ಮಿ ಉದ್ದದವರೆಗೂ ಸಾಗಿ ಐತಿಹಾಸಿಕ ದಾಖಲೆಯಾಗಿ ಮಾರ್ಪಟ್ಟಿತು.

ಸುಮಾರು ಹತ್ತು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿದ್ದ ಪ್ರತಿನಿಧಿಗಳು ಬಸವ ಮಂತ್ರ ಪಠಣ ಮಾಡುತ್ತ ಕೋಲಾಟ ಆಡುತ್ತ, ಕುಣಿದು ಕುಪ್ಪಳಿಸುತ್ತ, ಸಂಭ್ರಮದಿಂದ ನಲಿದಾಡುತ್ತ ಸಾಗಿದ ಶರಣ ಸಮೂಹದ ಶೋಭಾ ಯಾತ್ರೆ ಕಲ್ಯಾಣದಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿತು. ಪೂಜ್ಯ ಗಂಗಾ ಮಾತಾಜಿಯವರ ದಿವ್ಯ ನೇತೃತ್ವದಲ್ಲಿ ಜರುಗಿದ ಪಥ ಸಂಚಲನದಲ್ಲಿ ಪೂಜ್ಯರುಗಳು ಸೇರಿದಂತೆ ನವದೆಹಲಿಯ ರಾಜ್ಯ ಸಭಾ ಉಪ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ ಶರಣ ವೈಜನಾಥ ಬಿರಾದಾರ, ರಾಜ್ಯ ರಾ.ಬ.ದಳದ ಅಧ್ಯಕ್ಷ ವೀರಣ್ಣ ಲಿಂಗಾಯತ್ ಹಾಗೂ ಬಸವ ಕಲ್ಯಾಣದ ರಾ.ಬ.ದಳದ ಅಧ್ಯಕ್ಷ ಬಸವರಾಜ ಶಿವಪುರ ಅವರು ಭಾಗವಹಿಸಿದ್ದರು. 5 ರಾಜ್ಯಗಳಿಂದ ಸಮಾವೇಶ ಗೊಂಡಿದ್ದ ಬಸವ ಭಕ್ತರಿಂದ ತುಂಬಿ ತುಳುಕುತ್ತಿದ್ದ ಕಲ್ಯಾಣ ಮತ್ತೆ ಹನ್ನೆರಡನೆಯ ಶತಮಾನದ ವೈಭವವನ್ನು ಮರಳಿ ಪಡೆದಂತಿತ್ತು.

ನಂತರ ಮಹಾಮನೆಯ ಆವರಣದಲ್ಲಿ ಅಲ್ಲಮ ಪ್ರಭು ಶೂನ್ಯ ಪೀಠದ ದ್ವಿತೀಯ ಪೀಠಾಧಿಕಾರಿಯಾಗಿ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಪೀಠಾರೋಹಣ ಗೈದರು. ನಂತರ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರಿಗೆ ನೆರದಿದ್ದ ಸಹಸ್ರಾರು ಭಕ್ತರು ಗುರುವಂದನೆ ಸಲ್ಲಿಸಿದರು. ಈ ಸಂಭ್ರಮದ ಕಲ್ಯಾಣ ಪರ್ವದಲ್ಲಿ ಬಾಲ ಪ್ರತಿಭೆಗಳಾದ ಬೆಂಗಳೂರಿನ ಕು. ಸ್ವಾತಿ.ಎಸ್.ಮದ್ದೂರು, ಭದ್ರಾವತಿಯ ಕು.ಐಶ್ವರ್ಯ, ಖಿತಗಾವ್ ತಾಲ್ಲೋಕಿನ ಪೂರ್ಣಚಂದ್ರ, ಬಸವ ಕಲ್ಯಾಣದ ದೀಕ್ಷಾ ಸುಭಾಷ್, ಬೀದರ್‌ನ ಬಸವ ವಾಣಿ ಮತ್ತು ತಂಡದವರಿಂದ ಜರುಗಿದ ವಚನಾಭಿನಯ ಎಲ್ಲರ ಮನಸೂರೆ ಗೊಂಡಿತು. ಮಾತಾಜಿಯವರು ಸಂಪಾದಿಸಿದ ಶರಣ ವಂದನೆ, ಸಚ್ಚಿದಾನಂದ ಹಾಗೂ ಅವರ ಸಹೋದರಿ ಮಹಾದೇವಿ.ಚಟನಳ್ಳಿ ಸಂಪಾದಿಸಿದ ಷಡ್‌ಗಣಾಧೀಶರ ಗುಣಗಾನ, ವಚನ ದುಂದುಭಿ, ಎಂಬ ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು. 3 ದಿನಗಳವರೆಗೆ ಅಧ್ಯಾತ್ಮಿಕ ದಿವ್ಯಾನಂದವನ್ನು ದಯಪಾಲಿಸಿದ ಆರನೆಯ ಕಲ್ಯಾಣ ಪರ್ವ ಚರಿತ್ರೆಯ ಪುಟಗಳಲ್ಲಿ ದಾಖಲಾಯಿತು.

ವರದಿ - ಕೆ.ಎಸ್.ಕೋರಿಶೆಟ್ಟರು,
ನ್ಯಾಯವಾದಿ, ಧಾರವಾಡ

ಬಸವನ ಯುಕ್ತಿಯೇ ಯುಕ್ತಿ....... ಬಸವನ ಲೀಲೆಯೇ ಲೀಲೆ!

ಈ ಸಲ ಬಸವ ಜಯಂತಿಯಲ್ಲಿ ಜಿಲ್ಲಾಡಳಿತದವರು ನಮ್ಮ ರಾ.ಬ.ದಳದವರನ್ನು ವಿಶೇಷವಾಗಿ ಆಹ್ವಾನಿಸಿದರು. ನಾವೂ ನೂರಾರು ಸಂಖ್ಯೆಯಲ್ಲಿ ಶಿಸ್ತಿನಿಂದ ವಿಶೇಷ ರೂಪಕಗಳೊಡನೆ ಭಾಗವಹಿಸಿದೆವು. ನಮ್ಮ ಸ್ಕಾರ್ಫ್ ಮತ್ತು ಧ್ವಜಗಳು ಮೆರವಣಿಗೆಗೆ ವಿಶೇಷ ಮೆರುಗು ನೀಡಿದವು. ಮೆರವಣಿಗೆ ನಂತರ ಜಿಲ್ಲಾಡಳಿತ ಭವ್ಯ ಭವನವೊಂದರಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ರಾ.ಬ.ದಳದ ಮುಖಂಡನಾದ ನಾನು ಸಹಜವಾಗಿ ಸಭೆಯಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿದ್ದೆ. ಓರ್ವ ಬಸವ ಕೇಂದ್ರದ ವ್ಯಕ್ತಿ ವೇದಿಕೆಯ ಮೇಲೆ ಸುಳಿದಾಡುತ್ತ ಕೆಳಗೆ ಮುಂದಿನ ಸಾಲಿನಲ್ಲಿ ಕುಳಿತಿದ್ದ ನನ್ನನ್ನು ಅಸಹನೆಯಿಂದ ನೋಡುತ್ತ, "ಏನ್ರೀ ನೀವೇ ಕೂತುಬಿಡುವುದೇ? ಅಲ್ಲಿ ಒಬ್ಬ ದೊಡ್ಡ ಮನುಷ್ಯರು; ಅವರು ನಿಂತಿದ್ದಾರೆ ಕಾಣುವುದಿಲ್ಲವೆ?" ಎಂದರು ನನಗೆ ಗೊತ್ತಾಯಿತು, ಕುರ್ಚಿಯಿಂದ ನನ್ನನ್ನು ಎಬ್ಬಿಸಿ ಅಪಮಾನ ಮಾಡುವುದೇ ಆತನ ಉದ್ದೇಶವಾಗಿತ್ತು. ಇದನ್ನು ಗ್ರಹಿಸಿದ ನಾನು ಸಂತೋಷದಿಂದ ಮೇಲೆದ್ದು ನಿಂತ ವ್ಯಕ್ತಿಯ ಬಳಿಗೆ ಹೋಗಿ ಬನ್ನಿ ಕುಳಿತುಕೊಳ್ಳಿ ಎಂದು ಕುರ್ಚಿಗೆ ಕರೆದೊಯ್ದೆ. ಏನಾಶ್ಚರ್ಯ! ಅದೇ ಸಮಯಕ್ಕೆ ವೇದಿಕೆಯ ಮೇಲೆ ಸಭಾ ನಿರ್ವಹಣೆ ಮಾಡುತ್ತಿದ್ದ ಗಣ್ಯರು ಮೈಕಿನಲ್ಲಿ ನನ್ನ ಹೆಸರು ಕರೆದು ವೇದಿಕೆಗೆ ಆಹ್ವಾನಿಸಿದರು. ವೇದಿಕೆಯ ಮೇಲಿನ ಕುರ್ಚಿಯಲ್ಲಿ ನಾನು ಕುಳಿತಾಗ ಇಳಿಸಿ ಅಪಮಾನ ಮಾಡಬೇಕು ಎಂದು ವರ್ತಿಸಿದ ವ್ಯಕ್ತಿಯ ಮುಖ ಇಂಗುತಿಂದ ಮಂಗನಂತೆ ಆಗಿತ್ತು. ಬಸವ ಕೇಂದ್ರದ ಪದಾಧಿಕಾರಿಯಾದ ಆತ ನನ್ನನ್ನು ಕೆಳಗಿಳಿಸಬೇಕೆಂದು ಪ್ರಯತ್ನ ಮಾಡಿದರೆ ಗುರು ಬಸವಣ್ಣನವರು ನನ್ನನ್ನು ಇನ್ನೂ ಮೇಲಕ್ಕೆ ಕರೆಸಿಕೊಂಡರು. ಆನಂತರ ನನಗೆ ಶಾಲು ಹೊದ್ದಿಸಿ ಸತ್ಕರಿಸಿದರು; "ರಾ.ಬ.ದಳದವರಿಂದ ಮೆರವಣಿಗೆ ಅಪಾರ ಕಳೆ ಕಟ್ಟಿತು" ಎಂದು ಕೊಂಡಾಡಿದರು. ಹರಿಹರ ಮಹಾಕವಿ ಹೇಳುವ, "**ಬಸವಣ್ಣನ ಲೀಲೆಯೋ ಲೀಲೆ ಹೋ**" ಎಂಬುದು ನನ್ನ ಪ್ರತ್ಯಕ್ಷ ಅನುಭವಕ್ಕೆ ಬಂದಿತು.

-ರಾಷ್ಟ್ರೀಯ ಬಸವ ದಳದ ನಾಯಕ

ಬಾಳೊಂದು ವರ ಬದುಕೊಂದು ಕಲೆ - ಭಾಗ 3

ಮಗು- ಮನಸ್ಸು, ಮಾನವ - ಶರಣ

ಮಾನವ ಹುಟ್ಟು ಗುಣಗಳಿಂದ ಪ್ರಚೋದಿತನಾಗಿ ಬಾಳುವನು. ಹುಟ್ಟಿದ ಮಗು ಪ್ರಾಣಿಯಂತೆಯೇ ವರ್ತಿಸುವುದು. ನಾಯಿ ಮರಿ, ಪಕ್ಕಿನ ಮರಿಯಂತೆಯೇ ಮಾನವ ಮರಿಯ ವರ್ತನೆಯೂ ಇರುತ್ತದೆ. ನಂತರವೇ ಮಗುವಿಗೆ ತರಬೇತಿ ಆರಂಭವಾಗಿ ನಂತರ ಮಾನವತ್ವ ಪ್ರಾಪ್ತಿ, ಅಧ್ಯಾತ್ಮಿಕ ತರಬೇತಿಯೂ ಪ್ರಾಪ್ತವಾದರೆ ಮಾತ್ರ ಆ ಜೀವವು ಪರಿಪೂರ್ಣ ಮಾನವ - ಶರಣ ಎನ್ನಿಸಿಕೊಳ್ಳುವುದು.

"ಮನು" ಎಂಬ ಪದದಿಂದ ಮನುಷ್ಯ ಎಂಬ ಪದದ ಉಗಮ ಎಂದು ಕೆಲವರ ವಾದವಾದರೆ ಮನ, ಮನಸ್ ಎಂಬ ಪದದ ಆಧಾರದ ಮೇಲೆ ಮಾನವ ಎಂಬ ಪದದ ಉತ್ಪತ್ತಿ ಎಂದು ನಾವು ಊಹಿಸಬಹುದು. ಜಗನ್ಮಾತಾ ಅಕ್ಕಮಹಾದೇವಿ ಹೇಳುವಂತೆ, "ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ." ಮನಸ್ ಎಂಬುದು ಚಿತ್ತ, ಮನ, ಬುದ್ಧಿ, ಅಹಂ ಎಂಬ ನಾಲ್ಕು ಕರಣಂಗಳನ್ನು ಹೊಂದಿರುತ್ತದೆ. ಉಳಿದ ಪ್ರಾಣಿಗಳಲ್ಲಿ ಇಲ್ಲದ ಈ ನಾಲ್ಕು ಅಂಗಗಳಿಂದ ಕೂಡಿದ ಮನಸ್ ನಿಂದಾಗಿಯೇ ಮಾನವನಿಗೆ ಇಷೊಂದು ಕಿಮ್ಮತ್ತು. ಆದರೆ ಇದರ ನಿಜ ರೂಪ ಬಹು ವಿಲಕ್ಷಣ. ಇದನ್ನು ಅರಿಯಬೇಕಾದರೆ ಅದೇ ಆಗ ಓಡಾಡಲು ಕಲಿತ ಮಗುವನ್ನು ಗಮನಿಸಬೇಕು.

1. ವಿಕ್ಷಿಪ್ತತೆ: ಮಗು ಕುಳಿತಲ್ಲಿ ಕೂರದು, ನಿಂತಲ್ಲಿ ನಿಲ್ಲದು. ಸತತವಾಗಿ ತಿರುಗಾಡುವುದೇ ಅಲ್ಲದೆ ಅದನ್ನು ಎಳೆಯುವುದು, ಇದನ್ನು ಎಳೆಯುವುದು, ಚೆಲ್ಲುವುದು, ಕೆಡಹುವುದು, ಒಡೆಯುವುದು. ಅದರ ಕಾವಲಿಗೆ ಇರುವ ನೀವೇನಾದರೂ ಒಂದು ಕ್ಷಣ ಮೈ ಮರೆತರೆ, ದಣಿದು ಕಣ್ಣು ಮುಚ್ಚಿಕೊಂಡರೆ ಏನಾದರೂ ಅನಾಹುತ ಮಾಡಿರುವುದು. ಮನಸ್ಸಾದರೂ ಅಷ್ಟೆ ಪಂಚೇಂದ್ರಿಯಗಳ ಮೂಲಕ ಹೊರಗೆ ಹೋಗಿ ಏನೇನೆ ಅನಾಹುತ ಮಾಡುವುದು. (Conscience)ದ ಕಣ್ಣು ತಪ್ಪಿಸಲು ಯತ್ನಿಸುವುದು. ವಿವೇಕ ಎಂಬ ತಾಯಿ ಕ್ಷಣಕಾಲ ಮೈಮರೆತರೂ ಮನಸ್ಸೆಂಬ ಮಗು ಏನಾದರೂ ಅನಾಹುತವನ್ನು ಮಾಡಿಬಿಡುತ್ತದೆ.

2. ಅತಿಯಾಸೆ: ಹೊಟ್ಟೆ ತುಂಬಿರುತ್ತದೆ. ತಿನ್ನಲು ಸಾಧ್ಯವಿರುವುದಿಲ್ಲ. ಆದರೂ ಇನ್ನೊಬ್ಬರು ತಿನ್ನುತ್ತಿದ್ದರೆ ಮಗುವು ಅದನ್ನು ತಿನ್ನಲು ಪ್ರಯಾಸ ಪಡುತ್ತದೆ. ಮನುಷ್ಯನೂ ಹಾಗೆಯೇ ಆವಶ್ಯಕತೆಗಿಂತ ಮಿಗಿಲಾಗಿ ಆಸೆಯಿಂದ ತಿನ್ನುವುದೇ ಜಾಸ್ತಿ.

ಊಟದ ವಿಷಯ ಅತ್ತಲಿರಲಿ ಸಂಪತ್ತು ಸಂಗ್ರಹಣೆಯ ವಿಷಯದಲ್ಲಿ ಬಹಳ ಮುಂದೆ. ಹೊಟ್ಟೆಗೆ ಸೀಮೆಯುಂಟು; ಆಸೆಗೆ ಸೀಮೆಯೇ ಇಲ್ಲ; ನನಗೆ ಕೆಲವರನ್ನು ನೋಡಿ ಅಚ್ಚರಿ. ತಮಗೆ ಇರಲು ಚೆಂದ ಮನೆ ಇದೆ. ಅನುಭವಿಸಲು ಸಂಪತ್ತಿದೆ, ಮಕ್ಕಳು ಮೊಮ್ಮಕ್ಕಳು ಮರಿಮೊಮ್ಮಕ್ಕಳು ತಿಂದರೂ ಸವೆಯದಷ್ಟು ಆಸ್ತಿ ಇರುತ್ತದೆ. ಕೆಲವೊಮ್ಮೆ ತಿನ್ನಲು ಮಕ್ಕಳು ಸಹ ಇರುವುದಿಲ್ಲ. ಆದರೆ ದಾಹ ವಿಪರೀತ. ಇನ್ನಾದರೂ ಬಡಬಗ್ಗರಿಗೆ ಉಪಕಾರ ಮಾಡಬೇಕೆಂಬ ಮನೋಭಾವ ಇರದು.

3. ಈರ್ಷೆ: ಮಕ್ಕಳನ್ನು ನೋಡಿರಿ. ನಾಲ್ಕು ಮಕ್ಕಳಿದ್ದರೆ, ನಾಲ್ವರಿಗೂ ಒಂದೊಂದು ಒಂದೇ ತರಹದ ವಸ್ತು ನೀವು ಕೊಟ್ಟರೂ, ಯಾವುದಾದರೂ ಒಂದು ವಸ್ತುವಿಗೇ ನಾಲ್ಕೂ ಮಕ್ಕಳು ಜಗಳವಾಡುತ್ತವೆ. ಇದು ಮನಸ್ಸಿನ ಚೇಷ್ಟೆ; ಈಷಣ ತ್ರಯ ಎಂದು ಕರೆಯುವ ಹೆಣ್ಣು-ಹೊನ್ನು-ಮಣ್ಣು ಮೂರರ ಗಳಿಕೆ, ಉಳಿಕೆ, ಬಳಕೆಗಾಗಿಯೇ ಇಡೀ ಮಾನವ ಕುಲದ ಹೋರಾಟ. ಅದನ್ನೇ ಅಲ್ಲಮ ಪ್ರಭು ದೇವರು ಹೀಗೆ ಹೇಳುವುದು,

ಹೆಣ್ಣಿಗಾಗಿ ಸತ್ತುದು ಒಂದು ಕೋಟಿ
ಹೊನ್ನಿಗಾಗಿ ಸತ್ತುದು ಒಂದು ಕೋಟಿ
ಮಣ್ಣಿಗಾಗಿ ಸತ್ತುದು ಒಂದು ಕೋಟಿ
ನಿನಗಾಗಿ ಸತ್ತವರನು ಯಾರನೂ ಕಾಣೆನಯ್ಯ ಗುಹೇಶ್ವರ.

ಈ ವಚನವನ್ನು ಹೀಗೆಲ್ಲ ಅರ್ಥ ಮಾಡಬಹುದು. ಜಗತ್ತಿನ ಕೋಟಿ ಕೋಟಿ ಜನರು ಹೆಣ್ಣು, ಹೊನ್ನು, ಮಣ್ಣಿಗಾಗಿ ಸಾಯುವರು. ಆದರೆ ದೇವರಿಗಾಗಿ ಸಾಯುವವರು ವಿರಳ. ಇನ್ನೊಂದು ಅರ್ಥ ಹೆಣ್ಣು, ಹೊನ್ನು, ಮಣ್ಣಿಗಾಗಿ ಸಾಯುವವರು ಖಂಡಿತ ಸಾಯುತ್ತಾರೆ. ದೇವರಿಗಾಗಿ ಸತ್ತವರು ಎಂದೂ ಸಾಯದೆ ಅಮರಾತ್ಮರಾಗುತ್ತಾರೆ. ಇಲ್ಲಿ ದೇವರಿಗಾಗಿ ಎಂದಿರುವಲ್ಲಿ ಉದಾತ್ತ ಉದ್ದೇಶ, ರಾಷ್ಟ್ರ, ಸಮಾಜ ಸೇವೆ ಎಂದೆಲ್ಲ ಅರ್ಥಮಾಡಬಹುದು.

ತಾನು ಗಳಿಸಿದ್ದಕ್ಕೆ ತಾನು ಒಡೆಯನಾಗುವುದು ಒಂದು ಬಗೆಯಲ್ಲಿ ಸಹ್ಯ. ಆದರೆ ಪರರ ಗಳಿಕೆಯನ್ನೂ ತಾನೇ ಕಿತ್ತುಕೊಳ್ಳಬೇಕೆಂಬ ದುರಾಸೆ ತೀರಾ ಭಯಂಕರ!

ಎರಡು ಮಕ್ಕಳಿರುತ್ತವೆ ಎಂದುಕೊಳ್ಳಿ. ಒಂದನ್ನು ತಾಯಿ ಎತ್ತಿಕೊಂಡಾಗ ಇನ್ನೊಂದು ತನ್ನನ್ನು ಎತ್ತಿಕೋ ಎಂದು ಅಳುತ್ತದೆ. ಕಷ್ಟಪಟ್ಟು ಎತ್ತಿಕೊಳ್ಳುತ್ತಾಳೆ. ಆದರೆ ಸಮಾಧಾನವಿರದು ಮತ್ತು ಅಳುತ್ತದೆ. ಅವಳನ್ನು ಇಳಿಸು ಎಂದು ಈಗ ಅದರ ಬೇಡಿಕೆ. ಮನುಷ್ಯ ಸ್ವಭಾವ ಹೀಗೆ "ನಾನು ಉತ್ತಮ ಸ್ಥಿತಿಗೆ ಬಂದೆ. ಸರಿ ಸಮಾಧಾನದಿಂದ ಇರಬಹುದಲ್ಲ" ಇಲ್ಲ ಇನ್ನೊಬ್ಬನು ನನ್ನ ಸರಿ ಸಮಾನನಾಗಬಾರದು. ಅವನೂ ಮೇಲೇರಿದರೆ ಇವನಿಗೆ ಕಸಿವಿಸಿ, ನಿದ್ದೆಗೇಡು. ಸಾಮಾನ್ಯ ಲೌಕಿಕರು ಬಿಡಿ ಸ್ವಾಮಿಗಳು, ಮಠಾಧೀಶರುಗಳಲ್ಲಿ ಇರುವ ಈರ್ಷೆ, ಅಸಹನೆ, ದ್ವೇಷ, ಮತ್ಸರ ನೋಡಿದರೆ ಅಚ್ಚರಿ ಎನಿಸುತ್ತದೆ.

ಹುಟ್ಟು ಗುಣ ಜೀವಿಗಳಲ್ಲಿ ಸಹಜ; ಅದು ಪ್ರಾಣಿಗಳಲ್ಲೂ ಉಂಟು. ಆದರೆ ಮಾನವ ತನಗಿಂತ ಕೆಳಸ್ತರದ ಪ್ರಾಣಿಗಳಂತೆ ವರ್ತಿಸಬಾರದು. ಕಲಿತ ಗುಣಗಳಲ್ಲಿ ಬಾಳುವುದು ಮಾನವ ಗುಣ; ದೈವೀ ಗುಣಗಳಲ್ಲಿ ಬಾಳುವುದೇ ದಿವ್ಯ-ಮಾನವ ಶರಣನ ಗುಣ. ಅದನ್ನೇ ದಾರ್ಶನಿಕ ಬಸವಣ್ಣನವರು ಈ ವಚನದಲ್ಲಿ ಹೇಳುವುದು:

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಲಿಂಗದೇವ (ಸೃಷ್ಟಿಕರ್ತ)ನ ಒಲಿಸುವ ಪರಿ.

ಲಿಂಗದೇವ ವಾಣಿ

ಎಲ್ಲಿ ಹುಡುಕುವೆ ನೀನು ಓ ಮಾನವಾ
ನಿನ್ನ ಒಳಗೇ ನಾನು ವಾಸಿಸಿರುವೆ ॥ ಪ ॥

ನಾನು ನಿನ್ನೊಳಗೇ ಇದ್ದರೂ ನನಗಾಗಿ
ಎಲ್ಲೆಲ್ಲೂ ಹುಡುಕಾಡಿ ಬಳಲುತ್ತಿರುವೆ ॥ 1 ॥

ನಾನು ಜಲದೊಳಗೇ ಇಲ್ಲ ಗಿಡಮರದೊಳಗೇ ಇಲ್ಲ,
ವಾಯು, ಅಗ್ನಿಯೊಳಗೇ ಹುದುಹುದುಗಿಕೊಂಡಿಲ್ಲ ॥ 2 ॥

ಹುಡಿಮುಸೀದೆಯೊಳಿಲ್ಲ, ಹೋಮ ಹವನದೊಳಿಲ್ಲ,
ಯಜ್ಞಯಾಗಾದಿಗೂ ದೊರವ ನಾನಲ್ಲ ॥ 3 ॥

ಸನ್ಯಾಸದೊಳಗಿಲ್ಲ, ವೈರಾಗ್ಯದೊಳಗಿಲ್ಲ
ಅಣಿಮಾದಿ ಸಿದ್ಧಿಗೂ ದೊರೆವ ನಾನಲ್ಲ ॥ 4 ॥

ಬಸವ ತತ್ವದ ರೀತಿ ನಡೆವ ಕಂಡರೆ ಪ್ರೀತಿ
ಬಸವನಾ ಭಕ್ತರರಿಗೆ ದೊರೆವೆ ನಾನು ॥ 5 ॥

- ಎಂ.ಎಂ. ಹಿರಿಲಿಂಗಣ್ಣನವರು, ವಕೀಲರು, ರಾ.ಬ.ದಳ, ಸವದತ್ತಿ

✍ ....ಸಂಪಾದಕೀಯ :

ಬಂಜಗೆರೆ ಜಯಪ್ರಕಾಶರ ಅಸಂಬದ್ಧ ತರ್ಕ

- ಮಾತಾಜಿ

ದಿ. 13-4-2007ರ ಕನ್ನಡ ಪ್ರಭಾದಲ್ಲಿ ಇದ್ದಕ್ಕಿದ್ದಂತೆಯೇ ಒಂದು (ಸ್ಫೋಟಕ) ಸುದ್ದಿ ಪ್ರಕಟವಾಯಿತು. ಏಕ ವಚನದಲ್ಲಿ ಧರ್ಮಪಿತರನ್ನು ಸಂಬೋಧಿಸಿ (ಕಟುಕ ಕುರಿಯನ್ನು ಕತ್ತರಿಸುವಂತೆ) ಬಸವಣ್ಣ ಮಾದಿಗ ಬ್ರಾಹ್ಮಣರನಲ್ಲ ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಸಂಗತಿ ಪ್ರಕಟವಾಯಿತು. ಅದರ ಜೊತೆಗೇ ಡಾ॥ ಎಂ.ಎಂ.ಕಲಬುರ್ಗಿ ಮತ್ತು ಡಾ॥ ಎಂ.ಚಿದಾನಂದ ಮೂರ್ತಿಯವರ ಅಭಿಪ್ರಾಯಗಳು ಪ್ರಕಟವಾದುವು. ನಾನೂ ತಕ್ಷಣವೇ ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ ಪ್ರತಿ ಹೇಳಿಕೆ ಕೊಟ್ಟೆ ಅದು ಮರುದಿನದ ಕನ್ನಡ ಪ್ರಭಾದಲ್ಲಿ ಪ್ರಕಟಗೊಂಡಿತು.

ಈ ಸುದ್ದಿಯ ಮೂಲ ಡಾ॥ ಬಂಜಗೆರೆ ಜಯಪ್ರಕಾಶ್ ಎಂಬುವವರು "ದೇವಾ,.... ಅನು ಹೊರಗಣವನು" ಎಂಬ ಕೃತಿ. 14-4-2007 ಡಾ॥ ಅಂಬೇಡ್ಕರ್ ಜಯಂತಿಯಂದು ಈ ಕೃತಿಯು ಶ್ರೀ ರಂಜಾನ್ ದರ್ಗಾ ಅವರ ಕೈಯಿಂದ ಬಿಡುಗಡೆಯಾಗಿ, ಮರುದಿವಸ ಪತ್ರಿಕೆಗಳಲ್ಲಿ ಸುದ್ದಿಯ ವಿವರಗಳೂ ಪ್ರಕಟಗೊಂಡವು. ನಾನು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಹೇಳಿಕೆ ಕೊಟ್ಟೆ, ಅದೂ ಪ್ರಕಟವಾಯಿತು. ನಂತರ ಪತ್ರಿಕಾ ಗೋಷ್ಠಿ ಕರೆದು ಡಾ॥ ಬಂಜಗೆರೆಯವರ ಅಭಿಪ್ರಾಯವನ್ನು ಅಸಂಬದ್ಧ ಎಂದು ಅಭಿಪ್ರಾಯ ನೀಡಿದೆ. ಉದಯ ವಾಹಿನಿಯವರು ಒಂದು ನೇರ ಸಂವಾದವನ್ನು ದಿ.26-4-2007ರಂದು ಧ್ವನಿ ಮುದ್ರಿಸಿ, ಮರುದಿವಸ ಪ್ರಸಾರ ಮಾಡಿದರು.

ಪತ್ರಿಕೆಗಳು ನಮ್ಮ ಹೇಳಿಕೆಗಳ ಪೂರ್ಣಪಾಠವನ್ನು ಪ್ರಕಟಿಸುವುದಿಲ್ಲ. ಮುಖ್ಯ ಕಾರಣ ಸೀಮಿತ ಸ್ಥಳಾವಕಾಶ. ಉದಯ ವಾಹಿನಿದೂ ಅದೇ ಸಮಸ್ಯೆ, ಸೀಮಿತ ಸಮಯ. ಜೊತೆಗೆ ವಾಹಿನಿಯ ಪ್ರತಿನಿಧಿಗಳೇ ಸಾಕಷ್ಟು ಸಮಯ ತೆಗೆದುಕೊಳ್ಳುವುದಲ್ಲದೆ, ಮಧ್ಯೆ ಮಧ್ಯೆ ಪ್ರವೇಶಿಸಿ ಯಾವ ನಿರ್ಣಯಕ್ಕೂ ಬರದಂತೆ ಮಾಡುವರು. ಒಂದು ನಗೆ ಚಾಟಿಕೆ ಇದೆ. ಸಭೆಯಲ್ಲಿ ಅತಿ ಹೆಚ್ಚು ಸಮಯ ಭಾಷಣಕ್ಕೆ ತೆಗೆದುಕೊಳ್ಳುವವರು ಯಾರೆಂದರೆ ಉದ್ಘಾಟಕರು, ಮುಖ್ಯ ಅತಿಥಿಗಳಲ್ಲ ಅವರಿಗಿಂತಲೂ ಹೆಚ್ಚಾಗಿ ಕಾರ್ಯಕ್ರಮ ನಿರ್ವಾಹಕರು (Programme Conductor) ನೇರವಾಗಿ ಚರ್ಚೆ ಇದ್ದರೂ, ಇರದಂತೆ ನಿರ್ವಾಹಕರು ಮಧ್ಯೆ ಪ್ರವೇಶಿಸುತ್ತಿರುವುದರಿಂದ ದೂರದರ್ಶನ ವಾಹಿನಿಗಳಲ್ಲಿ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ.

ಕಲ್ಯಾಣ ಕಿರಣದಲ್ಲಿ ಬರೆಯಬಹುದಾದ ಸಂಪಾದಕೀಯವಾದರೂ ಅಷ್ಟೇ. ಸಮಯ ಮತ್ತು ಸ್ಥಳ-ಎರಡೂ ಅವಕಾಶಗಳು ಕಮ್ಮಿ ಇರುವುದರಿಂದ ಸಮಗ್ರ ವಿಮರ್ಶೆ ಸಾಧ್ಯವಿಲ್ಲವಾಗಿದೆ. ಹಾಗಾದರೆ ಬರೆದುದೇಕೆ ಎಂದರೆ, "ಮೌನಂ ಸಮ್ಮತಿ ಲಕ್ಷಣಂ," ಮೌನವಾಗಿ ಕುಳಿತರೆ ಬಂಜಗೆರೆ ಜಯಪ್ರಕಾಶರ ಅಸಂಬದ್ಧ ತರ್ಕಕ್ಕೆ ನಮ್ಮ ಸಮ್ಮತಿ ಇದೆ ಎಂದಾದೀತು. ಎರಡನೆಯದಾಗಿ ಕಲ್ಯಾಣ ಕಿರಣದ ಓದುಗರೆಲ್ಲರು ಇದರ ನಿರೀಕ್ಷೆಯಲ್ಲಿ ಖಂಡಿತವಾಗಿಯೂ ಇರುವರೆಂಬುದು; ಮೂರನೆಯದಾಗಿ, ಈ ವಿಷಯದಲ್ಲಿ ವಿರಕ್ತ ಸಂಪ್ರದಾಯದ ಸ್ವಾಮಿಗಳು ತಳೆದ ದಿವ್ಯ ಮೌನವನ್ನು ಕಂಡು ಪ್ರತಿಯೊಬ್ಬ ಲಿಂಗಾಯತನೂ ಬೇಸತ್ತು ಬಿಟ್ಟಿರುವುದರಿಂದ.

"ಸಮಯಕ್ಕಾಗದ (ಈ) ನಂಟರು" ಎಂಬುದನ್ನು ಶ್ರೀ ಸಾಮಾನ್ಯ ಲಿಂಗಾಯತನು ಮನಗಂಡು, ನೊಂದಿದ್ದಾನೆ. ಗುರು ವರ್ಗದವರು ಬಸವಣ್ಣ (ನವರು) ಗುರುವಲ್ಲ ಭಕ್ತ ಎಂದು ವಿಡಂಬಿಸುತ್ತ ಮೂಢ ಭಕ್ತರಿಗೆ ಬೋಧಿಸುತ್ತಿದ್ದವರಿಗೆ, ಅವರು ಬ್ರಾಹ್ಮಣರೂ ಅಲ್ಲ ಮಾದಿಗರು ಎಂಬ ಜಯಪ್ರಕಾಶರ ಸುದ್ದಿ ಹೋಳಿಗೆ ತುಪ್ಪ ಚಪ್ಪರಿಸಲು ಹುರಿದುಂಬಿಸಿರಲೂ ಬಹುದು. 'ಮಲತಾಯಿ ಮುದ್ದು ಬಲ್ಲಳೆ ?' ಎಂಬಂತೆ ಅವರಿಗೇಕಿರುತ್ತದೆ ಜಯಪ್ರಕಾಶರ ಅಭಿಪ್ರಾಯವನ್ನು ವಿರೋಧಿಸುವ ಅಪೇಕ್ಷೆ.

ಬಸವ ಸಂಪ್ರದಾಯದವರೆಂದು ಕರೆದುಕೊಳ್ಳುವ ವಿರಕ್ತರಲ್ಲಿ ಬಹುಪಾಲು ಮಠಾಧೀಶರು ಏಕೆ ಗಪ್ ಚುಪ್ ಕುಳಿತಿದ್ದಾರೆ? ಎಂಬುದು ಹರಿಯದ ಪ್ರಶ್ನೆ.

1. ಸ್ವತಂತ್ರ ಅಧ್ಯಯನ ಚಿಂತನೆ ಇಲ್ಲದ ಬಹುಪಾಲು ಮಠಾಧೀಶರು ಜಯಪ್ರಕಾಶರ ಅಸಂಬದ್ಧ ತರ್ಕದ ಹಿಂದೆ ಆಳವಾದ ಸಂಶೋಧನೆ ಇರಬಹುದು ಎಂದು "ಸಿಂಹದ ಮುಖ ಹೊದ್ದು ಬಂದ ಕತ್ತೆಗೆ ಹೆದರಿದಂತೆ" ಹೆದರಿ ಮೌನವಹಿಸಿದಂತೆ ನನಗೆ ಕಾಣುತ್ತದೆ. ಏಕೆಂದರೆ ಸದಾ ಸ್ಫೋಟಕವಾದ ಬಿಸಿ ಸುದ್ದಿಗೆ

ಬಾಯ್ದೆರೆದು ಕುಳಿತಿರುವ ಪತ್ರಿಕೆಗಳು, ಬಹು ದೊಡ್ಡದಾಗಿ ಜಯಪ್ರಕಾಶರ ಅಭಿಪ್ರಾಯವನ್ನು 'ನೀರು ಇಲ್ಲದಾಗ ನಲ್ಲಿ ಸದ್ದು ಮಾಡುವಂತೆ ಬಹಳ ದೊಡ್ಡದಾಗಿ ಪ್ರಕಟಿಸಿದ್ದರಿಂದ ಮಠಾಧೀಶರು ತತ್ತರಿಸಿ ಎದೆಗೆಟ್ಟು ಕುಳಿತಂತೆ ಕಾಣುತ್ತದೆ.

2. ಧರ್ಮಪಿತ ಬಸವಣ್ಣನವರ ಸಮತಾ ತತ್ವ, ಪ್ರಗತಿಪರ ಚಿಂತನೆ, ಜ್ಯೋತಿಷ್ಯ - ಮೂಢನಂಬಿಕೆಯ ವಿರೋಧ ಇವೆಲ್ಲವನ್ನೂ ಆಚರಿಸದೆ ಹಳೆಯ ಜಾಡಿನಲ್ಲೇ ಸಾಗಿರುವ ಅನೇಕ ಮಠಾಧೀಶರು ತಾವು ಟೀಕಿಸಲಾಗದಿದ್ದರೂ ಬಂಜಗೆರೆಯಂಥ (ಅ) ವಿಚಾರವಾದಿಗಳು ಟೀಕಿಸಿದಾಗ ಒಳಗೊಳಗೇ ಇವರು ಸಂತೋಷ ಪಡುತ್ತಿರಬಹುದು.

3. ದಲಿತರು ಎಲ್ಲಿ ಕೋಪಗೊಳ್ಳುವರೊ ಎಂಬ ಅಂಜಿಕೆಯಿಂದ ಕೆಲವು ಮಠಾಧೀಶರು ಮೌನವಾಗಿದ್ದಾರಂತೆ ಎಂದು ಕೆಲವರು ಹೇಳಿದರು.

ಅಂತೂ ನಮ್ಮ ದೇಶದಲ್ಲಿ ಸತ್ಯವನ್ನು ಹೇಳಲು ಜನರು ಹಿಂಜರಿಯುವರು. ತಮ್ಮ ಅಕ್ಕ ಪಕ್ಕ, ಸುತ್ತಲೂ ಇರುವವರನ್ನು ಕಂಡು ಮಾತನಾಡುವರು ಅಥವಾ ಮೌನ ತಳೆಯುವರು ಎನ್ನುವುದನ್ನು ಈ ಪ್ರಸಂಗವು ದೃಢಪಡಿಸುತ್ತದೆ.

ಡಾ|| ಬಂಜಗೆರೆ ಜಯಪ್ರಕಾಶ ಪುಸ್ತಕ " ದೇವಾ ಆನು ಹೊರಗಣವನು " ಎಂಬುದರ ಬಗ್ಗೆ ದಿ.26-4-2007 ಉದಯದಲ್ಲಿ ಸಂವಾದ ಇದ್ದುದರಿಂದ ದಿ.25 ರಂದು ಪುಸ್ತಕವನ್ನು ತರಿಸಿ ರಾತ್ರಿ ಹನ್ನೊಂದುವರೆಯವರೆಗೆ ಓದಿ ಮುಗಿಸಿದೆ. ಒಟ್ಟಾರೆ ಮೂಡಿದ ಅಭಿಪ್ರಾಯ

1. ಕುರುಡರು ಹಲವರು ಸೇರಿ ಆನೆಯನ್ನು ಅರಿಯಲು ಹೋದಾಗ ಒಬ್ಬ ಕುರುಡ ಕಾಲನ್ನು ಮುಟ್ಟಿ 'ಆನೆ ಕಂಭದಂತಿದೆ.' ಎಂದಂತೆ ಈ ಪುಸ್ತಕವಿದೆ.

2. Undigested food is poison and digested poison is food ಎಂಬಂತೆ, ವಚನ ಸಾಹಿತ್ಯವು ಅತ್ಯಂತ ಮಹತ್ವಪೂರ್ಣವಾದ ಒಂದು ಬೌದ್ಧಿಕ, ದಾರ್ಶನಿಕ ಆಹಾರ. ಅದು ಜಯಪ್ರಕಾಶರಿಗೆ ಅರ್ಥವಾಗದೆ ಅಪಚನವಾಗಿದೆ. ಹೀಗಾಗಿ (ಕುರುಡರು ಆನೆಯ ಒಂದೊಂದು ಭಾಗವನ್ನು ಮುಟ್ಟಿ ಅದನ್ನೇ ಆನೆಯ ಆಕಾರ ಎಂದಂತೆ) ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದೆ ವಚನದ ಒಂದು ಸಾಲನ್ನು ತೆಗೆದುಕೊಂಡು ಅದನ್ನೇ ಎಳೆದು (ಅಪ) ಅರ್ಥಮಾಡಿ ನಿರ್ಣಯಕ್ಕೆ ಬಂದಿದ್ದಾರೆ.

ಧರ್ಮಪಿತ ಬಸವಣ್ಣನವರ ಜೀವನವನ್ನು, ಸಂದೇಶವನ್ನು ನಿರ್ಧರಿಸಲು ನಮಗಿರುವ ದಾಖಲೆಗಳು 1. ಕಾವ್ಯಗಳು, 2. ಧರ್ಮಪಿತರ ಬಗ್ಗೆ ಇತರ ಶರಣರು ಹೇಳಿದ ಮಾತುಗಳು, 3 ಸ್ವತಃ ಧರ್ಮಪಿತರೇ ಬರೆದ ಆತ್ಮಕಥೆಯಂತೆ ಇರುವ ವಚನಗಳು, 4. ಆಗಿನ ಕಾಲದ ಸಾಮಾಜಿಕ ಪರಿಸ್ಥಿತಿ. ಪಾಲ್ಕುರಿಕೆ ಸೋಮನಾಥನ ಬಸವ ಪುರಾಣಮು (ತೆಲಗು), ಹರಿಹರ ಮಹಾಕವಿಯ ಬಸವರಾಜ ದೇವರ ರಗಳೆ, ಭೀಮಕವಿ ಬಸವ ಪುರಾಣ, ಸಿಂಗಿರಾಜನ ಅಮಲ ಬಸವ ಚಾರಿತ್ರ್ಯ- ಇವೆಲ್ಲವೂ ಗುರು ಬಸವಣ್ಣನವರು ವಿಪ್ರ ಕುಲ ಸಂಜಾತರೆಂದು ಭಿನ್ನಾಭಿಪ್ರಾಯವಿಲ್ಲದೆ ಹೇಳಿವೆ. ಮಡಿವಾಳ ಮಾಚಿದೇವರು, ತಾಯಿ ನೀಲ ಗಂಗಾದೇವಿ ಧರ್ಮಪಿತರ ತಂದೆ ಮಾದಿರಾಜ, ತಾಯಿ ಮಾದಲಾಂಬಿಕೆ ಎಂದು ತಮ್ಮ ವಚನದಲ್ಲಿ ಹೇಳಿದ್ದಾರೆ.

1. ಮಾದಲಾಂಬಿಕಾ ನಂದನನು, ಮಾದರಸನ ಮೋಹದ ಮಗನು (ವಚನ -9),
2. ಮಂಡಿಗೆಯ ಮಾದಿರಾಜನ ಸತಿ ಮಾದಲಾಂಬಿಕೆಯ ಗರ್ಭದಿಂದವತರಿಸಿ,
ಬಸವಣ್ಣನೆಂಬ ನಾಮವಂ ಧರಿಸಿ (ಮಡಿವಾಳ ಮಾಚಿದೇವ 570)

ಅರ್ಜುನ ವಾಡ ಶಾಸನವು (1260) ಹೀಗೆ ಹೇಳುತ್ತದೆ: "ಬಾಗೇವಾಡಿ ಪುರವರಾಧೀಶ್ವರ ಮಾದಿರಾಜನ ತನುಜಂ ಬಸವರಾಜನ ಮಹಿಮೆ ಎಂತೆಂದೊಡೆ" ಇದರ ಪ್ರಕಾರ ಬಾಗೇವಾಡಿ ಪುರಪ್ರಮುಖ ಮಾದಿರಾಜ. ಇನ್ನು ಧರ್ಮಪಿತರ ಕೆಳಕಂಡ ವಚನಗಳನ್ನು ಗಮನಿಸೋಣ.

1. ಸೆಟ್ಟಿ ಎಂಬೆನೆ ಶಿರಿಯಾಳನ?
2. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ (ವ.344)

ಶಿರಿಯಾಳನಂತಹ ಶ್ರೇಷ್ಠ ಶಿವಭಕ್ತನನ್ನು ಸೆಟ್ಟಿ ಎಂದು, ಚನ್ನಯ್ಯನಂತಹ ಭಕ್ತಿವಂತನನ್ನು ಮಾದಾರನೆಂದು..... ಹೀಗೆಲ್ಲ ಕರೆದು ನನ್ನನ್ನು ವಿಪ್ರ, ಹಾರುವ ಶ್ರೇಷ್ಠ ಎಂದುಕೊಂಡರೆ ದೇವರು ಅಪಹಾಸ್ಯ

ಮಾಡದಿರನೆ? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ.

ಗುರು ಬಸವಣ್ಣನವರಿಗೆ ದೀನರಲ್ಲಿ ದೀನರು, ಕೆಳಸ್ತರದವರೂ ಆದ ಶೂದ್ರ ಮತ್ತು ದಲಿತರನ್ನು ಮೇಲೆತ್ತುವ ತವಕ. ಅದರಲ್ಲೂ ದಲಿತರು ಅತಿ ಹೆಚ್ಚಿನ ಶೋಷಣೆಗೆ ಒಳಗಾಗಿ ನೋವು ತಿಂದವರು, ತಿರಸ್ಕಾರಕ್ಕೆ ಒಳಗಾದವರು. ಹೀಗಾಗಿ ಮೇಲು ಜಾತಿಯವರು ಸಮೀಪ ಬಂದರೆ ಇವರು ಏನು ಮಾಡಿ ಬಿಡುತ್ತಾರೋ ಎಂದು ಅಂಜಿ ಓಡಿಹೋಗುತ್ತಿದ್ದರು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಕಷ್ಟಸಾಧ್ಯದ ಕೆಲಸವಾಗಿತ್ತು. ಅಯ್ಯೋ, ನಾನು ಏಕಾದರೂ ಉತ್ತಮ ಕುಲದಲ್ಲಿ ಹುಟ್ಟಿದೆನೋ! ಅದೇ ನನಗೆ ಕಂಟಕವಾಗಿದೆಯಲ್ಲ. ಇವರು ನನ್ನನ್ನು ನಂಬುತ್ತಿಲ್ಲವಲ್ಲ ಎಂದು ಪರಿತಪಿಸುತ್ತಿದ್ದಾರೆ.

ಆದಿಯಲಾಗಲಿ ವೇದದಲಾಗಲಿ, ಶಾಸ್ತ್ರದಲಾಗಲಿ. ಸಮಯದಲಾಗಲಿ
ಎನ್ನವರೆನ್ನೆನು ಎನ್ನವರೆನ್ನೆನು! ಎನ್ನವರೆಂದಡೆ, ಸಂಗಾ ನಿಮ್ಮಲ್ಲಿಗೆ ದೂರ!
ಎನ್ನವರಾದಡೆ ಜನ್ನಕ್ಕೆ ನಡೆವರೆ?
ಎನ್ನವರಲ್ಲ, ಕೂಡಲ ಸಂಗಮದೇವಾ, ನಿಮ್ಮಾಣೆ! (ಬ.ವ.ದೀ.710)

ಎನ್ನವರಾದಡೆ ಜನ್ನಕ್ಕೆ ನಡೆವರೆ? ಎಂಬ ಮಾತು ಬಹಳ ಮುಖ್ಯ. ಜನ್ನ ಅರ್ಥಾತ್ ಯಜ್ಞಮಾಡುವ ಅಧಿಕಾರ ಉಳ್ಳವರು ಬಸವಣ್ಣನವರ ಬಂಧುಗಳಾಗಿದ್ದರು. ಯಜ್ಞ ಮಾಡುವ ಅಧಿಕಾರ ಇಂದಿಗೂ ಬ್ರಾಹ್ಮಣ ಋತ್ವಿಕ್ಕುಗಳಿಗೆ ಮಾತ್ರ ಸೀಮಿತವಾಗಿದೆ.

ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ!
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ
ಹಾರುವೆನಯ್ಯಾ ಶರಣ ಬರವ ಗುಡಿಗಟ್ಟಿ
ಲಿಂಗದೇವನು ವಿಪ್ರ ಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದನಾಗಿ! (ಬ.ವ.ದೀ.713)

"ಕೆಡುಕ ಹಾರುವ ನಾನಲ್ಲ, ಭಕ್ತರ ಬರವಿಗಾಗಿ ಕಾಯುವ ಹಾರುವ ಹಾರುವ" ಎಂದುಕೊಳ್ಳುತ್ತಾರೆ. ವಿಪ್ರ ಕರ್ಮವ ಬಿಡಿಸಿ, ಅಶುದ್ಧನ ಶುದ್ಧನ ಮಾಡಿದೆಯಾಗಿ ಎಂಬ ವಚನ ವಾಕ್ಯ(713) ಅವರು ಮೂಲತಃ ವಿಪ್ರ ಕರ್ಮದ ಸಂಪ್ರದಾಯದಲ್ಲಿ ಹುಟ್ಟಿ, ಬೆಳೆದು ಇದ್ದರು. ನಂತರ [ಭಕ್ತಿ ಮತ್ತು ವೈಚಾರಿಕತೆಯ ಸ್ಪರ್ಶದಿಂದ] ಇದರಿಂದ ಬಿಡುಗಡೆ ಹೊಂದಿದರು ಎಂದು ಸ್ಪಷ್ಟವಾಗುವುದಲ್ಲವೆ?

ದಲಿತ (ಅಸ್ಪೃಶ್ಯ) ಮೂಲದ ಶರಣರಾದ ಚನ್ನಯ್ಯ, ಕಕ್ಕಯ್ಯ, ಚಿಕ್ಕಯ್ಯ, ಕಿನ್ನರಯ್ಯ. ಮುಂತಾದ -ವರನ್ನೇ ಬಾರಿಬಾರಿಗೂ ಬಸವಣ್ಣನವರು ಹೆಸರಿಸುವುದು ಏಕೆ? ವಿತಂಡವಾದದ ಜಯಪ್ರಕಾಶರ ಪ್ರಕಾರ ಆ ಜಾತಿಯಲ್ಲಿ ಹುಟ್ಟಿದ್ದರಿಂದ. ಆದರೆ ಬಸವಣ್ಣನವರ ಪ್ರಕಾರ ತೀರಾ ನೊಂದು, ಹತಚೇತನರಾಗಿದ್ದ ಆ ಜನಾಂಗದವರಲ್ಲಿ ಆತ್ಮವಿಶ್ವಾಸ ತುಂಬಲು.

ಗೋತ್ರ ನಾಮವ ಬೆಸಗೊಂಡಡೆ
ಮಾತನೂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯ ಕುತ್ತಿ ನೆಲನ ಬರೆಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯನೆಂಬುದು ಏನು,
ಲಿಂಗದೇವಾ? (ಬ.ವ.ದೀ.741)

ಸಾಮಾನ್ಯವಾಗಿ ದೀಕ್ಷೆ ಪಡೆದವರಲ್ಲಿನ ಅಪಕ್ವರು ತಮ್ಮ ತಮ್ಮ ಮೂಲ ಜಾತಿ ಹಿಡಿದು ಮೇಲು ಕೀಳೆಂದು ವಿಂಗಡಿಸ ಬಯಸಿದಾಗ, ವಿಡಂಬಿಸಿ ಅವಮಾನ ಮಾಡಲು ಬಯಸಿ, ನಮ್ಮದು ಈ ಗೋತ್ರ, ನಿಮ್ಮದು ಯಾವ ಗೋತ್ರ, ಎಂದಾಗ, ದಲಿತ ಮೂಲದಿಂದ ಬಂದವರು ಸಂಕೋಚದಿಂದ ತಲೆ ತಗ್ಗಿಸಿ ನಿಂತಾಗ ಧರ್ಮಪಿತರಿಗೆ ಬಲು ಕೋಪ. ಅವರು ಆವೇಶದಿಂದ ಹೇಳುತ್ತಾರೆ, ಯಾಕೆ ಸಂಕೋಚ ಪಟ್ಟು ತಲೆ ತಗ್ಗಿಸಿ ಕಾಲು ಬೆರಳಿನಿಂದ ನೆಲದ ಮೇಲೆ ಬರೆಯುತ್ತೀರಿ? ಧೈರ್ಯವಾಗಿ ಹೇಳಿರಿ ಮಾದಾರ ಚೆನ್ನಯ್ಯನಂತಹ ಶಿವಭಕ್ತ ಶಿರೋಮಣಿಯನ್ನು, ಡೋಹರ ಕಕ್ಕಯ್ಯನಂತಹ ಜ್ಞಾನಿಯನ್ನು ಕೊಟ್ಟ ಜನಾಂಗ (ಗೋತ್ರ) ನಮ್ಮದು ಎಂದು. ಇಂದಿನ ದಲಿತರಲ್ಲೇ ಎಡಗೈ ಬಲಗೈ ಎಂಬ ಗುಂಪು, ಡೋಹರ, ಚಮ್ಮಾರ, ಆದಿ ಜಾಂಬವ, ಹೊಲೆಯ,

ಛಲವಾದಿ ಇತ್ಯಾದಿ ಇತ್ಯಾದಿ (ನಮಗಂತೂ ಭೇದಗಳು ಅರ್ಥವಾಗುವುದಿಲ್ಲ.) ಇದ್ದು ಪರಸ್ಪರರು ವೈವಾಹಿಕ ಸಂಬಂಧ ಮಾಡದಿರುವ ಈರ್ಷೆಯುಂಟಂತೆ. ಹೀಗಿದ್ದಾಗ 12ನೆಯ ಶತಮಾನದಲ್ಲಿ ಒಟ್ಟಾರೆ ಸಮಾಜದ ಹೋಳುಗಳು - ಸೀಳುಗಳು ಇನ್ನು ಎಷ್ಟು ಕಠೋರವಾಗಿ ಇದ್ದಿರಬಹುದು! ಆದ್ದರಿಂದ ಬಸವಣ್ಣನವರು ಧರ್ಮದ ಹೆಬ್ಬಾಗಿಲನ್ನು ತೆರೆದಾಗ ಎಲ್ಲರೂ-ವಿವಿಧ ಜಾತಿ ಮತ ಪಂಥ ಕಸುಬುಗಳಿಂದ ಬಂದರು. ಮೇಲ್ಜಾತಿಯವರು ಕೆಳ ಜಾತಿಯವರನ್ನು ವಿಡಂಬಿಸಿದಾಗ ಧರ್ಮಪಿತರಿಗೆ ಅಪಾರ ದುಃಖವಾಗುತ್ತಿತ್ತು. ಅವರ ಪರವಾಗಿ ಧರ್ಮಪಿತರು ವಹಿಸಿಕೊಂಡು ಮಾತನಾಡುತ್ತಿದ್ದರು. ಹೀಗಾಗಿಯೇ ಅವರ ವಚನಗಳಲ್ಲಿ ಚೆನ್ನಯ್ಯ, ಕಕ್ಕಯ್ಯ ಪುನಃ ಪುನಃ ಕಾಣಿಸಿಕೊಳ್ಳುತ್ತಾರೆ. (ಈ ಅನುಕಂಪವೇ ಮುಂದೆ ಡಾ|| ಬಂಜಗೆರೆಯಂತಹ ಪ್ರಭೃತಿ ಸಂಶೋಧಕರಿಂದ ತಮಗೆ ಉರುಳಾಗಬಹುದು ಎಂಬ ಕಲ್ಪನೆ ಬಸವಣ್ಣನವರಿಗೆ ಇದ್ದಿರಲಿಕ್ಕಿಲ್ಲ.)

12ನೆಯ ಶತಮಾನದ ಪರಿಸರ ನೋಡೋಣ. ಪ್ರಧಾನಿ ಪಟ್ಟ, ರಾಜಗುರುಗಳ ಸ್ಥಾನ ಮುಂತಾದವೆಲ್ಲ ಸಾಮಾನ್ಯವಾಗಿ ಬ್ರಾಹ್ಮಣ ವರ್ಣದವರ ಸ್ವತ್ತಾಗಿತ್ತು. ಒಂದು ವೇಳೆ ಬಸವಣ್ಣನವರು ಮಾದಿಗರೇ ಆಗಿದ್ದರೆ ಅಂತ ಉನ್ನತ ಸ್ಥಾನ ಸಿಗಬಹುದಿತ್ತೇ? ದಲಿತ ಶರಣ ಕಂಬಳಿ ನಾಗಿದೇವನ ಮನೆಗೆ ಹೋಗಿ ಬಸವಣ್ಣನವರು ಇಷ್ಟಲಿಂಗ ಪೂಜೆ ಮತ್ತು ಪ್ರಸಾದ ಮಾಡಿ ಬಂದುದಕ್ಕೆ ಬಸವಣ್ಣನವರು ಒಳಗೆ ಬಂದರೆ ಮೈಲಿಗೆ ಆಗುತ್ತದೆ ಎಂದು ರಾಜಸಭೆಯನ್ನು ಹೊರಗೆ ಕರೆಯಲಾಯಿತು ಎಂಬ ಉಲ್ಲೇಖ ಹರಿಹರನಲ್ಲಿದೆ. ಹೀಗಿದ್ದಾಗ ಮಾದಿಗ ಜಾತಿಯವರೇ ಆಗಿದ್ದರೆ ಬಸವಣ್ಣನವರನ್ನು ಮಂತ್ರಿ ಮಾಡುವುದಿರಲಿ ಅರಮನೆಯೊಳಕ್ಕಾದರೂ ಬಿಡುತ್ತಿದ್ದರೆ?

ಬಸವಣ್ಣನವರ ಪ್ರತಿಭೆ ಅಗಾಧ; ಅದಕ್ಕೆ ಬೆಲೆ ಕೊಟ್ಟು ಬಿಜ್ಜಳ ಅಧಿಕಾರ ನೀಡಿದ್ದ ಎಂದು ಊಹಿಸಿ ಸಮಾಧಾನ ಪಟ್ಟುಕೊಳ್ಳೋಣ. ಬಲದೇವ ಮಂತ್ರಿ ತನ್ನ ಮಗಳಾದ ನೀಲಗಂಗಳನ್ನು ಕೊಟ್ಟು ವಿವಾಹ ಮಾಡಲು ಮನಸ್ಸು ಮಾಡುತ್ತಿದ್ದನೆ? ಒಂದು ವೇಳೆ ಅಲ್ಲೂ ಬಸವಣ್ಣನವರ ಪ್ರತಿಭೆ ಕೆಲಸ ಮಾಡಿದೆ ಎಂದು ಕೊಳ್ಳುವಾ. ಗುರು ಬಸವಣ್ಣನವರು ನವ ಧರ್ಮ ದ್ರಷ್ಟಾರರಾಗಿ ಎಲ್ಲರಿಗೂ ಧರ್ಮ ಸಂಸ್ಕಾರ ನೀಡಿ, ಒಂದು ಲಕ್ಷದ ತೊಂಬತ್ತಾರು ಸಾವಿರ ಅನುಯಾಯಿಗಳನ್ನು ಹೊಂದಿ, ಅನುಭವ ಮಂಟಪ ಕಟ್ಟಿ 36 ವರ್ಷ ನಡೆಸಿ, ರಾಜಕೀಯವಾಗಿ ಉನ್ನತ ಹುದ್ದೆಯಲ್ಲಿದ್ದಾಗ ತಮ್ಮ ಧರ್ಮದ ಅನುಯಾಯಿಗಳಾದ ಸಮಗಾರ ಕಾಯಕದ ಶರಣ ಹರಳಯ್ಯನವರ ಮಗನಿಗೆ ಬ್ರಾಹ್ಮಣ ಮಂತ್ರಿ ಶರಣ ಮಧುವರಸರ ಮಗಳನ್ನು ಕೊಟ್ಟು ಮದುವೆ ಮಾಡಿಸಿದಾಗ ಸಂಪ್ರದಾಯವಾದಿಗಳು ಸಹಿಸಿಕೊಳ್ಳದೆ ಬಸವಣ್ಣನವರನ್ನೇ ಗಡಿಪಾರು ಮಾಡಿಸಿ, ವಿವಾಹದಲ್ಲಿ ಭಾಗಿಗಳಾದ ಶರಣರನ್ನು ಎಳೆಹೂಟೆ ಮೂಲಕ ಕೊಲ್ಲಿಸಲಾಯಿತು. ಮಾದಿಗ ಮೂಲದ ಬಸವಣ್ಣನವರಿಗೆ ಬಲದೇವ ಮಗಳನ್ನು ಕೊಟ್ಟಿದ್ದರೆ ಸಂಪ್ರದಾಯ ಬದ್ಧ ಸಮಾಜ ಸುಮ್ಮನಿರಲು ಸಾಧ್ಯವಿತ್ತೆ?

ತೀರಾ ಕೆಳಮಟ್ಟದ ಊಹೆ ಮಾಡಿರುವ ಬಂಜಗೆರೆ ಪ್ರಕಾರ ಬಸವಣ್ಣನವರು ಹಾಗೂ ನಾಗಲಾಂಬೆಯರು ಅನೈತಿಕವಾಗಿ ಹುಟ್ಟಿದವರು, (ಇಂಥ ಪಾಪಮಯವಾದ ಮಾತುಗಳನ್ನು ನಮ್ಮ ಲೇಖನಿಯಿಂದ ಬರೆದು ಅಪರಾಧವನ್ನು ಮಾಡುತ್ತಿರುವ ನನ್ನನ್ನು ಕ್ಷಮಿಸಲು ಲಿಂಗದೇವನನ್ನು ಕೋರಿ) ಶೈವಾಗಮಾಚಾರ್ಯರು ಮತ್ತು ಕೀಳು ಜಾತಿಯ ಕನ್ಯೆಯಿಂದ ಹುಟ್ಟಿದವರು. ಹಾಗೂ ದೇವರಿಗೆ ಬಿಟ್ಟ ಬಸವ - ಬಸವಿಯರು. ಇಂಥವರಿಗೆ, ಜಾತಿಯ ನಿರ್ಬಂಧಗಳಿರಲಿಲ್ಲ ಎಂದು ಬಂಜಗೆರೆಯವರು ಬರೆಯುತ್ತಾರೆ. ಸವದತ್ತಿಯ ಯಲ್ಲಮ್ಮ, ತುಳಜಾಪುರ ಭವಾನಿ ಮುಂತಾದ ದೇವತೆಗಳಿಗೆ ದೇವದಾಸಿಯರನ್ನಾಗಿ ದಲಿತ ಮಹಿಳೆಯರನ್ನು ಬಿಡುತ್ತಾರೆ. ಹಾಗೆ ಬಿಟ್ಟ ಮಾತ್ರಕ್ಕೆ ಜೋಗಪ್ಪ -ಜೋಗತಿಯರಿಗೆ ಗಣ್ಯಸ್ಥಾನ ದೊರೆಯುವುದೆ? ಏನಿದ್ದರೂ ಮನೆಯ ಬಾಗಿಲ ಹೊರಗೆ! ತಲೆ ಕೆಟ್ಟ ಊಹೆಯನ್ನು ಮಾಡಿ ಬಂಜಗೆರೆ ಇತಿಹಾಸವನ್ನು ಕೆಡಿಸುವುದು ಮಾತ್ರವಲ್ಲ ಅನೇಕರ ತಲೆ ಕೆಡಲು ಕಾರಣರಾಗಿದ್ದಾರೆ. ಇಂಥ ಅತಾರ್ಕಿಕ ತರ್ಕ (Illogical logic) ಅತ್ಯಂತ ವಿಲಕ್ಷಣವೂ ಮತ್ತು ವಿಕೃತವೂ ಆಗಿದೆ.

ಅಪ್ಪನು ನಮ್ಮ ಮಾದಾರ ಚನ್ನಯ್ಯ;
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ;
ಚಿಕ್ಕಯ್ಯ ಎಮ್ಮಯ್ಯ ಕಾಣಯ್ಯ;
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ;
ಎನ್ನನೇತಕ್ಕರಿಯಿರಿ, ಲಿಂಗದೇವಾ?
(ಬ.ವ.ದೀ. 350)

ಈ ಒಂದೇ ವಚನ ವಾಕ್ಯ ಬಂಜಗೆರೆಗೆ ಮುಖ್ಯ ಆಧಾರ. ಧರ್ಮಪಿತರ ಇನ್ನೊಂದು ವಚನ ಹೀಗಿದೆ.

ಎಮ್ಮ ತಾಯಿ ನಿಂಬವ್ವೆ ; ನೀರನೆರೆದುಂಬುವಳು,
ಎಮ್ಮಯ್ಯ ಚನ್ನಯ್ಯ, ರಾಯ ಕಂಪಣವ ಹೋರುವ
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು
ಎಮಗಾರೂ ಇಲ್ಲವೆಂಬಿರಿ.
ಎಮ್ಮ ಅಜ್ಜರಜ್ಜರು ಹಡೆದ ಭಕ್ತಿಯ ನಿಮ್ಮ ಕೈಯಲ್ಲಿ ಕೊಂಬೆ.
ಲಿಂಗದೇವಾ. (ಬ.ವ.ದೀ.353)

ಈ ವಚನದ ಪ್ರಕಾರ ಬಸವಣ್ಣನವರ ತಾಯಿ ತಮಿಳುನಾಡಿನ ನಿಂಬವ್ವೆ, ಮನೆಗೆ ನೀರು ಕೊಡುವ ಕಾಯಕದವಳು, ತಂದೆ ಚೋಳರಾಜನ ಮನೆಗೆ ಹುಲ್ಲು ಒದಗಿಸುವ ಚನ್ನಯ್ಯ!

ಇವೆಲ್ಲ ಭಾವುಕತೆಯಿಂದ ಹೇಳುವ ಸಂಬಂಧಗಳೇ ವಿನಾ ವಾಸ್ತವಿಕ ಸಂಬಂಧಗಳಲ್ಲ. ವಾಸ್ತವಿಕ ಸಂಬಂಧ ವಿಪ್ರ ಮೂಲದ್ದು, ಅದನ್ನು ಕತ್ತರಿಸಿ ಕೊಂಡು ಭಕ್ತಿ ಭಂಡಾರಿ ಬಸವಣ್ಣನವರು ಭಕ್ತಿ ಸಂಬಂಧವನ್ನು ಬೆಳೆಸಿಕೊಂಡರು.

ಎನಗಾರು ಇಲ್ಲ, ಎನಗಾರು ಇಲ್ಲವೆಂಬರು;
ಬಾಣನವ ನಾನು, ಮಯೂರನವ ನಾನು.
ಕಾಳಿದಾಸನವ ನಾನು!
ಕಕ್ಕಯ ಹಿರಿಯಯ್ಯ, ಚಿಕ್ಕಯ್ಯ ಚನ್ನಯ್ಯ
ಎತ್ತಿ ಮುದ್ದಾಡಿಸಿದರೆನ್ನ; ಕೂಡಲ ಸಂಗಯ್ಯ (ಬ.ವ.ದೀ.354)

ಇಲ್ಲಿ ಬಸವಣ್ಣನವರು ಶಿವಭಕ್ತಿ ಪರಂಪರೆಯಲ್ಲಿ ಬರುವ ಬಾಣ (ಅಸುರ) ಮಯೂರ, ಕಾಳಿದಾಸ, ಕಕ್ಕಯ್ಯ, ಚನ್ನಯ್ಯ ಮುಂತಾದವರೊಡನೆ ತಮ್ಮ ಭಾಕ್ತಿಕ ಸಂಬಂಧ(devotional relation)ವನ್ನು ಗುರುತಿಸಿಕೊಳ್ಳುತ್ತಾರೆ. ಆ ದೃಷ್ಟಿಯಿಂದ ಬಂಜಗೆರೆಯವರ ಊಹೆಯಂತೆ ಬಸವಣ್ಣನವರು ಮಾದಾರರೇ ಏಕೆ, ಡೋಹಾರ ಜನಾಂಗದವರಿರಬಹುದು, ಕುರುಬ ಕಾಳಿದಾಸನ ಜಾತಿಗೆ ಸೇರಿದವರೇ ಆಗಿರಬಹುದು. ಇಂಥ ಒಂದೊಂದು ಪದ ಹಿಡಿದು ಎಲ್ಲೆಲ್ಲಿಗೋ ಒಯ್ದು ಬಸವಣ್ಣನವರ ಜನ್ಮ ಜಾತಿಗೆ ತಳುಕು ಹಾಕುವುದು ಮೂರ್ಖತನವೇ ಸರಿ! ಈ ಮೇಲಿನ ವಚನದಲ್ಲಿ ಕಕ್ಕಯ್ಯ ದೊಡ್ಡಪ್ಪ (ಹಿರಿಯಯ್ಯ) ನಾದರೆ ಚನ್ನಯ್ಯ ಚಿಕ್ಕಪ್ಪ (ಕಿರಿಯಯ್ಯ) ನಾಗಿ ಬಿಡುತ್ತಾರೆ.

ವಿಶ್ವಮಾನವ, ವಿಶ್ವವಿಭೂತಿಯಾಗಲು ನೆರವಾಗುವ ಕೆಲವು ವಚನಗಳನ್ನು ವಿಕೃತ ರೀತಿಯಲ್ಲಿ ಅರ್ಥ ಮಾಡುವ ವಿತಂಡವಾದಿಗಳನ್ನು ಏನೆನ್ನಬೇಕೋ! ಓರ್ವ ವ್ಯಕ್ತಿ "ಇವನಾರವ ಇವನಾರವ ಎಂದೆನಿಸದಿರಯ್ಯ" ಎಂಬ ಅಮೂಲ್ಯ ವಚನವನ್ನು ವಿಚಿತ್ರವಾಗಿ ಅರ್ಥಮಾಡಿ, ಬಸವಣ್ಣನವರನ್ನು ಯಾರೂ ಅರ್ಥ ಮಾಡಿಕೊಳ್ಳದೆ ತಿರಸ್ಕರಿಸಿದಾಗ ಅವರು ವಿನೀತರಾಗಿ ಬೇಡಿಕೊಂಡ ವಚನವಿದು. ಇವನು ಯಾರವನು? ಎಂದು ಭೇದ ಮಾಡಿ ದೂರವಿಡದೆ, ಇವನು ನಮ್ಮವನು ಎಂದು ಆದರಿಸಿ ಎಂದು ಬಸವಣ್ಣನವರು ಅಂಗಲಾಚಿದ್ದಾರೆ. ಎಂದು ಅವರು ಅರ್ಥ ಮಾಡಿದ್ದಾರೆ.

ಕಡೆಯ ವಾಕ್ಯ "ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ" ಎಂಬುದು, ಪರಮಾತ್ಮನಲ್ಲಿ ಪ್ರಾರ್ಥನೆ ಸಲ್ಲಿಸಿ, ದೇವರ ಮಹಾಮನೆ ಈ ಜಗತ್ತಿನಲ್ಲಿ ದೇವರ ಮಗನಾಗುವುದು ಬಸವಣ್ಣನವರ ಧ್ಯೇಯ. ಅಂದರೆ ವಿಶ್ವಕುಟುಂಬತ್ವ ಸಾಧನೆ. ಇದು ಯಾವಾಗ ಸಾಧ್ಯ? ಇವನು ಯಾರವನು ? ಎಂದು ಜಾತಿ, ಉದ್ಯೋಗ, ಅಂತಸ್ತು ಹಿಡಿದು ಪ್ರಶ್ನಿಸದೆ ಇವನು ನಮ್ಮವನು ಎಂದು ಎಲ್ಲರನ್ನು ಆದರಿಸಿದಾಗ ದೇವರ ಮಹಾಮನೆಯ ಮಗನಾಗಲು ಸಾಧ್ಯ! ಇಂಥ ಅದ್ಭುತ ವಚನವನ್ನು ಅರ್ಥ ಮಾಡಲಾಗದೆ ಆ ವ್ಯಕ್ತಿ ಸೋತಂತೆ ಬಂಜಗೆರೆ ಸಹ ಸೋತಿದ್ದಾರೆ. ಮತ್ತೊಂದು ಅಮೂಲ್ಯ ವಚನ:

ಚೆನ್ನಯ್ಯನ ಮನೆಯ ದಾಸನ ಮಗನು;
ಕಕ್ಕಯ್ಯನ ಮನೆಯ ದಾಸಿಯ ಮಗಳು-
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು ಲಿಂಗದೇವ ಸಾಕ್ಷಿಯಾಗಿ. (ಬ.ವ.ದಿ.347)

ಈ ವಚನವನ್ನು ಶಬ್ದಶಃ ಅರ್ಥ ಮಾಡಿ, ಬಂಜಗೆರೆಯವರು ಬಸವಣ್ಣನವರು ಮಾದಾರ ಕುಲದಲ್ಲಿ ಜನಿಸಿದವರೆಂದು ಮತ್ತು ಇನ್ನೂ ಮುಂದೆ ಹೋಗಿ ದಾಸಿಯ ಪುತ್ರನೆಂದು ನಿರ್ಣಯಕ್ಕೆ ಬಂದಂತೆ ತೋರುತ್ತದೆ. ಈ ವಚನ ಐತಿಹಾಸಿಕವಾಗಿ ಜನನ ಮೂಲ ಕುರಿತು ಹೇಳದೆ ಸಮಾಜ ಸುಧಾರಕರಾದ ಬಸವಣ್ಣನವರ ಒಂದು ಹೋರಾಟದ ರೂಪುರೇಷೆ ನೀಡುತ್ತದೆ. ವರ್ಣಾಶ್ರಮದ ಸಮಾಜ ವ್ಯವಸ್ಥೆಯಲ್ಲಿ ಮಾದಾರ ಚನ್ನಯ್ಯ ಅತ್ಯಂತ ಕೆಳಗಿನ ಸ್ಥಾನದಲ್ಲಿ ಇರುವಾತ. ಆತನ ಮನೆಯ ದಾಸನ ಸ್ಥಾನ ಹೇಗಿದ್ದೀತು? ಅದೇ ರೀತಿ ಕಕ್ಕಯ್ಯನ ಮನೆಯ ದಾಸಿಯ ಮಗಳು. ಜಾತಿಯಿಂದ ಇವರು ಕೆಳಗಿನವರು. ಜೊತೆಗೆ ಅಧಿಕೃತವಾಗಿ ವಿವಾಹವಾಗದೆ ಇವರಿಬ್ಬರೂ ಬೆರಣಿಯನು ಆಯಲು ಹೋಗಿ ಸಂಗವ ಮಾಡಿದ್ದರಿಂದ ಹುಟ್ಟಿದ ಒಂದು ಶಿಶುವಿನ ಹಕ್ಕುಗಳು ಯಾವುವು ? ಸಮಾಜ ಕೊಡುವ ಸವಲತ್ತುಗಳು ಏನು? ವರ್ಣಾಶ್ರಮ ಆಧಾರಿತ ಸಮಾಜದಲ್ಲಿ ಅತ್ಯಂತ ಹೀನಾಯ. ಆದರೆ ಬಸವಣ್ಣನವರು ಮಾನವೀಯ ಮಾತೃ ಹೃದಯದಿಂದ "ಇವರಿಬ್ಬರಿಗೆ ಹುಟ್ಟಿದ ಮಗ ನಾನು ಲಿಂಗದೇವ ಸಾಕ್ಷಿಯಾಗಿ" ಎಂದು ಹೇಳುವಲ್ಲಿ, ಉತ್ತಮ ಕುಲದಲ್ಲಿ, ಅಧಿಕೃತವಾಗಿ ಮದುವೆಯಾದ ತಾಯಿ ತಂದೆಗಳಿಂದ ಹುಟ್ಟಿದ ನನಗೆ ಸಿಗುತ್ತಿರುವ ಸವಲತ್ತುಗಳು ಆ ಮಗುವಿಗೂ ಸಿಗಬೇಕು. ಎಂಬ ಕಳಕಳಿಯನ್ನು ಮಾನವ ಹಕ್ಕುಗಳಿಗಾಗಿ ಹೋರಾಟವನ್ನು ಈ ವಚನದಲ್ಲಿ ಕಾಣುತ್ತೇವೆ.

ಶರಣರ ಹೆಸರುಗಳ ಜೊತೆಗೆ ಮಡಿವಾಳ ಮಾಚಯ್ಯ, ಸಮಗಾರ ಹರಳಯ್ಯ, ಒಕ್ಕಲಿಗ ಮುದ್ದಣ್ಣ, ಮೇದಾರ ಕೇತಯ್ಯ ಹೀಗೆ ಬರುವುದು ಕಂಡು ಮೊದಮೊದಲು ನಮಗೆ ವಿಷಾದವೆನಿಸುತ್ತಿತ್ತು. ಶರಣರ ಹೆಸರಿನೊಡನೆ ಜಾತಿ ಮತ್ತು ಉದ್ಯೋಗ ಸೂಚಕ ವಿಶೇಷಣಗಳ ಅಗತ್ಯವೇನಿತ್ತು ಎಂದು ಮನಸ್ಸಿಗೆ ಹಳಿಹಳಿಯಾಗುತ್ತಿತ್ತು. ಆದರೆ ಬರುಬರುತ್ತಾ ಆಲೋಚಿಸುತ್ತಾ ಹೋದಾಗ ಇವು ಇರುವುದೇ ಸರಿ ಎನ್ನಿಸಿತು ಏಕೆಂದರೆ, ಕಾಲಾನಂತರದಲ್ಲಿ ಪೂರ್ಣವಾಗಿ ಜಾತಿಯ ವಿಕೃತತೆಗೆ ಒಳಗಾಗಿರುವ ಲಿಂಗಾಯತ ಸಮಾಜದಲ್ಲಿ ಕೆಳಜಾತಿಯ ಶರಣರನ್ನೆಲ್ಲ ಅಯೋನಿಜರನ್ನಾಗಿ ಇಲ್ಲವೇ ಜಂಗಮ ಜಾತಿಯಲ್ಲಿ ಹುಟ್ಟಿದವರನ್ನಾಗಿ ಚಿತ್ರಿಸಿ ಪುರಾಣ ಕಾವ್ಯಗಳನ್ನು ಬರೆಸಲಾಗುತ್ತಿದೆ. ಹೀಗಿರುವಾಗ ಶರಣರ ಹೆಸರಿನ ಜೊತೆಗೇ ಬಂದ ಉದ್ಯೋಗ ಅಥವಾ ಜಾತಿಯ ಹೆಸರುಗಳು ಅವರ ಮೂಲ ಜಾತಿಯನ್ನು ಅರಿಯಲು ಮತ್ತು ಯಾವುದೇ ಜಾತಿಯಲ್ಲಿ ಹುಟ್ಟಿದವರು ಶರಣರು, ಗುರು-ಜಂಗಮರಾಗಬಹುದು ಎಂಬುದನ್ನು ಸ್ಪಷ್ಟ ಪಡಿಸುತ್ತವೆ. ಈ ಹೆಸರುಗಳ ಜೊತೆಗೆ ನಮ್ಮ ಶರಣರ ಮೂಲ ಜಾತಿಗಳನ್ನು ಗುರುತಿಸಲು ಇರುವ ಇನ್ನೊಂದು ಸೂತ್ರವೆಂದರೆ 12ನೆಯ ಶತಮಾನದಿಂದಲೂ ಆಯಾ ಸಮಾಜಗಳ ಜನರು ಆ ಮಹಾತ್ಮರನ್ನು ತಮ್ಮ ಜನಾಂಗದ ಮಹಾ ಪುರುಷರೆಂದು ಗುರುತಿಸಿ, ಗೌರವಿಸುತ್ತ ಬಂದಿರುವುದು. ಉದಾಹರಣೆಗೆ ಅಪ್ಪಣ್ಣನವರನ್ನು ಹಡಪದ ಸಮಾಜದವರು, ಮಾಚಿದೇವರನ್ನು ಮಡಿವಾಳ ಸಮಾಜದವರು ಕಕ್ಕಯ್ಯನವರನ್ನು ಡೋಹರ ಸಮಾಜ-ದವರು, ಚೆನ್ನಯ್ಯನನ್ನು ಮಾದಾರ ಸಮಾಜದವರು ತಮ್ಮವರೆಂದು, ತಮ್ಮ ಕುಲ ಪುರುಷರೆಂದು ಗೌರವಿಸುತ್ತಾ ಬಂದಿದ್ದಾರೆ. ಬ್ರಾಹ್ಮಣ ಸಂಪ್ರದಾಯವನ್ನು ಬಸವಣ್ಣನವರು ತೊರೆದು ಲಿಂಗಾಯತ ಧರ್ಮ ಸ್ಥಾಪಕರಾದುದರಿಂದ ಸಂಪ್ರದಾಯಸ್ಥ ಬ್ರಾಹ್ಮಣರು ಬಸವಣ್ಣನವರ ಬಗ್ಗೆ ಹೆಮ್ಮೆ ಪಡದಿದ್ದರೂ ಪಾಲ್ಕುರಿಕೆ ಸೋಮನಾಥ, ಹರಿಹರ, ಭೀಮಕವಿ ರಚಿಸಿದ ನಂತರ ಸಾಹಿತ್ಯ ಅ.ನ.ಕೃ ಎಂ.ಆರ್. ಶ್ರೀನಿವಾಸ ಮೂರ್ತಿ, ರೆಂಗನಾಥ ದಿವಾಕರ್ ಮುಂತಾದವರು ಸಂಪ್ರದಾಯಸ್ಥರಾಗದೆ ಗುಣಗ್ರಾಹಿಗಳಾದ ಬ್ರಾಹ್ಮಣರೇ ಆಗಿರುವುದು ಕಾಕತಾಳೀಯವಿರಬಹುದು. ನಮಗೆ ಇದಕ್ಕಿಂತಲೂ ಮಹತ್ವ ಪೂರ್ಣವಾದುದು ಧರ್ಮಪಿತ ಬಸವಣ್ಣನವರ ಪೂರ್ವಾಶ್ರಯದ ವಂಶಸ್ಥರು ಈಗ ಇರುವುದು. ಕರ್ನಾಟಕ ಸರ್ಕಾರದವರು ಬಸವಣ್ಣನವರು ಹುಟ್ಟಿದ ಸ್ಥಳವನ್ನು ಸ್ಮಾರಕವಾಗಿ ಮಾಡಬೇಕು ಎಂಬ ಯೋಜನೆಗೆ ಮನೆಯನ್ನು ವಶಪಡಿಸಿಕೊಂಡಾಗ ಪರಿಹಾರವು ಹೋಗಿರುವುದು ಬ್ರಾಹ್ಮಣರ ಕುಟುಂಬಕ್ಕೆ. ಬಾಗಲಕೋಟೆಯಲ್ಲಿ ಪೋಲಿಸ್ ಇಲಾಖೆಯಲ್ಲಿ ಸಿ.ಐ.ಡಿ. ವಿಭಾಗದಲ್ಲಿ ಕಾಯಕ ಮಾಡುತ್ತಿದ್ದ ಓರ್ವರು ಒಮ್ಮೆ ಶರಣ ಮೇಳಕ್ಕೆ ಬಂದಾಗ ತಾವು ಬಸವಣ್ಣನವರ ವಂಶಜರು ಎಂದು ಹೇಳಿಕೊಂಡರು.

ವಿಶ್ವಗುರು ಬಸವಣ್ಣನವರು ಜನ್ಮ ಮೂಲದಲ್ಲಿ ಯಾರೇ ಇರಲಿ ಅದನ್ನು ತೊರೆದು ಹೊಸ ಧರ್ಮ "ಲಿಂಗಾಯತ"ವನ್ನು ಅವರು ಕೊಟ್ಟರು; ನಮಗೆ ಅದಷ್ಟೇ ಮಾನ್ಯ. ಆದರೆ ಡಾ|| ಬಂಜಗೆರೆಯವರು ಸಂಶೋಧನೆಯನ್ನು ವೈದ್ಯನು ಶಸ್ತ್ರ ಚಿಕಿತ್ಸೆ ಮಾಡುವಂತೆ ಕ್ರಮಬದ್ಧವಾಗಿ ಮಾಡದೆ ಕಟುಕ ಕುರಿಯನ್ನು ಕಡಿದಷ್ಟು ಒರಟಾಗಿ, ಅಲ್ಲಷ್ಟು ಇಲ್ಲಷ್ಟು ವಚನ ವಾಕ್ಯಗಳನ್ನು ತೇಪೆ ಹಚ್ಚುತ್ತ ಜನರ ಮನದಲ್ಲಿ ಗೊಂದಲವೆಬ್ಬಿಸಿ, ಹೆಸರು

ಮಾಡಿಕೊಳ್ಳುವ ಚಪಲ ಹೊಂದಿದ್ದಾರೆ ಎಂದು ಹೇಳದೆ ಗತ್ಯಂತರವಿಲ್ಲ.

ಬಂಜಗೆರೆಯವರು 15ನೆಯ ಪುಟದಲ್ಲಿ ಬರೆಯುತ್ತಾರೆ, 'ಈ ದೇಶದಲ್ಲಿ ಯಾವುದೇ ಉನ್ನತವಾದುದು ಸಾಧ್ಯವಾಗುವುದು ಬ್ರಾಹ್ಮಣರಿಂದಲೇ ಎಂಬ ಕುತ್ಸಿತ ಅಭಿಪ್ರಾಯ ಉಳ್ಳ ಕೆಲವರು "ಕುವೆಂಪು ಮತ್ತು ಅಂಬೇಡ್ಕರ್ ಶೂದ್ರ ಮತ್ತು ದಲಿತ ಜಾತಿಗೆ ಸೇರಿದವರಿರಬಹುದು. ಆದರೆ ಅವರ ಬುದ್ಧಿ ಸಾಮರ್ಥ್ಯವನ್ನು ನೋಡಿದರೆ ಅವರು ಬ್ರಾಹ್ಮಣ ಸಂಯೋಗದಿಂದ ಜನ್ಮ ತಳೆದವರಿರಬೇಕು." ಇದು ಎಂಥ ಅಮಾನವೀಯವಾದ ಕುತ್ಸಿತ ಮನೋಭಾವದ ಚಿಂತನೆ.'

ಇಂಥ ಒಂದು ಸಂಶಯ ಹುಟ್ಟಿಸುವ ವಿಚಾರದ ಕಲ್ಲನ್ನು ಒಗೆದು ಸಂದೇಹದ ಅಲೆ ಹುಟ್ಟಿಸುವ ಜಯಪ್ರಕಾಶರ ಶೈಲಿ ಪ್ರಶ್ನಾರ್ಹ ಮತ್ತು ಖಂಡನಾರ್ಹ. ಇಂಥ ಗಂಭೀರ ವಿಷಯ ಪ್ರಸ್ತಾಪ ಮಾಡುವಾಗ ಹೇಳಿದವರ ಹೆಸರನ್ನು ಉಲ್ಲೇಖಿಸದೆ ಇರುವುದು ಅಪ್ರಾಮಾಣಿಕತೆ. ಅಲ್ಲದೆ ಅಂಬೇಡ್ಕರ್ ಮತ್ತು ಕುವೆಂಪುರವರ ತಾಯಿಯ ಪಾವಿತ್ರ್ಯತೆಯ ಬಗ್ಗೆಯೇ ಇವರು ಸಂದೇಹ ಹುಟ್ಟಿಸಿದಂತೆ ಆಗದೇ? ಯಾರು ಹಾಗೆಂದವರು ಎಂಬುದನ್ನು ಉಲ್ಲೇಖಿಸಿದ್ದರೆ ನಾವು ನಮ್ಮ ಆರೋಪದ ಬಾಣವನ್ನು ಅಂದವರತ್ತ ತಿರುಗಿಸಬಹುದಿತ್ತು.

ಬಂಜಗೆರೆಯ ಬೂಮ್‌ರ‍್ಯಾಂಗ್ ಅನ್ನು ಅವರ ಕಡೆಗೆ ತಿರುಗಿಸಬಹುದಾದರೆ, ಹೇಗೆ ಕೆಲವು ಕುತ್ಸಿತ ಮನದವರು ಯಾವುದು ಒಳ್ಳೆಯದು ಇದ್ದರೂ ಅದು ಬ್ರಾಹ್ಮಣ ಮೂಲದಿಂದಲೇ ಆಗಿರಬೇಕು ಎಂಬ ಪೂರ್ವಾಗ್ರಹ ಪೀಡಿತ ದೃಷ್ಟಿ ಹೊಂದಿರುವರೋ ಹಾಗೆ ಬಂಜಗೆರೆಯವರು ಕ್ರಾಂತಿಕಾರಿ ವಿಚಾರಗಳಿಗೆ ದಲಿತರು ಮಾತ್ರ ಕಾರಣರಾಗಬಲ್ಲರು ಎಂಬ ಪೂರ್ವಾಗ್ರಹ ಪೀಡಿತ ಮನೋಭಾವ ಮತ್ತು ಬ್ರಾಹ್ಮಣ ದ್ವೇಷದಿಂದ, ಬಸವಣ್ಣನವರನ್ನು ಮಾದಿಗರನ್ನಾಗಿ ಹುಟ್ಟಿಸಲು ಯಮ ಸಾಹಸ ಮಾಡಿದ್ದಾರೆ.


ಶೂದ್ರರು, ಮತ್ತು ಅತ್ಯಂತ ನಿಕೃಷ್ಟ ಸಾಮಾಜಿಕ / ಆರ್ಥಿಕ /ಧಾರ್ಮಿಕ/ಶೈಕ್ಷಣಿಕ ಸ್ಥಿತಿಯಲ್ಲಿದ್ದ ದಲಿತರು ಆಳವಾದ ಬಾವಿಯಲ್ಲಿ ಬಿದ್ದಂತಿದ್ದರು. ಅವರ ಆಕ್ರಂದನವನ್ನು ಕೇಳಿಸಿಕೊಳ್ಳಲು ಸಮಾಜ ಸಿದ್ಧವಿರಲಿಲ್ಲ. ಶೋಷಣೆಯ ಕಾರಣಗಳನ್ನು ಅರಿಯಲು ಸಾಧ್ಯವಾಯಿತು. ಶೋಷಕ ಸಮಾಜದ ಪ್ರತಿನಿಧಿ ಬಸವಣ್ಣನವರಿಗೆ ಶೋಷಕರನ್ನು , ಆಗ ಅವರು ಶೋಷಿತರನ್ನು ಶೋಷಣೆಯ ಕೂಪದಿಂದ ಮೇಲೆತ್ತಲು ಧಾವಿಸಿದರು. ಶೋಷಿತರ ವರ್ಗದಲ್ಲೇ ಹುಟ್ಟಿದ್ದರೆ ಏನೇನೂ ಮಾಡಲು ಸಾಧ್ಯವಿರುತ್ತಿರಲ್ಲಿಲ್ಲ ಎಂಬ ಸಾಮಾನ್ಯ ಜ್ಞಾನ (Common Sense) ಸಹ ಬಂಜಗೆರೆಯವರಲ್ಲಿ ಇಲ್ಲ. ಡಾ|| ಅಂಬೇಡ್ಕರ್ ಪ್ರಜ್ಞಾವಂತರಾಗಿ ದಲಿತರ ಏಳ್ಗೆಗೆ ದುಡಿದರು ಎಂದರೆ ಅಲ್ಲಿಗಾಗಲೇ ಇಸ್ಲಾಂ, ಕ್ರೈಸ್ತ ಮತಗಳು ಇಲ್ಲಿಗೆ ಬಂದಿದ್ದವು; ಅದಕ್ಕಿಂತ ಮುಖ್ಯವಾಗಿ ಬ್ರಿಟಿಷರು ಕೊಟ್ಟ ಸಾರ್ವಜನಿಕ ಶಿಕ್ಷಣ ಹೊರ ಜಗತ್ತನ್ನು ಭಾರತೀಯರ ಮುಂದೆ ತೆರೆದಿಟ್ಟಿತ್ತು.

"ಎಲ್ಲ ಉತ್ತಮವಾದುದು ಬ್ರಾಹ್ಮಣರಿಂದಲೇ ಸಾಧ್ಯ" ಎಂಬುದು ಸಹಜ. ಏಕೆಂದರೆ ಅವರಿಗೆ ಬಿಟ್ಟು ಶಾಸ್ತ್ರ ವಿದ್ಯೆ ಬೇರೆಯವರಿಗೆ ಲಭ್ಯವಾಗುತ್ತಲೇ ಇರಲಿಲ್ಲವಷ್ಟೆ, ಅಂತೆಯೇ, ಬಸವಣ್ಣನವರು ಮೊಟ್ಟ ಮೊದಲ ಬಾರಿಗೆ ಎಲ್ಲರಿಗೂ ಅಕ್ಷರ ಜ್ಞಾನ ನೀಡಿದಾಗ ಜಾನಪದರು ಹೀಗೆ ಕೊಂಡಾಡುತ್ತಾರೆ.


ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ||

ಸಾಧು ಸಾಧಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು ಕೇಳಿದವು
ಮೇದಿನಿಗೆ ಬಂತು ಹೊಸ ಬೆಳಕು ||


ಈ ಸಂಪಾದಕೀಯ ಲೇಖನವನ್ನು ಬರೆದು ಪೂರೈಸುವ ಮುನ್ನ ಹೇಳಬಹುದಾದ ಒಂದು ಮಾತೆಂದರೆ, "ಎಲ್ಲೋ ಅನಾಮಿಕರಾಗಿ ಮೂಲೆಯಲ್ಲಿದ್ದ ಡಾ|| ಜಯಪ್ರಕಾಶ್ ಬಂಜಗೆರೆ ಏನಕೇನ ಪ್ರಸಿದ್ಧಿಯನ್ನು ಪಡೆದು, ಎಲ್ಲ ಪತ್ರಿಕೆಗಳಲ್ಲೂ ಪ್ರಚಾರ ಪಡೆದು ಹೀರೋ ಆದರು ಎಂಬುದು ಅವರಿಗೆ ಒಳಗೊಳಗೇ ಖುಷಿ ಕೊಟ್ಟಿರಬಹುದು. ಆದರೆ ಅಸಂಖ್ಯಾತ ಬಸವಾನುಯಾಯಿಗಳಿಗೆ ಭಾವನಾತ್ಮಕವಾಗಿ ನೋವನ್ನುಂಟು ಮಾಡಿದುದಲ್ಲದೆ ಸಂಶೋಧನೆಯ ಹೆಸರಿನಲ್ಲಿ ಇತಿಹಾಸಕ್ಕೆ ಅಪಚಾರ ಮಾಡುವಂತಹ ಹೇಯ ಕೃತ್ಯವನ್ನು ಅವರು ಮಾಡಿದುದು ಖಂಡನಾರ್ಹ."




ದಿ. 20-4-2007, 874ನೆಯ ಬಸವ ಜಯಂತಿಯಂದು ಗೌರವಾರ್ಪಣೆ



ಬಸವ ಜಯಂತಿ, ಧ್ವಜಾರೋಹಣ, ಶರಣ-ಶಿವಕುಮಾರ್ ಅವರಿಂದ




ದಿ 31-1-2007ರಂದು ಮಲೆ ಮಹದೇಶ್ವರ ಬೆಟ್ಟದಿಂದ ಹೊರಟು
ಬೆಂಗಳೂರಿಗೆ ದಿ.20-4-2007ರಂದು ಆಗಮಿಸಿದ ಕಲ್ಯಾಣ ಜ್ಯೋತಿ



ಕಲ್ಯಾಣ ಜ್ಯೋತಿಯ ಸ್ವಾಗತಕ್ಕೆ ನಿಂತಿರುವ ಶರಣ ಸಮೂಹ



ಜ್ಯೋತಿಯ ನೇತೃತ್ವವಹಿಸಿದ ಪೂಜ್ಯ ಗಂಗಾ ಮಾತಜಿಯವರಿಗೆ
ಪುಷ್ಪವೃಷ್ಟಿಯ ಮೂಲಕ ಸ್ವಾಗತ



ಬಸವ ಜಯಂತಿಯ ಉತ್ಸವದ ವೇದಿಕೆ.



ಸಾಮೂಹಿಕ ಪ್ರಾರ್ಥನೆ




ಪೂಜ್ಯ ಗಂಗಾಮಾತಾಜಿಯವರಿಂದ ಕಾರ್ಯಕ್ರಮ ಉದ್ಘಾಟನೆ




ದಿ.20-4-2007 ಬಸವ ಜಯಂತಿ ಕಾರ್ಯಕ್ರಮದ ನಂತರ ಮೆರವಣಿಗೆ,
ಪೂಜ್ಯ ಗಂಗಾಮಾತಾಜಿಯವರ ನೇತೃತ್ವದಲ್ಲಿ ಶರಣರಿಂದ ಪಥ ಸಂಚಲನ




ಪಥ ಸಂಚಲನದಲ್ಲಿ ಭಾಗವಹಿಸಿದ ಶರಣ ಸಮೂಹ




ದಿ.22-4-2007 ಅಭಿನಂದನ ಸಮಾರಂಭದಂದು ಅಭಿನಂದಿತರಿಂದ ವಿಶೇಷ ಪೂಜೆ



ಅಭಿನಂದನ (ಶುಭ ಹಾರೈಕೆ) ಸಮಾರಂಭದ ವೇದಿಕೆ. ದಿ 22-4-2007




ದಿ.22-4-2007 ಪುಟ್ಟರುದ್ರಪ್ಪನವರ ಅಭಿನಂದನೆ ನಿಮಿತ್ತ ಪ್ರಕಟಿಸಿದ "ಮಾತೆಂಬುದು ಜ್ಯೋತಿರ್ಲಿಂಗ" ಪುಸ್ತಕ ಬಿಡುಗಡೆ ಮಾಡುತ್ತಿರುವ ಡಾ|| ಸಿ.ಸೋಮಶೇಖರ್



ದಿ.22-4-2007 ಅಭಿನಂದನೆಯ ನಂತರ ತಮ್ಮ ಅನುಭವ ವಾಣಿ ನೀಡುತ್ತಿರುವ ಶರಣ ಪುಟ್ಟರುದ್ರಪ್ಪ



ಬಂಜಗೆರೆಯವರ ಅಸಂಬದ್ಧ ವಿಚಾರ ವಿರೋಧಿಸಿ ದಿ.22-4-2007ರಂದು ಬೃಹತ್ ಮೆರವಣಿಗೆ



ರಾಜಾಜಿನಗರದ ನವರಂಗ ಸರ್ಕಲ್‌ದಲ್ಲಿ ಧರಣಿ ಮತ್ತು ರಸ್ತೆ ತಡೆ



ಜನವರಿ 31ರಂದು ಮಲೆ ಮಹದೇಶ್ವರ ಬೆಟ್ಟದಿಂದ ಹೊರಟ ಕಲ್ಯಾಣ ಜ್ಯೋತಿಯ ಆಗಮನ ದಿ 30-4-2007ರಂದು.
ನೇತೃತ್ವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು.



ಮಹಾರಾಷ್ಟ್ರದ ಅಲ್ಲಮ ಪ್ರಭು ಗಿರಿಯಿಂದ ಅಲ್ಲಮ ಜ್ಯೋತಿಯ ಆಗಮನ.
ನೇತೃತ್ವ ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು ಮತ್ತು ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ.



ದಿ-1-5-2007ರಂದು ಆದಿ ಪ್ರಮಥ ಪೂಜೆಯಿಂದ ಕಲ್ಯಾಣ ಪರ್ವಕ್ಕೆ ಚಾಲನೆ ಪೂಜ್ಯ ಮಾತಾಜಿಯವರಿಂದ



ಉದ್ಘಾಟನೆ ಮಾಡಿದ ನಂತರ ಭಾಷಣ ಮಾಡುತ್ತಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು



ಧ್ವಜಾರೋಹಣ. ಶರಣ. ಸುಭಾಷ್ ಪಾಟೀಲರಿಂದ
1-5-2007ರಂದು ಬೆಳಿಗ್ಗೆ 11ಗಂಟೆ




ಶರಣ. ಧನರಾಜ್ ಜೀರಗೆ 2-5-2007, ಸಂಜೆ 6-30



ಪೂಜ್ಯ ಬಸವ ಲಿಂಗ ಸ್ವಾಮಿಗಳಿಂದ 2-5-2007, ಬೆಳಿಗ್ಗ 11-00




ಬಸವರಾಜ ಯಾಲಕ್ಕಿಯವರಿಂದ ದಿ.1 -5-2007 ಸಂಜೆ 6-30.




ಶರಣ ವಂದನೆಗೆ ಮುನ್ನ ಧ್ವಜಾರೋಹಣ. 2-5-2007



ಧ್ವಜಾರೋಹಣಲ್ಲಿ ಎದ್ದು ನಿಂತು ಧ್ವಜಕ್ಕೆ ಗೌರವ ಸಲ್ಲಿಸುವ ಶರಣ ಬಂಧುಗಳು




ದಿ- 2-5-2005 ಸಂಜೆ ರಾಜೀವ್ ದೀಕ್ಷಿತ ಮುಖ್ಯ ಅತಿಥಿಗಳಾಗಿಭಾಗವಹಿಸಿದ ಚಿಂತನಗೋಷ್ಠಿ



ಮಡಿವಾಳ ಮಾಚಿದೇವರ ಜಯಂತಿಯ ಉದ್ಘಾಟನೆ ಸ್ವದೇಶಿ ಆಂದೋಲನ ನೇತಾರ ರಾಜೀವ್ ದೀಕ್ಷತ ಅವರಿಂದ



ಪ್ರಾಸ್ತವಿಕವಾಗಿ ಮಾತನಾಡುತ್ತಿರುವ ಪೂಜ್ಯ ಮಾತಾಜಿ




ನೆನಪಿನ ಕಾಣೀಕ ನೀಡಿ ರಾಜೀವ್ ದೀಕ್ಷಿತ ಅವರನ್ನು ಸನ್ಮಾನಿಸಲಾಗುತ್ತಿದೆ.




ಮುಖ್ಯ ಅತಿಥಿಗಳಾಗಿ ಉಪನ್ಯಾಸ ಮಾಡುತ್ತಿರುವ ಪಾಂಡುರಂಗ ಸೂರ್ಯವಂಶಿ



ಸಂಜೆಯ ನೆನಹಿನಲ್ಲಿ ತನ್ಮಯರಾದ ಪೂಜ್ಯರು ಅತಿಥಿಗಳು



ದಿ.3-5-2007 ಬಸವ ಕಲ್ಯಾಣದ ಪರುಷ ಕಟ್ಟೆಯ ಸಂದರ್ಶನ ಮತ್ತು ಗುರು ಬಸವಣ್ಣನವರಿಗೆ ಪೂಜೆ



ಪರುಷ ಕಟ್ಟೆ, ಗುರು ಬಸವಣ್ಣನವರು ಕುಳಿತುಕೊಂಡು ಭಕ್ತರಿಗೆ / ಪ್ರಜೆಗಳಿಗೆ ಸಂದರ್ಶನ ನೀಡುತ್ತಿದ್ದ ಪವಿತ್ರ ಸ್ಥಳ.



ಬಿ. ಪರುಷ ಕಟ್ಟೆಯಿಂದ ಪೂಜ್ಯ ಶ್ರೀ ಗಂಗಾಮಾತಾಜಿಯವರು ಪಾದಯಾತ್ರೆಯಲ್ಲಿ ಬರುತ್ತಿರುವುದು.



ಪರುಷ ಕಟ್ಟೆಯಲ್ಲಿ ಪೂಜ್ಯ ಗಂಗಾ ಮಾತಾಜಿಯವರಿಂದ ಪೂಜ್ಯ ಸಿದ್ಧರಾಮೇಶ್ವರ ಸ್ವಾಮಿಗಳಿಗೆ ಆರ್ಶೀವಾದ



ಬಸವ ಕಲ್ಯಾಣದ ಪ್ರಮುಖ ರಸ್ತೆಗಳಲ್ಲಿ ಪೂಜ್ಯರಿಂದ ಕಲ್ಯಾಣ ಜ್ಯೋತಿಯೊಡನೆ ಪಾದಯಾತ್ರೆ.



ಮೆರವಣಿಗೆ, ಪಾದಯಾತ್ರೆ, ಪಥ ಸಂಚಲನದಲ್ಲಿ ಪಾಲ್ಗೊಂಡ ಬೃಹತ್ ಶರಣ ಸಮೂಹವನ್ನು ಕಂಡು
ಬಸವ ಕಲ್ಯಾಣದ ಜನರು ಬೆರಗಾದರು.




ಬಸವೇಶ್ವರ ಸರ್ಕಲದಲ್ಲಿ ಬಸವಣ್ಣನವರ ಪುತ್ಥಳಿಗೆ ಶರಣರು ಮಾಲಾರ್ಪಣೆ ಮಾಡಬಾರದೆಂದು ಆಗ್ರಹಿಸಿದ ಪ್ರತಿಭಟನೆಕಾರರು ಬೆರಳೆಣಿಕೆಯ ಸಂಖ್ಯೆಯಲ್ಲಿ




ಬೆರಳೆಣಿಕೆ ಪ್ರತಿಭಟನೆಕಾರರಿಗೆ ರಕ್ಷಣೆ ಕೊಡಲು ನೂರಾರು ಪೋಲೀಸರ ಪಡೆಯಿಂದ ಭದ್ರಕೋಟೆ ನಿರ್ಮಾಣ




ಶರಣ. ಹರಳಯ್ಯನವರ ಮೂರ್ತಿಗೆ ಶರಣರಿಂದ ಮಾಲಾರ್ಪಣೆ




ಶರಣ. ಮಡಿವಾಳ ಮಾಚಿದೇವರ ಮೂರ್ತಿಗೆ ಶರಣರಿಂದ ಮಾಲಾರ್ಪಣೆ



ಡಾ|| ಅಂಬೇಡ್ಕರ ಮೂರ್ತಿಗೆ ಶರಣರಿಂದ ಮಾಲಾರ್ಪಣೆ



ಶರಣರ ಬೃಹತ್ ಪಥ ಸಂಚಲನ



ಬಸವ ಕಲ್ಯಾಣದ ಬೀದಿಯಲ್ಲಿ ಪಥ ಸಂಚಲನದಲ್ಲಿ ಶರಣರ ಸಮೂಹ



ಮಹಾಮನೆಯ ಸಭಾ ಮಂಟಪಕ್ಕೆ ಆಗಮಿಸುತ್ತಿರುವ ಶರಣ ಸಮೂಹ




ಪಥ ಸಂಚಲನದಲ್ಲಿ ಬೀದರ್ ಬಸವಾಂಕುರದ ಮಕ್ಕಳಿಂದ ಕೋಲಾಟ




2 ವರ್ಷ 2 ತಿಂಗಳಿನ ಮಗು ಕಲ್ಯಾಣಿ ವಚನವನ್ನು ಹೇಳಿ ಜನರನ್ನು ಬೆರಗಾಗಿಸಿದಳು




ಪೀಠಾರೋಹಣ ಮುನ್ನ ಬಸವ ಧ್ವಜಕ್ಕೆ ವಂದನೆ




ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳಿಂದ ಧ್ವಜಾರೋಹಣ




.ಪೀಠಾರೋಹಣಕ್ಕೆ ಮುನ್ನ ಪೂಜ್ಯ ಮಾತಾಜಿಯವರಿಂದ ಶೂನ್ಯ ಪೀಠ ಸ್ಥಾಪನೆ ಕುರಿತು ಪ್ರಸ್ತಾವನೆ



ಧರ್ಮಪಿತರ ಮೂರ್ತಿಗೆ ಮೊದಲನೆಯ ಪೀಠಾರೋಹಣದ ಗೌರವ



ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ ಮೂರ್ತಿಗೆ ಗೌರವಾರ್ಪಣೆ



ಪೂಜ್ಯ ಮಾತಾಜಿಯವರ ಪಾದಪೂಜೆ ಮಾಡಿ ಪೂಜ್ಯ ಸಿದ್ಧರಾಮ ಸ್ವಾಮಿಗಳು ಗೌರವಾರ್ಪಣೆ ಮಾಡುತ್ತಿದ್ದಾರೆ



4ವರ್ಷದ 3 ತಿಂಗಳಿನ ನೀಲಾಂಬಿಕೆ ಮತ್ತು 2 ವರ್ಷ 2 ತಿಂಗಳಿನ ಕಲ್ಯಾಣ ನೃತ್ಯ ಮಾಡಿ ಶರಣರ ಮನಸ್ಸನ್ನು ಸೆಳೆದರು.



ಬೀದರ ಬಸವ ಮಂಟಪದ ಅನಾಥ ಮಕ್ಕಳು ನೃತ್ಯದಿಂದ ಎಲ್ಲರನ್ನು ನಲಿಸಿದರು.

ಲಿಂಗಾಯತ ಮತ್ತು ವೀರಶೈವ ಎಂಬ ಡಾ॥ ಚಿದಾನಂದ ಮೂರ್ತಿಯವರ ಅಭಿಪ್ರಾಯ ಅಸಮಂಜಸ

ಪತ್ರಿಕೆಗಳಲ್ಲಿ ಪ್ರಕಟವಾದಂತೆ, ಡಾ. ಚಿದಾನಂದ ಮೂರ್ತಿ ಅವರು, ವಿಶ್ವ ವೀರಶೈವ ಸಂಸ್ಕೃತಿ ಪ್ರತಿಷ್ಠಾನ ರಂಗ ಮಂದಿರ, ಬೆಂಗಳೂರಿನಲ್ಲಿ 15-4-2007ರಂದು ಏರ್ಪಡಿಸಿದ್ದ ಜಗಜ್ಯೋತಿ ಶ್ರೀ ಬಸವೇಶ್ವರ ಸದ್ಭಾವನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ವೀರಶೈವರು ಹಾಗೂ ಲಿಂಗಾಯತರು ಬೇರೆ ಬೇರೆಯಲ್ಲ, ಇವೆರಡೂ ಬೇರೆ ಬೇರೆ ಪದಗಳಾಗಿರಬಹುದು. ಆದರೆ ಒಂದೇ ಸಮಾಜವನ್ನು ಸೂಚಿಸುತ್ತವೆ, ವೀರಶೈವರು ಮತ್ತು ಲಿಂಗಾಯತರನ್ನು ಬೇರೆ ಬೇರೆ ಎಂದು ವಿಭಜಿಸಿ, ಬೆಂಕಿಯ ಕಿಡಿಯನ್ನು ಕೆಲವರು ಹಚ್ಚಿದ್ದಾರೆ, ಇದರಿಂದ ಸಮಾಜದಲ್ಲಿ ಒಡಕು ಮೂಡಿದೆ. ಬಸವಣ್ಣನವರು ವಚನವೊಂದರಲ್ಲಿ ತಮ್ಮನ್ನು ವೀರಶೈವ ಎಂದು ಕರೆದುಕೊಂಡಿದ್ದಾರೆ, ಹಾಗೆಯೇ ಲಿಂಗ ಧರಿಸುವವರು ಲಿಂಗಾಯತರು ಎಂದೂ ಹೇಳಿದ್ದಾರೆ, ಹೀಗಿರುವಾಗ ಇವೆರೆಡು ಬೇರೆ ಬೇರೆ ಹೇಗಾಗುತ್ತದೆ? ಎಂದು ಪ್ರಶ್ನಿಸಿರುವುದು ಖಂಡನಾರ್ಹ.

ಡಾ. ಚಿದಾನಂದ ಮೂರ್ತಿಯವರು ಅದೇ ರಾಗ ಅದೇ ಹಾಡು..ಲಿಂಗಾಯತಕ್ಕೆ ವೀರಶೈವವನ್ನು ಸಮೀಕರಿಸಿ, ಕಲಸು ಮೇಲೋಗರ ಮಾಡಿ, ಪುರೋಹಿತಶಾಹಿ ವ್ಯವಸ್ಥೆಯನ್ನು ಊರ್ಜಿತಗೊಳಿಸುವ ಕುತಂತ್ರ ಇಲ್ಲಿ ಎದ್ದು ಕಾಣುತ್ತದೆ. ವೀರಶೈವರು ಮತ್ತು ಲಿಂಗಾಯತರು ಮೂಲತಃ ಬೇರೆ ಬೇರೆಯಾಗಿರುವುದರಿಂದಲೇ ಅವರು ಬೇರೆ ಬೇರೆಯವರಲ್ಲ ಎಂದು ಸೃಷ್ಟಿಸಿ ಹೇಳಿರುವುದು. ಬೆ..ಯ ಕಿಡಿಯನ್ನು ಹಚ್ಚಿದ್ದಾರೆ ಎಂಬುದು ಸತ್ಯಕ್ಕೆ ಬಲು ದೂರ. ಕೆಲವರು ವೀರಶೈವ - ಲಿಂಗಾಯತ ವ್ಯತ್ಯಾಸಗಳನ್ನು ತಿಳಿಸಿ, ಜ್ಞಾನದ ಕಿಡಿಯನ್ನು ಹಚ್ಚಿರುವುದರಿಂದ ಸಮಾಜದಲ್ಲಿ ವೈಚಾರಿಕ ಪ್ರಜ್ಞೆ ಮೂಡಿ, ಸಂಘಟನೆಗೆ ದಾರಿಯಾಗಿದೆ. ವೈದಿಕ ಮೂಲದ ಶೈವ ಬ್ರಾಹ್ಮಣ ಜಾತಿಯಲ್ಲೇ ಹುಟ್ಟಿ, ವೈದಿಕ ಆಚರಣೆಗಳನ್ನೇ ವಿರೋಧಿಸಿ, ಹೊಸದಾಗಿ ಲಿಂಗಾಯತ ಧರ್ಮವನ್ನು ಸ್ಥಾಪಿಸಿದ ಗುರು ಬಸವಣ್ಣನವರು, ಅದೇ ವೈದಿಕ ಮೂಲದ, ಶೈವ ಧರ್ಮದ ಒಂದು ಪಂಥವಾದ, ವೈದಿಕ ಆಚರಣೆಗಳಿಗೆ ನಿಷ್ಠವಾದ, ಮೊದಲೇ ಇದ್ದ ವೀರಶೈವ ಪಂಥವನ್ನು ಮತ್ತೆ ಸ್ಥಾಪಿಸಿಲ್ಲ; ತಮ್ಮನ್ನು ವೀರಶೈವ ಎಂದು ಕರೆದುಕೊಂಡಿಲ್ಲ. ಲಿಂಗಾಯತ - ವೀರಶೈವ ಸ್ಪಷ್ಟವಾಗಿ ಬೇರೆಬೇರೆ ಎನ್ನುವುದಕ್ಕೆ ಇರುವ ಹಲವಾರು ವ್ಯತ್ಯಾಸಗಳಲ್ಲಿ ಕೆಲವು ಹೀಗಿವೆ.

<u>ಲಿಂಗಾಯತ ಧರ್ಮ</u>	<u>ವೀರಶೈವ ಮತ</u>
1. ಲಿಂಗಾಯತ ಬಸವಣ್ಣನವರಿಂದ ಸ್ಥಾಪನೆಯಾದುದು	1. ವೀರಶೈವ ಮತ ಬಸವ ಪೂರ್ವದಲ್ಲಿ ಇದ್ದುದು
2. ಲಿಂಗಾಯತಧರ್ಮ ಒಂದು ಪರಿಪೂರ್ಣ ಧರ್ಮ	2. ವೀರಶೈವ ಒಂದು ವಿಶಿಷ್ಟ ಶೈವ ಪಂಥ
3. ಲಿಂಗಾಯತ ವೈದಿಕದ ವಿರುದ್ಧ ಹುಟ್ಟಿದ ಧರ್ಮ	3. ವೀರಶೈವ ವೈದಿಕ ಮೂಲದ ಶೈವ ಮತದ ಶಾಖೆ
4. ಲಿಂಗಾಯತ ಧರ್ಮ ಒಂದು ದೊಡ್ಡ ಸಮುದ್ರವಿದ್ದಂತೆ	4. ವೀರಶೈವ ಆ ಸಮುದ್ರದಲ್ಲಿ ಸೇರಿ ಕೊಂಡಿರುವ ಸಣ್ಣ ನದಿಯಂತೆ
5. ಲಿಂಗಾಯತ ವರ್ಣಾಶ್ರಮವನ್ನು ನಿರಾಕರಿಸುತ್ತದೆ.	5. ವೀರಶೈವವು ವರ್ಣಾಶ್ರಮವನ್ನು ಪಾಲಿಸುತ್ತದೆ
6. ಲಿಂಗಾಯತ ಧರ್ಮಕ್ಕೆ ವಚನ ಸಾಹಿತ್ಯ ಆಧಾರ	6. ವೀರಶೈವ ಮತಕ್ಕೆ ವೇದ, ಆಗಮಗಳು ಆಧಾರ

7. ಲಿಂಗಾಯತರ ದೇವ ಮಂತ್ರ ಓಂ ಲಿಂಗಾಯ ನಮಃ	7. ವೀರಶೈವರ ಮಂತ್ರ ಓಂ ನಮಃ ಶಿವಾಯ
8. ಲಿಂಗಾಯತರು ತ್ರಿಮೂರ್ತಿಗಳಿಗೆ ಅತೀತನಾದ ಸೃಷ್ಟಿಕರ್ತ ಲಿಂಗದೇವನ ಪೂಜಕರು	8. ವೀರಶೈವರು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ಪೂಜಕರು
9. ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ ಶಿವ ಭಕ್ತರನೆಲ್ಲ ಒಂದೇ ಎನ್ನುವುದು ವಚನ ಪ್ರಣೀತ ಲಿಂಗಾಯತ ಧರ್ಮ.	9. ಗುರು ವರ್ಗ ಬೇರೆ, ಭಕ್ತ ವರ್ಗ ಬೇರೆ, ಎಂದು ಮತ್ತು ಸಮಾಜದಲ್ಲಿಯೇ ಜಾತಿ ವ್ಯತ್ಯಾಸ ಮಾಡುವುದು ವೀರಶೈವ ಮತ

ಲಿಂಗಾಯತ ಧರ್ಮವು ಬಸವಣ್ಣನವರ ಸ್ವತಂತ್ರ ಪರಿಕಲ್ಪನೆಯೇ ಹೊರತು ಅದು ವೀರಶೈವಕ್ಕೆ ಪರ್ಯಾಯವಾಗಲಿ, ಶೈವದ ಮುಂದುವರಿಕೆಯಾಗಲಿ, ವೈದಿಕ ಜನ್ಯವಾಗಲಿ, ಸಂಸ್ಕೃತ ಜನ್ಯವಾಗಲಿ ಅಲ್ಲ. ಲಿಂಗ ಧರಿಸುವುದರಿಂದಲೇ ಧರ್ಮದ ಅನುಯಾಯಿತ್ವ ಬರುವುದು ಆದರಿಂದ ಅಂಗದ ಮೇಲೆ ಲಿಂಗ ಧರಿಸಿದವರೆಲ್ಲರೂ ಲಿಂಗಾಯತರೇ ವಿನಾ ವೀರಶೈವರಲ್ಲ. ಹೀಗಾಗಿ ವೀರಶೈವವು ಬಸವ ಪೂರ್ವದ ವೈದಿಕ ಮೂಲದ, ಶೈವ ಮತದ, ಸಪ್ತ ಪಂಥಗಳಲ್ಲಿ ಕೇವಲ ಒಂದು ಪಂಥವೇ ಹೊರತು ಅದು ಸ್ವತಂತ್ರ ಧರ್ಮವಲ್ಲ. ಆದರೆ ಲಿಂಗಾಯತ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ, ವಚನ ಸಾಹಿತ್ಯ ಸಂವಿಧಾನದ, ಕಾಲ - ದೇಶಕ್ಕತೀತವಾದ, ಪ್ರಗತಿ ಪರವಾದ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ, ಉದ್ಯೋಗ- ಲಿಂಗ- ಜಾತಿ- ಭೇದಗಳಿಲ್ಲದೆ, ಆಸಕ್ತಿ ಹೊಂದಿದ ಎಲ್ಲ ಮಾನವರಿಗೆ ಧರ್ಮ ಸಂಸ್ಕಾರ ನೀಡಿದ ಪರಿಪೂರ್ಣ ಸ್ವತಂತ್ರ ದರ್ಮ.

ಹಲವಾರು ಸಂಘ - ಸಂಸ್ಥೆಗಳ ಹೆಸರು, ಧಾರವಾಡದ ಪುರ ಭವನ, ಉತ್ತರ ಕರ್ನಾಟಕದ ಖಾನಾವಳಿಗಳ ನಾಮ ಫಲಕಗಳು ಲಿಂಗಾಯತ ಹೆಸರಿನಲ್ಲಿವೆ. ಅನೇಕ ಜಾತಿ ಒಳ ಪಂಗಡಗಳ ಹೆಸರುಗಳ ಹಿಂದೆ ಲಿಂಗಾಯತ ಪದವಿದೆ. ಲಿಂಗಾಯತ ಧರ್ಮವು ಜಾಗತಿಕ ಮಟ್ಟದಲ್ಲಿ ಬೆಳೆಯ ಬೇಕಾದರೆ ಲಿಂಗಾಯತ ಪದ ಬಳಕೆಗೆ ತಂದಾಗ ಮಾತ್ರ ಸಾಧ್ಯ. ಬಸವಣ್ಣನವರು ಜಾತ್ಯತೀತ ಪರಿಕಲ್ಪನೆಯಲ್ಲಿ, ಸಮಾನತೆಯ ವೇದಿಕೆ ಸೃಷ್ಟಿಸಲು, ಸರ್ವಜನಾಂಗಕ್ಕಾಗಿ ಹುಟ್ಟುಹಾಕಿದ್ದು ಲಿಂಗಾಯತ ಧರ್ಮವನ್ನು.

ಆದುದರಿಂದ, ವೀರಶೈವ - ಲಿಂಗಾಯತ ನಡುವಿನ ಅಂತರವನ್ನು ಅರಿಯದೆ, ಅರಿತಿದ್ದರೂ ಒಪ್ಪದೆ, ಎರಡನ್ನೂ ಒಂದೇ ಎಂದು ಹೇಳಿ, ಜನರಿಗೆ ದಾರಿ ತಪ್ಪಿಸುವ ಪ್ರಯತ್ನ ಮಾಡುವುದು ಸರಿಯಲ್ಲ.

- ಶರಣ. ಮಲ್ಲಿಕಾರ್ಜುನಪ್ಪ,
ರಾಷ್ಟ್ರೀಯ ಬಸವ ದಳ , ಕೊಳ್ಳೇಗಾಲ

<u>ವಿಶೇಷ ಸೂಚನೆ:</u> ದಿ. 22-4-2007 ಶರಣ.ಡಾ॥ ಸಿ.ಸೋಮಶೇಖರ್ ಕೆ.ಎ.ಎಸ್ ಅವರನ್ನು ಐ.ಎ.ಎಸ್. ಪದೋನ್ನತಿಗಾಗಿ ಅಭಿನಂದಿಸಲಾಯಿತು. ಅವರಿಗೆ ಅರ್ಪಿಸಿದ ಅಭಿನಂದನ ಪತ್ರದ ವಿವರವನ್ನು ಮುಂದಿನ ಜೂನ್ ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು. ಸ್ಥಳಾಭಾವದಿಂದ ಈ ಸಲ ಪ್ರಕಟಿಸಲು ಆಗದುದಕೆ ವಿಷಾದಿಸುತ್ತೇವೆ.

-ಸಂ

ವಚನ ದುಂದುಭಿ-3

ಕಲ್ಯಾಣ ಕಿರಣದಲ್ಲಿ ವಚನ ದುಂದುಭಿ ಎನ್ನುವ ಅಂಕಣವೊಂದನ್ನು ಪ್ರಾರಂಭಿಸಲಾಗಿದ್ದು, ಇದನ್ನ ಇನ್ನು ಮುಂದೆ ಪ್ರತಿ ತಿಂಗಳೂ ಪ್ರಕಟಿಸಲಾಗುವುದು. ಇದರಲ್ಲಿ ಪ್ರತಿ ತಿಂಗಳು 20/25 ಪ್ರಶ್ನೆಗಳು ಪ್ರಕಟವಾಗುತ್ತದೆ. ಪ್ರತಿ ವರ್ಷ ಕಲ್ಯಾಣ ಪರ್ವ ಮತ್ತು ಶರಣ ಮೇಳದಲ್ಲಿ ನಡೆಯುವ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಈ ಅಂಕಣದಲ್ಲಿ ಪ್ರಕಟವಾದ ಪ್ರಶ್ನೆಗಳನ್ನು ಕೇಳಲಾಗುವುದು. ಮತ್ತು ಈ ಪ್ರಶ್ನೆಗಳಿಗೆ ಸರಿ ಉತ್ತರಗಳನ್ನು ತಾವು ಅಂಚೆ ಕಾರ್ಡ್‌ನಲ್ಲಿ ಬರೆದು, ವಚನ ದುಂದುಭಿ ವಿಭಾಗೆ ಎಂದು ಕಾಣಿಸಿ ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳುಹಿಸಬೇಕು. ಸರಿಯುತ್ತರ ಕೊಟ್ಟವರ ಹೆಸರುಗಳನ್ನು ಕಲ್ಯಾಣ ಕಿರಣ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಶ್ನೆಗಳು

1. ಗುರು ಬಸವಣ್ಣನವರು ಕಲ್ಯಾಣದಲ್ಲಿ ವಾಸವಾಗಿದ್ದ ಅವಧಿ ಎಷ್ಟು?
2. ದ್ವಿತೀಯ ಶಂಭು ಎಂದು ಯಾರನ್ನು ಕರೆಯುತ್ತಾರೆ?
3. ಚೆನ್ನಬಸವಣ್ಣನವರ ಜನ್ಮ ಸ್ಥಳ ಯಾವುದು?
4. ಅಕ್ಕಮಹಾದೇವಿ ತಾಯಿಯವರಿಗೆ ಯಾವುದು ಬಾಸಿಂಗ?
5. ನಂದಿ ಗ್ರಾಮವು ಯಾವ ಶರಣರಿಗೆ ಸಂಬಂಧಿಸಿದ ಸ್ಥಳ?
6. ಕಲ್ಯಾಣದಲ್ಲಿ ದನಗಳನ್ನು ಕಾಯುವ ಕಾಯಕ ಮಾಡುತ್ತಿದ್ದ ಶರಣ ಯಾರು?
7. ಅವ್ವ ನೀಲಾಂಬಿಕೆಯವರ ಧಾರೆ ಸೀರೆಯ ಸ್ಪರ್ಶದಿಂದ ಪರಿವರ್ತನೆಯಾದ ವೇಶ್ಯೆ ಯಾರು?
8. ಬೇಡೆನ್ನ ಕಂದ ನಿನ್ನೊಡನೆ ಬಪ್ಪೆಂ ನಿಂದಲ್ಲಿ ನಿಂದಪೆಂ......... ಈ ಆಶ್ವಾಸನೆಯನ್ನು ಯಾರು ಯಾರಿಗೆ ನೀಡಿದರು?
9. "ಮನವುಂಟೇ ಮರುಳೇ ಶಿವಯೋಗಿಗೆ" ಎಂದು ಯಾರು ಯಾರಿಗೆ ಹೇಳಿದರು?
10. ಅರಿವಿನ ಮಾರಿ ತಂದೆಗಳ ವಚನಾಂಕಿತವೇನು?
11. "ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ" ಎಂದರೇನು?
12. ಶರಣರು ಬರೆದ ವಿಶೇಷ ರಾಗಬದ್ಧವಾದ ವಚನಗಳಿಗೆ ಇರುವ ಹೆಸರೇನು?
13. ಅಳಿ ಸಂಕುಲವೇ ಮಾಮರವೇ, ಬೆಳದಿಂಗಳೇ ಕೋಗಿಲೆಯೇ........ ಈ ವಚನವನ್ನು ಅಕ್ಕ ಯಾವ ಸಂದರ್ಭದಲ್ಲಿ ಹೇಳಿದ್ದಾರೆ?
14. "ಬಸವನ ರಕ್ಷೆಯೇ ರಕ್ಷೆ; ಶಿಕ್ಷೆಯೇ ಶಿಕ್ಷೆ ಲೋಕದೊಳ್" ಎಂದು ಹೇಳಿದವರು ಯಾರು?
15. ಭಾರಿ ಅಬ್ಬರ ಹೊತ್ತು ಆರೂಢ ಭಿಕ್ಷೆ ಬೇಡುತ್ತಿರುವ ನಾರಿ ಯಾರು?
16. ಯಾರು ತಮ್ಮ ವಚನದಲ್ಲಿ ನಾ ನಿಮ್ಮ ಧರ್ಮದ ಕವಿಲೆ ಎಂದು ಹೇಳಿದ್ದಾರೆ?
17. ತ್ರಿಪದಿ ಬ್ರಹ್ಮ ಎಂದು ಯಾರನ್ನು ಕರೆಯುತ್ತಾರೆ?
18. ಪರಮಾತ್ಮನು ಜಗದ ಯಂತ್ರ ವಾಹಕ ಎಂದು ಅಕ್ಕ ತನ್ನ ಯಾವ ವಚನದಲ್ಲಿ ಹೇಳಿದ್ದಾರೆ?
19. ಅರಸುವ ಬಳ್ಳಿ ಕಾಲ ಸುತ್ತಿತೆಂಬಂತೆ ಬಯಸುವ ಬಯಕೆ ಕೈ ಸಾರಿದಂತೆ.... ಎಂದು ಏನನ್ನು ಪಡೆದು ಬಳಿಕ ಪ್ರಭುದೇವರು ಹಾಡುತ್ತಿದ್ದಾರೆ?
20. ಅಕ್ಷರ ತ್ರಯಗಳು ಯಾವುವು?
21. ವಚನ ಸಾಹಿತ್ಯ ರಕ್ಷಣೆಗೆ ಖಡ್ಗ ಹಿಡಿದು ಹೋರಾಡಿದ 3ಜನ ಪ್ರಮುಖರು ಯಾರು?
22. ಬಿಜ್ಜಳ ಮಹಾರಾಜನನ್ನು ಯಾರು ಕೊಲೆ ಮಾಡಿದರು?
23. ತ್ರಿಕಾಂಡಗಳು ಯಾವುವು?
24. ಆರೂಢ ಎಂದರೆ ಯಾರು?
25. ಕಲ್ಯಾಣ ಕ್ರಾಂತಿಯ ನಂತರ ಶರಣರು ಮತ್ತೆ ಅನುಭವ ಗೋಷ್ಠಿ ಮತ್ತು ದಾಸೋಹಗಳನ್ನು ಎಲ್ಲಿ ಮಾಡಿದರು?

ವಚನ ದುಂದುಭಿ-2ರ ಸರಿ ಉತ್ತರಗಳು

1. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು
2. 5ನೆಯ ಶರಣ ಮೇಳದಲ್ಲಿ
3. ನಿಜಗುಣ ಶಿವಯೋಗಿಗಳು
4. ಭಾವ, ಸದ್ಭಾವ, ನಿರ್ಭಾವ
5. ರೇಕಣ್ಣ ಪ್ರಿಯ ನಾಗಿನಾಥ
6. ಅಲ್ಲಮಪ್ರಭುದೇವರು ಅಕ್ಕಮಹಾದೇವಿಯವರಿಗೆ
7. ಶರಣೆ. ಗಂಗಮ್ಮ ಮತ್ತು ಲಿಂ॥ ಶರಣ. ಡಾ. ಬಸಪ್ಪ
8. ಮದ್ದಳೆ ನುಡಿಸುತ್ತಿದ್ದರು
9. ತಂಗಡಗಿ
10. ಕಾಯ-ವಚನ- ಮನ
11. ಸ್ಥೂಲ, ಸೂಕ್ಷ್ಮ, ಕಾರಣ, ನಿರ್ಮಲ, ಚಿನ್ಮಯ, ಚಿದ್ರೂಪ, ಆನಂದ, ಮತ್ತು ಮಹಾತನು
12. ಗದುಗಿನ ಸಮೀಪದ ಸೊರಟೂರು
13. ಜಗನ್ಮಾತಾ ಅಕ್ಕಮಹಾದೇವಿ
14. ಸದಾಚಾರ
15. 1134
16. ಗುರುವಿನ ಗುರು ಪರಮಗುರು ಪರಮಾರಾಧ್ಯ ಎಂದು
17. ಬೋಳ ಬಸವೇಶ
18. ಮುಕ್ತಾಯಕ್ಕ ಪ್ರಭುದೇವರಿಗೆ ಹೇಳಿದ ಮಾತು
19. ಚನ್ನಬಸವಣ್ಣನವರು -ಪ್ರಭುದೇವರಿಗೆ ಹೇಳಿದ ಮಾತು
20. ಅಕ್ಕಮಹಾದೇವಿಯು ಕೌಶಿಕ ಮಹಾರಾಜನಿಗೆ ಹೇಳಿದ ಮಾತು
21. ಅಲ್ಲಮ ಪ್ರಭುದೇವರು
22. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು
23. ಜಗನ್ಮಾತಾ ಅಕ್ಕಮಹಾದೇವಿ
24. ಕೊಲ್ಹಾಪುರ ಜಿಲ್ಲೆಯ ಆಳತೆ ಗ್ರಾಮದಲ್ಲಿರುವ ಅಲ್ಲಮ ಗಿರಿ
25. ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ

ವಚನ ದುಂದುಭಿ - 2ರ ಸರಿಯುತ್ತರ ನೀಡಿದವರು

1. ನಿರ್ಮಲಾ ಜಯದೇವ, ಬೆಂಗಳೂರು
2. ಎಸ್.ಎನ್.ನಂದರಗಿ, ಧಾರವಾಡ
3. ಹೆಚ್.ಶಾಂತಮ್ಮ, ಭದ್ರಾವತಿ
4. ಹೆಚ್.ಚಂದ್ರಿಕಾ ,ಭದ್ರಾವತಿ
5. ವಿಜಯಾ ರಾಜು, ಭದ್ರಾವತಿ
6. ಎಸ್.ಎನ್.ನಂದರಗಿ,ಧಾರವಾಡ
7. ಬಸವರಸ, ಬೆಂಗಳೂರು
8. ಕಾಶವ್ವ ತೋಟಗಿ, ಬೈಲಹೊಂಗಲ

ಶರಣ ಬಂಧುಗಳೇ, ದಯವಿಟ್ಟು ನೀವು ನಿಮ್ಮ ಮನೆಯನ್ನು ಬದಲಾಯಿಸಿದರೆ ನಿಮ್ಮ ಸರಿಯಾದ ಹೊಸ ಮತ್ತು ಹಳೆಯ ವಿಳಾಸಗಳನ್ನು ಮತ್ತು ನಿಮಗೆ ಕಲ್ಯಾಣ ಕಿರಣ ತಲುಪದೆ ಇದ್ದರೆ ಒಂದು ಪತ್ರದ ಮೂಲಕ ಕಲ್ಯಾಣ ಕಿರಣ ವಿಭಾಗಕ್ಕೆ ತಿಳಿಸಬೇಕಾಗಿ ವಿನಂತಿ.

ಓಂ ಶ್ರೀಗುರು ಬಸವ ಲಿಂಗಾಯನಮಃ

೮೬೬೬೬೬

ಬಸವ ಧರ್ಮಪೀಠ, ಕೂಡಲ ಸಂಗಮ,
ವಿಶ್ವಕಲ್ಯಾಣ ಮಿಷನ್, ರಾಷ್ಟ್ರೀಯ ಬಸವದಳ,ಬೆಂಗಳೂರು
ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಬೆಂಗಳೂರು
೮೦ ವರ್ಷ ಪೂರ್ಯೈಸಿದ, ಹಿರಿಯ ಚೇತನ, ಸೇವಾತಪಸ್ವಿ, ತ್ರಿವಿಧ ದಾಸೋಹಿ ಶರಣ ಎನ್. ಪುಟ್ಟರುದ್ರ ಅವರಿಗೆ ಬಸವ ರಕ್ಷೆಯೊಡನೆ ಅರ್ಪಿಸಿದ ಶುಭ ಹಾರೈಕೆ ಪತ್ರ.

ಶರಣ ಮಾನ್ಯರೇ,

ತಾವು ಸವೆಸಿದ ೮೦ ವರ್ಷಗಳ ದಾರಿಯ ಒಂದೊಂದು ಕ್ಷಣವೂ ಪರಾರ್ಥಕ್ಕಾಗಿಯೇ ಸಾರ್ಥಕವಾಗಿ ವಿನಿಯೋಗವಾಗಿರುವುದು, ನಮಗೆ ತುಂಬಾ ಹೆಮ್ಮೆಯ ವಿಷಯವಾಗಿದೆ. ದೈವ ಭಕ್ತರು ಸರಳ ಸಜ್ಜನರೂ ಆಗಿದ್ದ ವೈದ್ಯರಾದ ಶರಣ ಪಂಡಿತ್ ನಂಜುಂಡಪ್ಪ ಮತ್ತು ಶರಣೆ ಚೆನ್ನವೀರಮ್ಮನವರ ಸುಪುತ್ರರಾಗಿ ಜನಿಸಿದಿರಿ. ಶರಣ ಪರಂಪರೆಯಲ್ಲಿ ಸಾಗಿ ಬಂದ ತಂದೆ-ತಾಯಿ; ಮನೆಯ ಪರಿಸರದಿಂದಾಗಿ ಬಾಲ್ಯದಿಂದಲೇ, ದೈವಭಕ್ತಿ, ಗುರು ಹಿರಿಯರಲ್ಲಿ ಗೌರವ, ಪರೋಪಕಾರದಲ್ಲಿ ಆಸಕ್ತಿ ಬೆಳೆಸಿಕೊಂಡಿರಿ. ಪ್ರಾಥಮಿಕ ಶಾಲೆಯಿಂದ ಹಿಡಿದು ಬಿ.ಇ. ಪದವಿಯವರೆಗೂ ಉತ್ತಮರೀತಿಯಲ್ಲಿ ತೇರ್ಗಡೆಯಾಗುತ್ತ ಬಂದಿರಿ. ಲೋಯರ ಸೆಕಂಡರಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೆಯ ರ್‍ಯಾಂಕ್ ಪಡೆದಿರಿ. ನಿಮ್ಮ ಆತ್ಮ ಸ್ಥೈರ್ಯದ ಪರೀಕ್ಷೆ ಏನೊ ಎಂಬಂತೆ ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರೂ, ಎದೆಗೆಡದೆ ವಿದ್ಯಾಭ್ಯಾಸ ಮುಂದುವರೆಸಿದಿರಿ. ಕಠಿಣ ಪರಿಶ್ರಮದಿಂದ ಬಿ.ಎಸ್‌ಸಿ ಪದವಿಯನ್ನು, ನಂತರ ಬಿ.ಇ. ಪದವಿಯನ್ನು ಪಡೆದಿರಿ.

ಕಾಯಕ ಯೋಗಿಯೇ,

ಬಿ.ಇ. ಪದವಿ ಪೂರೈಸುತ್ತಲೇ ತಾವು ಮುಂಬೈ ರಾಜ್ಯದಲ್ಲಿ ಸರ್ಕಾರಿ ಸೇವೆಯಲ್ಲಿ ೧೯೫೩ರಲ್ಲಿ ಮೈಸೂರ್ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರ ಆಗಿ ಅಂದಿನ ವಿದ್ಯುತ್ ಇಲಾಖೆಗೆ

ಎರವಲ ಸೇವೆಗೆ ಬಂದಿರಿ. ಅವಧಿ ಪೂರ್ಣ ಅಲ್ಲೇ ಕಾಯಕ ಮಾಡುತ್ತ ಸೇವೆಯ ಉನ್ನತ ಶ್ರೇಣಿಯ ಸೂಪರಿಂಟೆಂಡಿಂಗ್ ಇಂಜಿನಿಯರ ಆಗಿ ೧೯೮೭ರಲ್ಲಿ ಸೇವೆಯಿಂದ ನಿವೃತ್ತರಾದಿರಿ. ಸರ್ಕಾರಿ ಅಥವಾ ಖಾಸಗಿ ವೃತ್ತಿಯಲ್ಲಿ ತೊಡಗಿ ಉನ್ನ ತ ಹುದ್ದೆಗೆ ಏರಿ ನಿವೃತ್ತರಾಗುವ ಕೋಟಿ ಕೋಟಿ ಜನರು ಉಂಟು; ಆದರೆ ನಿಮ್ಮ ಕಾಯಕದ ಬಗೆಯೇ ಬೇರೆ.

೧. ಎಂದೂ ಸಮಯದ ಅಪವ್ಯಯ ಮಾಡದೆ ಕಛೇರಿಯ ಅವಧಿಯಲ್ಲಿ ಮಾತ್ರವಲ್ಲದೆ ಅಂದಿನ ಕೆಲಸ ಮುಗಿಯುವವರೆಗೆ ರಾತ್ರಿ ಬಹು ಹೊತ್ತಿನವರೆಗೆ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ವಿಶೇಷತೆ ನಿಮ್ಮದು.

೨. ಲಂಚ, ಭ್ರಷ್ಟಾಚಾರ ನಿಮ್ಮ ಮುಂದೆ ಸುಳಿಯಲೇ ಇಲ್ಲ. ತಮ್ಮ ಒಂದು ವಸ್ತುವನ್ನು ಕೆ.ಇ.ಬಿ ಗೆ ಒದಗಿಸಲು ಬಹುದೊಡ್ಡ ಮೊತ್ತವನ್ನು ಲಂಚವಾಗಿ ತೆಗೆದುಕೊಂಡು ಬಂದ ಸುದ್ದಿ ತಿಳಿದು ಆ ಪ್ರಭಾವ ಶಾಲಿಯ ಮುಖ ಸಹ ನೋಡದೆ ಕಳಿಸಿದ ಸಂಗತಿ ನಮಗೆ ಮತ್ತೊಬ್ಬ ದಕ್ಷ ಅಧಿಕಾರಿಯಿಂದ ತಿಳಿದು ಬಂದಾಗ ಆದ ಸಂತೋಷ ಅಷ್ಟಿಷ್ಟಲ್ಲ. ಯಾವುದೇ ವಸ್ತುವಿನ ಗುಣಮಟ್ಟವನ್ನು ಖಂಡತುಂಡವಾಗಿ ಪರೀಕ್ಷಿಸುತ್ತಿದ್ದ ನೀವು ಸಾರ್ವಜನಿಕ ರಂಗದ ಸರಕಾರಿ ಕೆಲಸ ದೇವರ ಪೂಜೆಯಷ್ಟೇ ಪವಿತ್ರವೆಂದು ಭಾವಿಸಿದ್ದಿರಿ.

೩. ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದರೂ ಸರ್ಕಾರಿ ವಸ್ತುಗಳನ್ನು ದುರುಪಯೋಗ ಮಾಡಿಕೊಳ್ಳದ ಪ್ರಾಮಾಣಿಕರು ನೀವು. ನಮ್ಮ ಸಂಸ್ಥೆಯ ಕಟ್ಟಡ, ಬಸವ ಮಂಟಪ ಕಟ್ಟುವಾಗ ನಿಮ್ಮ ಸೇವೆಯನ್ನು ಮಧ್ಯಾಹ್ನದ ಬಿಡುವಿನ ಅವಧಿ ಮತ್ತು ಸಂಜೆ ಸರ್ಕಾರಿ ಸೇವೆಯ ಅವಧಿ ದಾಟಿದ ಮೇಲೆ ನೀಡುತ್ತಿದ್ದಿರಿ. ಸರ್ಕಾರಿ ಜೀಪಿನಲ್ಲಿ ಕೆ.ಇ.ಬಿ ಕಾರ್ಯಾಲಯಕ್ಕೆ ಬಂದವರು ನಮ್ಮ ಕಟ್ಟಡದ ಬಳಿಗೆ ನಡೆದು ಬರುತ್ತಿದ್ದಿರೇ ವಿನಾ ಅವಕಾಶವಿದ್ದರೂ ಸರ್ಕಾರಿ ಜೀಪನ್ನು ಬಳಸುತ್ತಿರಲಿಲ್ಲ. ಇದನ್ನು ಕಂಡು ಲಿಂ.ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಎಲ್ಲರ ಮುಂದೆ ಪ್ರಶಂಸಿಸುತ್ತಿದ್ದರು. ಹೀಗೆ ನಿಮ್ಮ ಜೀವನದಲ್ಲಿ ಕಾಯಕವೇ ಕೈಲಾಸ ಎಂಬ ಗುರು ಬಸವಣ್ಣನವರ ಮಹಾನ್ ತತ್ವ ಸಾಕಾರ ಗೊಂಡಿತು. ಕಾಯಕವೇ ನಿಮಗೆ ತಪಸ್ಸಾಯಿತು.

ದೇವ ಭಕ್ತರೇ,

ತಾಯಿ ತಂದೆಯರಿಂದ ಬಳುವಳಿಯಾಗಿ ಬಂದ ಧರ್ಮ ಶ್ರದ್ಧೆಯು ನಿಮ್ಮ ಬದುಕಿನಲ್ಲಿ ಪೂರ್ಣ ವಿಕಸನಗೊಂಡಿತ್ತು. ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಪ್ರವಚನವು ೧೯೭೩ ರಲ್ಲಿ ಬೆಂಗಳೂರಿನ ಚಾಮರಾಜ ಪೇಟೆಯಲ್ಲಿ ನಡೆಯುವಾಗ ನೀವು ಶ್ರೋತೃವಾಗಿ ಬಂದಿರಿ. ಅರಳಿದ ಹೂವಿನ ಸುವಾಸನೆಗೆ ಮಾರು ಹೋಗಿ

ಜೇನು ನೊಣವು ಬರುವಂತೆ ಪೂಜ್ಯ ಗುರುಗಳ ಪ್ರವಚನದ ಸತ್ವಕ್ಕೆ ಮಾರು ಹೋಗಿ ತಾವು ಸಮೀಪ ಬಂದಿರಿ. ಗುರು ಬಸವಣ್ಣನವರ ಸಂದೇಶದಲ್ಲಿ ಇರುವ ಸತ್ವ, ವಚನ ಸಾಹಿತ್ಯದ ಆಳಕ್ಕೆ ಮನ ಸೋತು ಹೆಚ್ಚು ಹೆಚ್ಚು ಅಧ್ಯಯನದಲ್ಲಿ ತೊಡಗಿಸಿಕೊಂಡಿರಿ. ಹೀಗಾಗಿ ನಿಮ್ಮ ಜ್ಞಾನ ಪರಿಧಿ ವಿಸ್ತಾರವಾಗತೊಡಗಿ, ಪುಟಕ್ಕಿಟ್ಟ ಚಿನ್ನದಂತೆ ನಿಮ್ಮ ದೇವಶ್ರದ್ಧೆಯು ವೈಚಾರಿಕತೆಯಿಂದ ಬೆಳಗುತ್ತಲಿದೆ.

ಶ್ರೇಷ್ಠ ಸಮಾಜ ಸೇವಕರೇ,

ದಣಿವರಿಯದ ತನು ದಾಸೋಹಿಯಾಗಿ ಪ್ರಾಮಾಣಿಕತೆ, ದಕ್ಷತೆ, ಸಮಾಜ ಸೇವೆಯ ಕಳಕಳಿ ಇವುಗಳಿಂದ ವಿಶೇಷಿತರಾದ ನಿಮಗೆ ವಿರಾಮ, ವಿಶ್ರಾಂತಿ ಎಂಬುವು ಅಪಥ್ಯ. ಸಾಮಾನ್ಯವಾಗಿ ನಿವೃತ್ತಿಯ ನಂತರ ಮಕ್ಕಳು, ಮೊಮ್ಮಕ್ಕಳೊಡನೆ ಸಮಯ ಕಳೆಯುವವರೇ ಜಾಸ್ತಿ ಇರುವ ಇಂದಿನ ಸಮಾಜದಲ್ಲಿ ಚಟುವಟಿಕೆಯ ಆಗರವಾಗಿ ಸದಾ ಸಮಾಜ ಸೇವೆಯಲ್ಲಿ ತೊಡಗಿರುವ ಸೇವಾತಪಸ್ವಿ ನೀವು. ಧಾರ್ಮಿಕ ಅಧ್ಯಾತ್ಮಿಕ ಸಂಸ್ಥೆಗಳು, ವಿದ್ಯಾರ್ಥಿ ನಿಲಯ ಮುಂತಾದವುಗಳ ನಿರ್ಮಾಣ, ಸಂರಕ್ಷಣೆ, ಮೇಲುಉಸ್ತುವಾರಿ, ಹೀಗೆ - ಹತ್ತು ಹಲವಾರು ರೀತಿಯ ಸಮಾಜ ಸೇವೆಗೆ ಕಂಕಣ ಬದ್ಧರಾಗಿದ್ದೀರಿ.

ಬೆಂಗಳೂರಿನ ಚಾಮರಾಜ ಪೇಟೆಯಲ್ಲಿರುವ ಲಿಂ. ಶರಣ ಬಿ.ಕೆ. ಮರಿಯಪ್ಪ ಹಾಸ್ಟೆಲ್ ಒಂದು ಶ್ರೇಷ್ಠ ಸಂಸ್ಥೆ. ಉಚಿತ ವಿದ್ಯಾರ್ಥಿ ನಿಲಯವಾಗಿರುವ ಅದು ಆರ್ಥಿಕ ಸಂಕಷ್ಟದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಶ್ರಯ ಸಂಸ್ಥೆ. ಅದರ ಬೇರು ಸಂಸ್ಥಾಪಕರಾದ ಶರಣ ಮರಿಯಪ್ಪನವರಾದರೂ ಅದರ ಕಾಂಡವಾಗಿ ನೀವು ಸಂಸ್ಥೆಯನ್ನು ಪೋಷಿಸಿದ್ದೀರಿ. ಒಂದು ರೂಪಾಯಿ ಸಹ ಅಪವ್ಯಯವಾಗದಂತೆ ಸಂಸ್ಥಾಪಕರ ಆಶಯದಂತೆ ಹಾಸ್ಟೆಲ್ ನಡೆಯಲು ಸೂತ್ರಧಾರರಾಗಿದ್ದೀರಿ. ಹೀಗೆ ಸಮಾಜ ಸೇವೆ ನಿಮಗೆ ಒಂದು ತಪಸ್ಸಿನಂತೆ ಆಗಿ, ಗುರು (ಬಸವಣ್ಣನವರು), ಲಿಂಗ(ಸೃಷ್ಟಿಕರ್ತ), ಜಂಗಮ (ಸಮಾಜ)- ಈ ಮೂರಕ್ಕೆ ತನು ಮನ ಧನ ಮೂರನ್ನು ಅರ್ಪಿಸಿ ದುಡಿಯುತ್ತಿರುವ ತ್ರಿವಿಧ ದಾಸೋಹಿಯಾಗಿದ್ದೀರಿ.

ಬಸವ ಧರ್ಮ ಪೀಠದ ಶ್ರೇಷ್ಠ ಮಾರ್ಗದರ್ಶಕರೇ,

೧೯೬೬ರಲ್ಲಿ ಪರಿಚಯವಾದ ನಂತರ ವಿಶ್ವಧರ್ಮ ಪ್ರವಚನ ಸಮಿತಿಯ ಅಧ್ಯಕ್ಷರಾಗಿ ಗುರುಗಳ ಪ್ರವಚನಗಳನ್ನು ಬೆಂಗಳೂರು ನಗರದಾದ್ಯಂತ ಮಾಡಿಸಲು ಮುಂದಾದಿರಿ. ವಿಶ್ವಕಲ್ಯಾಣ ಮಿಷನ್ ಸ್ಥಾಪನೆ, ಬಸವ ಮಂಟಪ ಕಟ್ಟಡ ನಿರ್ಮಾಣ,ಬಸವ ಗಂಗೋತ್ರಿ ಕಾರ್ಯ ವಿಸ್ತಾರ, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಶರಣ ಮೇಳ ಉತ್ಸವ, ಕಲ್ಯಾಣ ಪರ್ವ ಉತ್ಸವ, ಕೂಡಲ ಸಂಗಮದಬಸವ ಧರ್ಮ ಪೀಠ, ಬಸವ ಕಲ್ಯಾಣದ ಬಸವ ಮಹಾಮನೆ, ೧೦೮ ಅಡಿಯ ಬಸವ ಪುತ್ಥಳಿಯ ನಿರ್ಮಾಣ, ದೆಹಲಿಯ ಬಸವ ಮಂಟಪ ಖರೀದಿ, ಲಿಂಗಾಯತ ಧರ್ಮ ಮಹಾಸಭಾದ ಕಾರ್ಯ ಚಟುವಟಿಕೆ, ರಾಷ್ಟ್ರೀಯ ಬಸವ ದಳ ಈ ಎಲ್ಲವುಗಳಲ್ಲಿಯೂ

ಎಲ್ಲವುಗಳಲ್ಲಿಯೂ ನಿಮ್ಮ ಪಾತ್ರ ಹಾಸು ಹೊಕ್ಕಾಗಿದೆ.

ಇಂತಹ ತಮಗೆ ಯಾವ ರೀತಿಯಲ್ಲಿ ಅಭಿನಂದನೆ ಸಲ್ಲಿಸಬೇಕೊ ತಿಳಿಯದು, ಆದ್ದರಿಂದ ನಮ್ಮ ಸಂಸ್ಥೆಗಳ ಪರವಾಗಿ ನಿಮಗೆ ಸನ್ಮಾನವನ್ನು ಮಾಡಲು ಬಯಸಿ ಈ ಶುಭಹಾರೈಕೆಯ ಪತ್ರವನ್ನು ಬಸವ ರಕ್ಷೆ(ಶಾಲು)ಯನ್ನು ಹೊದ್ದಿಸಿ ನೀಡುತ್ತಿದ್ದೇವೆ. ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಗುರು ಬಸವಣ್ಣನವರು ನಿಮಗೆ ಇನ್ನೂ ಹೆಚ್ಚಿನ ಆಯುಷ್ಯವನ್ನು ಮತ್ತು ಆರೋಗ್ಯವನ್ನು ನೀಡಿ ನಿಮ್ಮಿಂದ ಮತ್ತಷ್ಟು ಸೇವೆ ಧರ್ಮ-ಸಮಾಜಗಳಿಗೆ ಸಲ್ಲುವಂತೆ ಮಾಡಲೆಂದು ಆಶಿಸಿ, ಈ ಶುಭ ಸನ್ನಿವೇಶದ ನಿಮಿತ್ತ 'ಮಾತೆಂಬುದು ಜ್ಯೋತಿರ್ಲಿಂಗ' ಎಂಬ ನುಡಿ ಮೌಕ್ತಿಕಗಳ ಕಿರು ಹೊತ್ತಿಗೆಯನ್ನು ಸಹ ನೀಡುತ್ತ ತಮಗೆ ಶುಭವನ್ನು ಹಾರೈಸುತ್ತೇವೆ.

ಬಸವ ಧರ್ಮ ಪೀಠದ ಪರವಾಗಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕೋಶಾಧ್ಯಕ್ಷರು, ಬಸವ ಧರ್ಮ ಪೀಠ,	ಪೀಠಾಧ್ಯಕ್ಷರು, ಬಸವ ಧರ್ಮ ಪೀಠ,
ಕೂಡಲ ಸಂಗಮ	ಕೂಡಲ ಸಂಗಮ

ಬಸವ ಮಂಟಪ ಬೆಂಗಳೂರು, ೨೨-೦೪-೨೦೦೭

ಶ್ರಾವಣ ಮಾಸದಲ್ಲಿ ಬಸವ ಜ್ಯೋತಿ ಕಾರ್ಯಕ್ರಮ

ರಾಷ್ಟ್ರೀಯ ಬಸವ ದಳಗಳು ಇರುವಲ್ಲಿ ಶ್ರಾವಣ ಪ್ರತಿಪದೆಯಿಂದ ಭಾದ್ರಪದ ತೃತೀಯದವರೆಗೆ ಸಂಜೆ ಬಸವ ಜ್ಯೋತಿ ಕಾರ್ಯಕ್ರಮಗಳನ್ನು ಮನೆಮನೆಯಲ್ಲಿ ಏರ್ಪಡಿಸಬೇಕು. 33 ದಿವಸ ಪೂರ್ತಿ ಇದು ನಡೆದು ಚೌತಿಯ ದಿನ ಸಾಮೂಹಿಕವಾಗಿ ಸಮಾರೋಪ ಮಾಡಬೇಕು. ರಾಷ್ಟ್ರೀಯ ಬಸವ ದಳ ಅಥವಾ ಬೇರಾವುದೇ ಬಸವ ತತ್ವವಾದಿ ಸಂಘಟನೆಗಳು ಇಲ್ಲದಲ್ಲಿ ಜನರು ವೈಯಕ್ತಿಕವಾಗಿಯಾದರೂ ತಮ್ಮ ತಮ್ಮ ಮನೆಯಲ್ಲಿ ಬಸವ ಜ್ಯೋತಿಯನ್ನು ಏರ್ಪಡಿಸಬೇಕು. ಭಾದ್ರಪದ ಚೌತಿಯಂದು ರಾಷ್ಟ್ರೀಯ ಬಸವ ದಳಗಳವರ ಬಸವ ಜ್ಯೋತಿಯ ಸಮಾರೋಪ ಸಮಾರಂಭ ಮಾಡಿ, ಪೂಜ್ಯ ಶ್ರೀ ಲಿಂಗಾನಂದ ಜಗದ್ಗುರುಗಳ ಜಯಂತಿಯನ್ನು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ಆಚರಿಸಬೇಕು.

ಕಲ್ಯಾಣ ಪರ್ವದಲ್ಲಿ ಬಿಡುಗಡೆಯಾದ

ಸುಯಿಧಾನ ಸುಗ್ರಂಥ ಮಾಲೆಯ ಹೊಸ ಪ್ರಕಟಣೆಗಳು

ಪುಸ್ತಕ : ವಚನ ದುಂದುಭಿ
ಸಂಪಾದಕರು : ಶರಣ. ಸಚ್ಚಿದಾನಂದ ಚಟನಳ್ಳಿ
ಬೆಲೆ : 30 ರೂ

ಈ ಪುಸ್ತಕದಲ್ಲಿ ವಚನ ಸಾಹಿತ್ಯ ಹಾಗೂ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಸುಮಾರು 1000 ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ. ಧಾರ್ಮಿಕ ಸಮಾವೇಶಗಳಲ್ಲಿ ನಡೆಯುವ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಅತ್ಯಂತ ಉಪಯೋಗ ಪುಸ್ತಕ. ಸರಳವಾಗಿ ಲಿಂಗಾಯತ ಧರ್ಮದ ಬಗ್ಗೆ ತಿಳಿದುಕೊಳ್ಳಲು ಉಪಯೋಗ ವಾಗುವ ಮಹತ್ವಪೂರ್ಣ ಪುಸ್ತಕ.

ಪುಸ್ತಕ : ಶರಣ ವಂದನೆ

ಸಂಪಾದಕರು : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬೆಲೆ : 10-00 ರೂ

ಈ ಪುಸ್ತಕದಲ್ಲಿ 12ನೆಯ ಶತಮಾನದ ಗುರು ಬಸವಣ್ಣನವರ ಸಮಕಾಲೀನ ಶರಣರಿಗೆ ಶರಣಾರ್ಥಿ ಸಲ್ಲಿಸಲಾಗಿದೆ. 32 ಪುಟಗಳಿಂದ ಕೂಡಿದ ಈ ಪುಸ್ತಕದಲ್ಲಿ ಸುಮಾರು 627 ಶರಣ ಶರಣೆಯರ ಹೆಸರುಗಳೂ ಅವರವರ ಕಾಯಕದ ಹೆಸರಿನೊಂದಿಗೆ ಸಂಗ್ರಹಿಸಲಾಗಿದೆ. ಪುಸ್ತಕದ ಕೊನೆಯ ಪುಟಗಳಲ್ಲಿ ಶರಣಾಷ್ಟಕ ಹಾಗೂ ಕಲ್ಯಾಣದ ಜ್ಯೋತಿ ಬೆಳಗುತಿದೆ ಎನ್ನುವ ಮಂಗಳ ಗೀತೆ ಇದೆ. ಇದು ದಿನ ನಿತ್ಯ ಪಾರಾಯಣಾರ್ಹ ಗ್ರಂಥ.

ಪುಸ್ತಕ : ಮಾತೆಂಬುದು ಜ್ಯೋತಿರ್ಲಿಂಗ

ಸಂಪಾದಕರು : ಶರಣ . ಸಚ್ಚಿದಾನಂದ ಚಟನಳ್ಳಿ

ಬೆಲೆ : 8 -00 ರೂ

ಈ ಪುಸ್ತಕದಲ್ಲಿ ಗುರು ಬಸವಣ್ಣನವರು ಹಾಗು ಸಮಕಾಲೀನ ಶರಣರ, ಪೂಜ್ಯ ಅಪ್ಪಾಜಿ, ಪೂಜ್ಯ ಮಾತಾಜಿಯವರ ಹಾಗೂ ಇನ್ನಿತರ ಮಹಾತ್ಮರ ವಿಶೇಷ ನುಡಿಗಳಿವೆ.32 ಪುಟಗಳ ಈ ಪುಸ್ತಕದಲ್ಲಿ ಸುಮಾರು 100 ಪರುಷ ವಾಣಿಗಳಿವೆ.

ಪುಸ್ತಕ : ಷಡ್‌ಗಣಾಧೀಶರ ಗುಣಗಾನ

ಸಂಪಾದಕರು : ಶರಣೆ. ಮಹಾದೇವಿ ಚಟನಳ್ಳಿ

ಬೆಲೆ : 40-00 ರೂ

ಈ ಪುಸ್ತಕದಲ್ಲಿ ಲಿಂಗಾಯತ ಧರ್ಮದ ಷಡ್‌ಗಣಾಧೀಶರನ್ನು ಸ್ತುತಿಸಿರುವ ವಚನಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿಯ ವರೆಗೆ ಲಭ್ಯವಿರುವ ಸಂಪೂರ್ಣ ವಚನಗಳಿಂದ ಈ ವಚನಗಳನ್ನು ಆಯ್ದುಕೊಳ್ಳಲಾಗಿದೆ. ಲಿಂಗಾಯತ ಧರ್ಮದ ಪುನರುತ್ಥಾನದ ಹಾದಿಯಲ್ಲಿ ಪೂಜ್ಯ ಮಾತಾಜಿಯವರು ಸಂಪಾದಿಸಿರುವ ಬಸವ ವಚನ ದೀಪ್ತಿ ಮತ್ತು ಬಸವ ದರ್ಶನಗಳಂತೆ ಪಾರಾಯಣ ಮಾಡುವ ಮಹತ್ವಪೂರ್ಣ ಗ್ರಂಥವಾಗಿದೆ.

ಈ ಎಲ್ಲಾ ಪುಸ್ತಕಗಳು ಬೆಂಗಳೂರು, ಧಾರವಾಡ, ಬಸವ ಕಲ್ಯಾಣ, ಕೂಡಲ ಸಂಗಮ, ಬೀದರ್, ಚಿತ್ರದುರ್ಗ ಹಾಗೂ ಬಸವ ಧರ್ಮ ಪೀಠದ ಬಸವ ಮಂಟಪಗಳಲ್ಲಿ ಲಭ್ಯವಿರುತ್ತದೆ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ
812ನೆಯ ಲಿಂಗೈಕ್ಯ ದಿನಾಚರಣೆ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠ, ಕೂಡಲ ಸಂಗಮ



ಶರಣ (ಶನಿ)ವಾರ ದಿ. 18-8-2007 ರಂದು ಬೆಳಿಗ್ಗೆ 10-30

ದೇವ (ಭಾನು)ವಾರ ದಿ.19-8-2007ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣ ಜೀವಾಳ

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಅಶುಭವಲ್ಲ ಶುಭವೂ ಅಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಸಭಾಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಅವಧಿಯಲ್ಲಿ ಬಸವಣ್ಣನವರ ಸಮಗ್ರ ವಚನಗಳನ್ನು 12 ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

★ ಸರ್ವರಿಗೂ ಆದರದ ಸುಸ್ವಾಗತ ★

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 812ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ : ಸರ್.ಕೆ.ಪಿ. ಪುಟ್ಟಣ್ಣಶೆಟ್ಟಿ ಪುರಭವನ, ಬೆಂಗಳೂರು, ಬೆಳಿಗ್ಗೆ 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪೂರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 812ನೆಯ ಲಿಂಗೈಕ್ಯ ದಿನವು ಶನಿ (ಶರಣ) ವಾರ ದಿ. 18-8-2007ರಂದು ಒದಗಿ ಬಂದಿದೆ.

ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪೂರದಂತೆ ಲಿಂಗೈಕ್ಯರಾದರು. ಅವರ 812ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ಎಲ್ಲರ ಕರ್ತವ್ಯವಾಗಿರುವುದರಿಂದ ರಾಜಾಜಿ ನಗರದ ಬಸವ ಮಂಟಪದಲ್ಲಿ ಶ್ರಾವಣ ಅಮವಾಸ್ಯೆಯ ಮರು ದಿವಸದಿಂದ ಪತ್ರಿನಿತ್ಯ ಬೆಳಿಗ್ಗೆ 7-30ರಿಂದ ವಿಶೇಷವಾಗಿ ಬಸವೇಶ್ವರ ಪೂಜಾವ್ರತವನ್ನು ಏರ್ಪಡಿಸಲಾಗುವುದು. ಇಷ್ಟಾರ್ಥ ಸಿದ್ಧಿಗಾಗಿ ವಿಶೇಷ ಸಂಕಲ್ಪ ಮಾಡಿಕೊಂಡು ಪೂಜಿಸುವ ಶರಣ ಬಂಧುಗಳಿಗೆ ಪೂಜಾ ಸಾಮಗ್ರಿಗಳೊಡನೆ ಬಂದು ಪುಷ್ಪಾರ್ಚನೆ ಮಾಡಲು ಅವಕಾಶ ಉಂಟು.

ದಿ. 18-8-07 ಮತ್ತು 19-8-07ರಂದು ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪವಿರುವ ಸರ್.ಕೆ.ಪಿ. ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಬೆಳಿಗ್ಗೆ 10-30ರಿಂದ ವಿಶೇಷ ಕಾರ್ಯಕ್ರಮ ಏರ್ಪಾಡಾಗಿರುತ್ತದೆ. ದಿ.18ರಂದು ಇಷ್ಟಲಿಂಗ ಯೋಗ ವಿಜ್ಞಾನ, ಅದರೊಳಗಣ ವಿಶೇಷತೆ ಕುರಿತು ಈ ಬಗ್ಗೆ ವಿಶೇಷ ಅಧ್ಯಯನ, ಸಂಶೋಧನೆ ಮಾಡಿ ಗ್ರಂಥವನ್ನು ರಚಿಸಿರುವ ಶರಣ. ಬಸವರಾಜಪ್ಪ ಮೆಣಸಿನಕಾಯಿ, ಶಿರಗುಪ್ಪಿ ಇವರೊಡನೆ ಸಂವಾದ ಮತ್ತು ಕಲ್ಯಾಣ ಕ್ರಾಂತಿಯ ವಿಶೇಷ ನೃತ್ಯ ರೂಪಕ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ಏರ್ಪಡಿಸಲಾಗಿದೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ) ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಬಸವ ಕುಮಾರ ಸ್ವಾಮೀಜಿ
ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ



ದಿ.19-8-2007ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್‌ವತಿಯಿಂದ 812 ನೆಯ ಬಸವ ಪಂಚಮಿಯ ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು, ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು ಬೆನ್ನ ಮೇಲೆ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ. ಸರ್ ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್ ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲಿದೆ.

ವಿಶೇಷ ಸೂಚನೆ: ಕಾರ್ಯಕ್ರಮದ ವಿಶೇಷ ಆಹ್ವಾನ ಪತ್ರವನ್ನು ಅತಿಥಿಗಳ ಹೆಸರಿನೊಡನೆ ಮುದ್ರಿಸಲಾಗುವುದು. ಈ ಕರಪತ್ರವನ್ನು ಬಹಳ ಮೊದಲೇ ಮುದ್ರಿಸಲಾಗಿದೆ. ವಿಶೇಷ ಆಹ್ವಾನ ಪತ್ರವನ್ನು ಎಲ್ಲರಿಗೂ ತಲ್ಪಿಸಲು ಸಾಧ್ಯವಾಗದು. ಇದನ್ನೇ ಆಹ್ವಾನವೆಂದು ಸ್ವೀಕರಿಸಲು ಕೋರಿಕೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-23325335 / 23131476

ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು.

-ಚನ್ನಬಸವಣ್ಣನವರು

ಸಂಸ್ಕಾರ ಮತ್ತು ಸಂಘಟನೆ

ನಾವು ಶ್ರೇಷ್ಠವಾದ ಲಿಂಗಾಯತ ಧರ್ಮದ ಅನುಯಾಯಿಗಳು. ಶರಣ ಪರಂಪರೆಯ ಮಕ್ಕಳು. ನಾವು ಒಂದು ವಿಶಿಷ್ಟವಾದ ತತ್ವ ಸಿದ್ಧಾಂತಗಳಿಗೆ ಒಳಪಟ್ಟವರು. ಗುರು ಬಸವಣ್ಣನವರು ಒಂದು ವಚನದಲ್ಲಿ ಕೇಳುತ್ತಾರೆ ನೋಡಿ. ಕುಲಜನೆಂಬುದಕ್ಕೆ ಆವುದು ದೃಷ್ಟ? ಎಂದು ಅದೇ ರೀತಿ ನಾವು ಒಂದು ಸತ್ಪಥದಲ್ಲಿ, ಧರ್ಮ ಮಾರ್ಗದಲ್ಲಿ ನಡೆಯುತ್ತಿದ್ದೇವೆ; ನಮ್ಮ ಆಚರಣೆಗಳು ಇತರರಿಗಿಂತ ಭಿನ್ನವಾಗಿವೆ ಎನ್ನುವುದಕ್ಕೆ ಯಾವುದು ಸಾಕ್ಷಿ ಏನು ಪ್ರಮಾಣ?

ಗುರು ಶಿಷ್ಯ ಸಂಬಂಧವಾದುದಕ್ಕಿದು ಚಿಹ್ನೆ
ಹಿಂದೆ ಬಿಟ್ಟು ಮುಂದೆ ಹಿಡಿಯಲೇಬೇಕ
ಲಿಂಗದೇವ ಕೇಳಯ್ಯಾ ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು.

ಹಿಂದೆ ಮಾಡುತ್ತಿದ್ದ ಅನೇಕ ತಪ್ಪು ಆಚರಣೆಗಳನ್ನು ಬಿಟ್ಟು, ಮುಂದೆ ಗುರು ತೋರಿದಂಥ ಆಚರಣೆಗಳನ್ನು ಮಾಡುತ್ತಿದ್ದರೆ ಅದೇ ನಾವು ಧರ್ಮ ಮಾರ್ಗದಲ್ಲಿ ನಡೆಯುತ್ತಿದ್ದೇವೆ ಎನ್ನುವುದಕ್ಕೆ ಸಾಕ್ಷಿ. ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು, ಎಂದರೆ ಕಿಚ್ಚಿನೊಳಗೆ ಒಂದು ಮರದ ಕೋಲನಿಟ್ಟಾಗ ಅದು ನೋಡಲು ಮುನ್ನಿನಂತೆ ಕಂಡರೂ ಅದರಲ್ಲಿ ಮುನ್ನಿನ ಗುಣಗಳಿರುವುದಿಲ್ಲ. ಅದೇ ರೀತಿ ಧರ್ಮ ಸಂಸ್ಕಾರಕ್ಕೆ ಒಳಪಟ್ಟು ಸನ್ಮಾರ್ಗದಲ್ಲಿ ನಡೆಯುತ್ತಿರುವ ವ್ಯಕ್ತಿ ನೋಡಲು ಮುನ್ನಿನಂತೆ ಕಂಡರೂ, ಮಾನವ ಸಹಜವಾದ ಮುನ್ನಿನ ಗುಣಗಳನ್ನು ಜ್ಞಾನದ ಕಿಚ್ಚಿನಲ್ಲಿ ಸುಟ್ಟುಕೊಂಡಿರಬೇಕು. ಧರ್ಮ ಮಾರ್ಗದಲ್ಲಿ ನಡೆದು ಆದರ್ಶ ಶರಣರಾಗಬೇಕು.

ಲಿಂಗಾಯತ ಸಮಾಜಕ್ಕೆ ಒಂದು ಕಲಂಕ ಅಂಟಿಕೊಂಡಿದೆ. ಬಸವ ತತ್ವದ ಪರುಷ ಸ್ಪರ್ಶವಾಗದೇ ಇರುವ ಅನೇಕ ಲಿಂಗಾಯತರು ಅಧರ್ಮೀಯರು, ಅನೀತಿವಂತರಾಗಿದ್ದಾರೆ. ತನು-ಮನ-ಧನದಲ್ಲಿ ತಪ್ಪಿದ ಇರುವ ಅನೇಕ ಲಿಂಗಾಯತರು ಅಧರ್ಮೀಯರು, ಅನೀತಿವಂತರಾಗಿದ್ದಾರೆ. ತನು-ಮನ-ಧನದಲ್ಲಿ ತಪ್ಪಿದ ತ್ರಿವಿಧ ತಪ್ಪಿತಸ್ಥರಾಗಿದ್ದಾರೆ. ಬೇರೆಯವರ ದೃಷ್ಟಿಯಲ್ಲಿ ಲಿಂಗಾಯತರೆಂದರೆ ಜಾತಿವಾದಿಗಳು, ಮೂಢ ಭಕ್ತಿ ಮಾಡುವವರು, ಗಿಡ ಮರ ಸುತ್ತುವವರು ಎನ್ನುವ ಕಲಂಕ ಅಂಟಿಕೊಂಡಿದೆ. ಈ ಕಲಂಕವನ್ನು ತೊಡೆದು ಹಾಕುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾವು ಆಚರಿಸುವ ಆಚರಣೆಯಿಂದ ನಮ್ಮ ನಡೆ ನುಡಿಗಳಿಂದ, ಲಿಂಗಾಯತ ಧರ್ಮವೆಂದರೆ ಹೀಗಿದೆಯೇ? ಇಷ್ಟೊಂದು ವೈಚಾರಿಕವಾಗಿ ಪ್ರಗತಿಪರವಾಗಿದೆಯೇ? ಎಂದು ಇತರರು ಆಶ್ಚರ್ಯದಿಂದ, ನಿಜವಾದ ಲಿಂಗಾಯತ ಧರ್ಮ ಅರಿಯುವಂತೆ ಮಾಡಬೇಕು. ಯಾವುದೇ ಒಂದು ಧರ್ಮ ಉಳಿಯಬೇಕಾದರೆ, ಧರ್ಮದ ಆಚರಣೆಯನ್ನು ಯುವ ಜನಾಂಗವು ಅಭಿಮಾನದಿಂದ ಮಾಡಬೇಕು.

ಪೂಜ್ಯ ಲಿಂಗಾನಂದ ಅಪ್ಪಾಜಿಯವರು ತಾವು ಯುವಕರಿರುವಾಗಲೇ ಜಂಗಮರಾಗಿ, 40 ವರ್ಷಗಳ ಕಾಲ ತಮ್ಮ ಜೀವನವನ್ನು ಬಸವ ತತ್ವಕ್ಕಾಗಿ ನಮಗಾಗಿ ಶ್ರೀಗಂಧದಂತೆ ಸವೆಸಿದರು. "ಭವದಲ್ಲಿ ಭಕ್ತನಾದಡೆ ಆ ಭವವೇ ಲೇಸು ಕಂಡಯ್ಯಾ; ಎಂದೆಂದೂ ನಾನಿದನೇ ಬಯಸುವೆ ತಂದೆ ಕರುಣಿಸಯ್ಯಾ" ಎನ್ನುವ ಗುರು ಬಸವಣ್ಣನವರ ವಾಣಿಯಂತೆ ಪೂಜ್ಯ ಮಾತಾಜಿಯವರು ತಾವು ಮುಕ್ತಿಯ ಹಂಗನ್ನು ತೊರೆದು, ಎಷ್ಟೇ ಜನ್ಮ ಬಂದರೂ ಬಸವ ತತ್ವವನ್ನು ಪ್ರಚಾರ ಮಾಡುತ್ತೇನೆ ಎಂದು ಛಲ ತೊಟ್ಟಿದ್ದಾರೆ. ಅವರ ಈ ನಿಲುವನ್ನು ನೋಡಿ ನಮ್ಮ ಯುವ ಜನಾಂಗವು ಎಚ್ಚರಗೊಳ್ಳಬೇಕು. ನಮ್ಮಲ್ಲಿ ಧರ್ಮಾಭಿಮಾನ ಪುಟದೇಳಬೇಕು.

ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ
ಕಂಡಾಗಳಶ್ರು ಜಲಂಗಳು ಸುರಿಯದಿದ್ದಡೆ
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ
ಲಿಂಗದೇವರ ಭಕ್ತಗಿದು ಚಿಹ್ನವೆ
ಎನ್ನಲ್ಲಿ ಇಲ್ಲವಾಗಿ ನಾನು ಡಂಭಕ ಕಾಣಿರೆ !

ಇದು ಧರ್ಮಪಿತರ ವಾಣಿ. ಶರಣರು ಒಬ್ಬರನ್ನೊಬ್ಬರು ಕಂಡಾಗ ಈ ರೀತಿ ಭಾವನೆಯುಂಟಾದರೆ,

ಅದು ಭಕ್ತನ ಲಕ್ಷಣ ಅಲ್ಲದಿದ್ದರೆ ವೇಷಧಾರಿ ಡಂಭಕ ಎನ್ನುತ್ತಾರೆ. ಅದೇ ರೀತಿ ಶ್ರೀಗಂಧದಂತೆ ಸವೆದ ಅಪ್ಪಾಜಿಯವರ ಬದುಕು, ಮಾತಾಜಿಯವರ ಮಹಾನ್ ಕಾರ್ಯ, 12ನೆಯ ಶತಮಾನದ ಶರಣರ ತ್ಯಾಗ, ಬಲಿದಾನಗಳನ್ನು ನೆನೆದು, ನಮ್ಮಲ್ಲಿ ಧರ್ಮದ ಬಗ್ಗೆ ಕಳಕಳಿ ಈ ತತ್ವಕ್ಕಾಗಿ ದುಡಿಯುವೆನೆಂಬ ಛಲ ಮೂಡಬೇಕು. ಇಲ್ಲದಿದ್ದರೆ ನಮ್ಮಷ್ಟು ನಿರಭಿಮಾನಿಗಳು, ಅಭಿಮಾನ ಶೂನ್ಯರು ಮತ್ತಾರೂ ಅಲ್ಲ.

ಇಂದು ಪಂಜಾಬ್ ಎಂದರೆ ಗುರುನಾನಕರು, ಸಿಖ್ಖರು ಎನ್ನುವ ಪದಗಳು ಇಡೀ ಜಗತ್ತಿಗೆ ಗೊತ್ತಿರುವಂತೆ, ಕನ್ನಡ ಕರ್ನಾಟಕ ಎಂದರೆ ಗುರು ಬಸವಣ್ಣನವರು, ವಚನ ಸಾಹಿತ್ಯ, ಲಿಂಗಾಯತ ಎನ್ನುವ ಪದಗಳು ಇಡೀ ಜಗತ್ತಿಗೆ ಗೊತ್ತಾಗಬೇಕು. ಇಂದು ನಾವೆಲ್ಲರೂ ಎಚ್ಚೆತ್ತುಕೊಂಡು, ಧರ್ಮಾಚರಣೆ, ತತ್ವದ ಬಗ್ಗೆ ಕಳಕಳಿ ಹೊಂದುವುದರ ಜೊತೆಗೆ, ಪ್ರಚಾರ ಮಾಡುವುದರಿಂದ ಮಾತ್ರ ಸಾಧ್ಯವಿದೆ.

ನಾನು ಹಲವಾರು ರಾಷ್ಟ್ರೀಯ ಬಸವ ದಳಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿ ಅನೇಕ ಶರಣರು ತಮ್ಮ ಮಕ್ಕಳಿಗೆ ಪ್ರಾರ್ಥನೆಗೆ ಕರೆದುಕೊಂಡು ಬರದೇ ಇರುವುದು ನನ್ನ ಗಮನಕ್ಕೆ ಬಂದಿದೆ. ಇಂದಿನ ಮಕ್ಕಳೇ, ಇಂದಿನ ಯುವಕರೇ ನಾಳಿನ ಧರ್ಮಾನುಯಾಯಿಗಳು. ಅವರನ್ನು ಪರಿಪೂರ್ಣ ಧರ್ಮವಂತರನ್ನಾಗಿ ಶ್ರೇಷ್ಠ ಧರ್ಮದ ಉತ್ಕೃಷ್ಟ ಅನುಯಾಯಿಗಳನ್ನಾಗಿ ರೂಪುಗೊಳಿಸುವುದು ಪ್ರತಿಯೊಬ್ಬ ತಾಯಿ ತಂದೆಯರ ಆದ್ಯ ಕರ್ತವ್ಯ. ಕೇವಲ ಸಂಪತ್ತು ಕೊಡದೇ ಸಂಸ್ಕಾರವನ್ನು ಕೂಡ ಕೊಟ್ಟು ಬೆಳೆಸಬೇಕು. ಕೇವಲ ನೀವು ಗಳಿಸಿದ ಧನಕ್ಕೆ ಅವರನ್ನು ಒಡೆಯರನ್ನಾಗಿ ಮಾಡದೆ ನೀವು ಆಚರಿಸುವ ನಿಜಾಚರಣೆಗಳ ಒಡೆಯರನ್ನಾಗಿ ಮಾಡಬೇಕು. ತಾಯಿ-ತಂದೆಯರಾದ ನೀವು, ನಿಮ್ಮ ಮಕ್ಕಳಿಗೆ ಪ್ರಾರ್ಥನೆಗೆ ಕರೆದುಕೊಂಡು ಬರದೇ ಅವರಿಗೆ ದೀಕ್ಷೆಯನ್ನು ಕೊಡಿಸದೆ ಧರ್ಮ ಸಂಸ್ಕಾರದಿಂದ ವಂಚಿತರನ್ನಾಗಿ ಮಾಡಿದರೆ, ಈ ಋಣವನ್ನು ತೀರಿಸಲಿಕ್ಕೆ ಅವರು ನಿಮ್ಮನ್ನು ಮುಂದೊಂದು ದಿನ ವೃದ್ಧಾಶ್ರಮಗಳಲ್ಲಿ ಇಡುತ್ತಾರೆ. ಇಂದು ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗಿದೆ. ವಯಸ್ಸಾದ ತಾಯಿ ತಂದೆಯರನ್ನು ಮಕ್ಕಳು ಹೊರಗೆ ಹಾಕುತ್ತಿದ್ದಾರೆ ಎಂದರೆ ಇದರಲ್ಲಿ ಮಕ್ಕಳದಷ್ಟೇ ತಪ್ಪು ಎಂದು ಹೇಳಲು ನಾನು ಇಷ್ಟಪಡುವುದಿಲ್ಲ. ಅಂಥ ಸಂಸ್ಕಾರವನ್ನು ಕೊಟ್ಟು ಬೆಳಸದ ತಾಯಿ-ತಂದೆಯರದ್ದೇ ತಪ್ಪು ಎಂದು ಖಂಡಿತವಾಗಿಯೂ ಹೇಳುತ್ತೇನೆ. ಅದಕ್ಕಾಗಿ ಎಳೆಯ ಮಕ್ಕಳಿರುವಾಗಿನಿಂದಲೇ ಸಂಸ್ಕಾರವನ್ನು ಕೊಡಬೇಕು.

ಒಂದು ಧರ್ಮ ಪರಿಪೂರ್ಣವಾಗಿ ಎದ್ದು ನಿಲ್ಲಬೇಕಾದರೆ, ಅದು ತನ್ನ ಸಂಪೂರ್ಣ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ, ಆ ಧರ್ಮವನ್ನು ಕೇವಲ ಆರ್ಥಿಕವಾಗಿ ಬಡ ಜನತೆ ಹಾಗು ಮಧ್ಯಮ ವರ್ಗದ ಜನತೆಯ ಆಚರಣೆಯಿಂದ ಮಾತ್ರ ಸಾಧ್ಯವಿಲ್ಲ. ಆರ್ಥಿಕವಾಗಿ ಶ್ರೀಮಂತ ವರ್ಗದವರು, ದೊಡ್ಡ ದೊಡ್ಡ ಅಧಿಕಾರದಲ್ಲಿರುವವರು, ಲಿಂಗಾಯತ ರಾಜಕಾರಣಿಗಳು ಈ ಧರ್ಮವನ್ನು ಅಪ್ಪಿಕೊಂಡು ಆಚರಿಸಬೇಕು. ಆದರೆ ದುರ್ದೈವದ ಸಂಗತಿ, ಅನೇಕ ಶ್ರೀಮಂತ ಲಿಂಗಾಯತರು ತತ್ವದ ಹತ್ತಿರವೂ ಸುಳಿಯುವುದಿಲ್ಲ ಯಾವುದೇ ಧರ್ಮ ಸಂಸ್ಕಾರಕ್ಕೂ ಒಳಗಾಗುವುದಿಲ್ಲ. ಆದ್ದರಿಂದ ನಮ್ಮ ಸಮಾಜದಲ್ಲಿ ಎರಡು ಕಾರ್ಯಗಳು ತ್ವರಿತ ಗತಿಯಲ್ಲಿ ಆಗಬೇಕಿದೆ. ಒಂದನೆಯದಾಗಿ ಆರ್ಥಿಕ ಶ್ರೀಮಂತರು ಹೃದಯ ಸಿರಿವಂತರಾಗಿ, ಧರ್ಮದ ಪರುಷ ಸ್ಪರ್ಶ ಮಾಡಿಕೊಳ್ಳಬೇಕು. ಧರ್ಮ ಸಂಸ್ಕಾರಕ್ಕೆ ಒಳಗಾಗಿ, ಧರ್ಮದ ಇತರ ಅನುಯಾಯಿಗಳೊಂದಿಗೆ ಬೆರೆಯಬೇಕು. ಇದು ಸಾಧ್ಯವಿದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಇದಕ್ಕೆ ಎರಡನೆಯ ದಾರಿಯೊಂದಿದೆ. ಆರ್ಥಿಕವಾಗಿ ಹಿಂದುಳಿದ ಶರಣರು, ಶ್ರೀಮಂತರಾಗಬೇಕು. "ಹಾಸಿದುಡಿವೊಡೆ ಹತ್ತು ಬೆರಳುಂಟು ತನಗುಂಟು ತನ್ನ ಪ್ರಮಥರಿಗುಂಟು." ಎನ್ನುವ ಧರ್ಮಪಿತರ ವಾಣಿಯಂತೆ ಚನ್ನಾಗಿ ದುಡಿಯಬೇಕು. ಇವರ ಮಕ್ಕಳು ನಿಷ್ಠೆಯಿಂದ ವಿದ್ಯಾಭ್ಯಾಸ ಮಾಡಬೇಕು. ಅಲ್ಪಾಕಾಂಕ್ಷಿಗಳಾಗಿ ಓದದೆ, ಮಹತ್ವಾಕಾಂಕ್ಷಿಗಳಾಗಬೇಕು. ಐ. ಎ. ಎಸ್, ಕೆ.ಎ.ಎಸ್ ಅಧಿಕಾರಿಗಳಾಗಬೇಕು, ಎಂ.ಪಿ, ಎಂ.ಎಲ್.ಎ, ರಾಜಕಾರಣಿಗಳಾಗಬೇಕು. ಈ ಮೂಲಕ ನಾವು ನಮ್ಮ ಧರ್ಮವನ್ನು ಎತ್ತಿ ಹಿಡಿಯಬೇಕು, ಇದನ್ನು ಉಳಿಸಿ ಬೆಳೆಸಬೇಕು. ಬಡತನ ಎನ್ನುವಂಥದ್ದು ಎಲ್ಲಾ ಕಷ್ಟಗಳಿಗೂ ಕಾರಣವಾಗುತ್ತದೆ; ಅದನ್ನು ಮೆಟ್ಟಿ ನಿಲ್ಲಬೇಕು. ಈ ರೀತಿಯಾದ ಸಂಸ್ಕಾರವನ್ನು ನಾವು ಜೀವನದಲ್ಲಿ ಅಳವಡಿಸಿ ಕೊಳ್ಳುವುದರಿಂದ ನಮ್ಮ ಧರ್ಮವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ಸಾಧ್ಯವಿದೆ.

ಸಂಘಟನೆಯ ಬಗ್ಗೆ ಒಂದೆರೆಡು ವಿಷಯಗಳನ್ನು ತಿಳಿದುಕೊಳ್ಳುವುದು ಅತೀ ಅವಶ್ಯವಾಗಿದೆ. ಲಿಂಗಾಯತ ಧರ್ಮದ ಬಂಧುಗಳು ಸಂಘಟಿತರಾಗಿ ಬದುಕುವುದು ಎಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿದೆ. ಧರ್ಮಪಿತರ ವಾಣಿ ಹೇಳುತ್ತದೆ:

ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ?
ಸೊಂಡಿಲು ಮುರಿದೊಡೆ ಗಜವೇನು ಬಾತೆ?
ಸಂಗ್ರಾಮದಲ್ಲಿ ವೀರನಳಿಯಲದೇನು ಬಾತೆ?
ಶೃಂಗಾರದ ಮೂಗ ಹೋದಡೆ ಶೃಂಗಾರವೇನು ಬಾತೆ?
ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ ಲಿಂಗದೇವಾ.

ಸಿಂಹದ ಶಕ್ತಿ ಅದರ ಸೊಂಟದಲ್ಲಿ ಇರುತ್ತದೆ; ಆನೆಯ ಶಕ್ತಿ ಅದರ ಸೊಂಡಿಲಿನಲ್ಲಿ ಇರುತ್ತದೆ, ಒಂದು ಸೈನ್ಯದ ಶಕ್ತಿ ಅದರ ಮುಂದಾಳು- ಸೈನ್ಯಾಧಿಕಾರಿ (Captain) ಯಲ್ಲಿರುತ್ತದೆ. ಅದೇ ರೀತಿ ಒಂದು ಸಮಾಜದ ಶಕ್ತಿ ಅದರ ಸಂಘಟನೆಯಲ್ಲಿರುತ್ತದೆ. ಸೊಂಟ ಮುರಿದ ಸಿಂಹ, ಸೊಂಡಿಲು ಮುರಿದ ಆನೆ ಎಷ್ಟೇ ಬಲಿಷ್ಠವಾಗಿದ್ದರೂ ಯಾವುದೇ ಪ್ರಯೋಜನವಿಲ್ಲ; ಅದೇ ರೀತಿ, ಸಂಘಟಿತವಿಲ್ಲದ ಸಮಾಜ ಸಂಖ್ಯೆಯಲ್ಲಿ ಎಷ್ಟೇ ಇದ್ದರೂ ಯಾವುದೇ ಪ್ರಯೋಜನವಿಲ್ಲ. ಅದಕ್ಕಾಗಿ ನಾವು ನಮ್ಮಲಿರುವ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸಂಘಟಿತರಾಗಿ ಬದುಕಬೇಕು.

ಎಲ್ಲಾ ರಾಷ್ಟ್ರೀಯ ಬಸವ ದಳದ ಶರಣರು, ಗಮನವಿಟ್ಟು ತಿಳಿದುಕೊಳ್ಳಬೇಕು. ಅಮೇರಿಕಾದ ಅಧ್ಯಕ್ಷರಾದ ಜಾನ್.ಎಫ್. ಕೆನಡಿ ಒಂದು ಮಾತು ಹೇಳಿದ್ದಾರೆ. "Don't ask that what nation has given to you. Ask yourself that what you have given for Nation" ರಾಷ್ಟ್ರ ನನಗೇನು ಕೊಟ್ಟಿದೆ/ ನನಗೇನು ಮಾಡಿದೆ ಎಂದು ಕೇಳಬೇಡ ರಾಷ್ಟ್ರಕ್ಕಾಗಿ ನಾನೇನು ಕೊಟ್ಟಿದ್ದೇನೆ/ ನಾನೇನು ಮಾಡಿದ್ದೇನೆ ಎಂದು ಕೇಳು ಎನ್ನುತಾರೆ. ನೋಡಿದಿರಾ ಎಂಥಾ ಮಾತು! ಇಂಥಾ ಮನೋಭಾವನೆಯಿಂದಲೇ ಅವರು ಅಷ್ಟೊಂದು ದೊಡ್ಡ ಶ್ರೀಮಂತ ರಾಷ್ಟ್ರವನ್ನು ಕಟ್ಟಿದ್ದಾರೆ. ಅದೇ ರೀತಿ, ರಾಷ್ಟ್ರೀಯ ಬಸವ ದಳದಲ್ಲಿರುವ ವ್ಯಕ್ತಿ ಈ ಸಂಘಟನೆ ನನಗೇನು ಕೊಟ್ಟಿದೆ ? ಎಂದು ಕೇಳಬಾರದು, ಸಂಘಟನೆಗಾಗಿ ನಾನೇನು ಕೊಟ್ಟಿದ್ದೇನೆ ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳಬೇಕು, ನನಗೆಷ್ಟು ಜನ ಗೌರವ ಮನ್ನಣೆ ಕೊಡುತ್ತಾರೆ? ಎನ್ನುವುದಕ್ಕಿಂತ ನಾನೆಷ್ಟು ಜನರಿಗೆ ಗೌರವ ಮನ್ನಣೆ ಕೊಡುತ್ತಿದ್ದೇನೆ? ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಂಡರೆ ಸಂಘಟನೆಯು ಬಲವಾಗಿ ಬೆಳೆಯುತ್ತದೆ.

ಸಂಘಟನೆ ಎಂದರೆ ಇಡೀ ಸಂಘಟನೆಯೇ ಎದ್ದು ನಿಲ್ಲಬೇಕು. ಒಬ್ಬ ವ್ಯಕ್ತಿ ವೈಯಕ್ತಿಕವಾಗಿ ಕಾಣಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬಾರದು. ಉದಾರಣೆಗೆ ಈಗ ನೀವು ಒಂದು ಬಸವ ಮಂಟಪದ ಕಟ್ಟಡ ಕಟ್ಟುತ್ತಿದ್ದೀರಾ ಎಂದು ಕೊಳ್ಳಿ. ಕಟ್ಟಡದಲ್ಲಿ ಎಲ್ಲಾ ಕಲ್ಲುಗಳು ಸಮವಾಗಿ ಇರುತ್ತವೆ, ಯಾವುದಾದರೂ ಒಂದು ಕಲ್ಲು ಹೊರಗೆ ತೋರಿಸಿಕೊಳ್ಳಬೇಕು ಎಂದು ಸ್ವಲ್ಪ ಹೊರಕ್ಕೆ ಜರುಗಿದರೆ, ಅದನ್ನು ಕೆತ್ತಿ ಸರಿ ಮಾಡುತ್ತಾರೆ. ನಾನು ಕೆತ್ತಿಸಿಕೊಳ್ಳುವುದಿಲ್ಲ ಎಂದರೆ ಕಿತ್ತಿ ಬಿಸಾಕುತ್ತಾರೆ; ಮತ್ತೊಂದು ಕಲ್ಲು ಸೇರಿಸುತ್ತಾರೆ. ಅದಕ್ಕಾಗಿ ಯಾವುದೇ ಕಲ್ಲು ಹೊರಗೆ ತೋರಿಸಿಕೊಳ್ಳದೆ ಇಡೀ ಕಟ್ಟಡವೇ ಹೇಗೆ ಎದ್ದು ಕಾಣುತ್ತೋ ಅದೇ ರೀತಿ ಇಡೀ ಸಂಘಟನೆಯೇ ಎದ್ದು ಕಾಣಬೇಕು. ಒಂದು ವೇಳೆ ಯಾರಾದರೂ ವ್ಯಕ್ತಿ ತೋರಿಸಿಕೊಳ್ಳಲು ಪ್ರಯತ್ನಪಟ್ಟರೆ ಪರಮಾತ್ಮ ಆ ಕಲ್ಲಿನಂಥ ಪರಿಸ್ಥಿತಿ ಮಾಡುತ್ತಾನೆ ಎನ್ನುವುದನ್ನು ಮರೆಯಬಾರದು.

ಅನೇಕರು ಸಮಾಜದ ಹಿತಕ್ಕಾಗಿ ಧರ್ಮದ ಏಳಿಗೆಗಾಗಿ ಒಂದು ಕಡೆ ಸೇರಿ ಪ್ರಾರ್ಥನೆ ಚಿಂತನೆ, ಕಾರ್ಯಗಳನ್ನು ಮಾಡುವುದೇ ಸಂಘಟನೆ. ಇಂಥ ಕಾರ್ಯದಲ್ಲಿ ತೊಡಗಿದ್ದಾಗ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯ ವಿಚಾರಗಳಿರುತವೆ. ಅವರು ರಾ.ಬ.ದಳದಂಥ ಸಂಘಟನೆಯಲ್ಲಿ ಭಾಗಿಯಾಗಿದ್ದಾರೆ ಎಂದರೆ ಖಂಡಿತವಾಗಿಯೂ ಅವರಲ್ಲಿ ಬಸವ ಭಕ್ತಿ ಇದ್ದೇ ಇದೆ. ಆದರೆ ಕೆಲವೊಮ್ಮೆ ಅವರ ಮನಸ್ಸಿನಲ್ಲಿರುವ ಭಕ್ತಿ ಅಭಿಮಾನ ಇವರಿಗೆ ಅರ್ಥವಾಗುವುದಿಲ್ಲ. ಇವರ ಅಭಿಮಾನ ಅವರಿಗೆ ಗೊತ್ತಾಗುವುದಿಲ್ಲ . ಇಬ್ಬರೂ ಮಾಡುವುದು ಗುರು ಬಸವಣ್ಣನವರಿಗೋಸ್ಕರವೇ, ಆದರೆ ಇಬ್ಬರಲ್ಲಿ ಭಿನ್ನಾಭಿಪ್ರಾಯ ಬರುತ್ತದೆ. ಆಗ ಏನು ಮಾಡುವುದು ಸಂಘಟನೆಯಿಂದ ಯಾರಾದರೊಬ್ಬರು ದೂರ ಹೋಗುವುದೇ ? ಬೇಡ ಇದು ಒಳ್ಳೆಯದಲ್ಲ ಧರ್ಮಪಿತರನ್ನು ಕೇಳೋಣ ಏನು ಹೇಳುತಾರೆ.

ಕಬ್ಬಿನ ಮೇಲೆ ಜೇನನಿಟ್ಟಿತ್ತೆಂಬರು
ಅವು ಒಂದರ ಸಿಹಿಯನೊಂದು ಅರಿಯವು
ಭಕ್ತ ಮತ್ತು ಜಂಗಮದ ನಡುವೆ, ಅರ್ಥ ಪ್ರಾಣ ಅಭಿಮಾನ
(ಅಹಂಕಾರ) ವೆಂಬ ಸಿಗುರು ಕಾಡಿತ್ತು ಕಾಣಾ ಲಿಂಗದೇವಾ.

ಧರ್ಮಪಿತರು ಎಷ್ಟು ಸೂಕ್ಷ್ಮಗ್ರಾಹಿ ಇದ್ದಾರೆ ಎನ್ನುವುದು ಈ ವಚನದಿಂದ ಅರ್ಥವಾಗುತ್ತದೆ. ಕಬ್ಬಿನ ಮೇಲೆ ಜೇನು ಹುಳಗಳು ಜೇನು ಗೂಡನ್ನು ಕಟ್ಟಿವೆ. ಅದನ್ನು ನೋಡಿ ಧರ್ಮಪಿತರಿಗೆ ಆಶ್ಚರ್ಯವಾಗಿದೆ. ಕಬ್ಬಿನಲ್ಲಿಯೂ ಸಿಹಿ ಇದೆ ಜೇನಿನಲ್ಲಿಯೂ ಸಿಹಿ ಇದೆ. ಆದರೆ ಒಂದರ ಸಿಹಿ ಇನ್ನೊಂದಕ್ಕೆ ಗೊತ್ತಾಗುವುದಿಲ್ಲ ಕಾರಣ ಕಬ್ಬಿನ ಮೇಲೆ ಇರುವ ಸಿಗುರು/ ಸಿಪ್ಪೆ. ಅದೇ ರೀತಿ ಒಂದು ಸಂಘಟನೆಯಲ್ಲಿ ಭಾಗಿಗಳಾಗಿರುವ ಇಬ್ಬರಲ್ಲೂ ಬಸವ ಭಕ್ತಿಯ, ಸಮಾಜ ಪ್ರೇಮದ, ಸೇವಾ ಮನೋಭಾವದ ಸಿಹಿ ಇದೆ. ಇಬ್ಬರೂ ಕಾರ್ಯ ಮಾಡುತ್ತಿರುವುದು ಗುರು ಬಸವಣ್ಣನವರಿಗಾಗಿಯೇ. ಆದರೂ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲಿಕ್ಕಾಗದೆ, ಅವರಲ್ಲಿ ವೈಮನಸ್ಸು ಹುಟ್ಟಿದರೆ ಅದಕ್ಕೆ ಕಾರಣ ಅಹಂಕಾರ. ಈ ಅಹಂಕಾರ ತುಂಬಾ ಸೂಕ್ಷ್ಮವಾಗಿರುತ್ತದೆ. ಈ ಅಹಂಕಾರವೆಂಬ ಸಿಗುರು ಯಾರ ಮನದಲ್ಲಿಯೇ ಇರಲಿ ಅದನ್ನು ಕಳಚಿ ಕೊಳ್ಳಬೇಕು. ಕಬ್ಬಿನ ಹಾಲಿನಲ್ಲಿ ಜೇನು ಬೆರೆತಾಗ ಸಿಹಿ ಹೆಚ್ಚಾಗುವಂತೆ ಅಹಂಕಾರ ರಹಿತವಾಗಿ ಒಬ್ಬರ ಮನಸನ್ನು ಇನ್ನೊಬ್ಬರು ಅರ್ಥಮಾಡಿಕೊಂಡು ಮುನ್ನಡೆದಾಗ ಸಂಘಟನೆಗೆ ಇನ್ನಷ್ಟು ಮತ್ತಷ್ಟು ಬಲ ಬರುತ್ತದೆ ಮತ್ತು ಪರಮಾತ್ಮನ ಅನುಗ್ರಹವೂ ಹರಿದು ಬರುತ್ತದೆ.

ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೋ?
ಅಹಂಕಾರ ಎಡೆಗೊಡದೆ ಲಿಂಗ ತನುವಾಗಿರಬೇಕು
ಅಹಂಕಾರ ರಹಿತವಾದಲ್ಲಿ ಸನ್ನಿಹಿತ ಕಾಣಾ ನಮ್ಮ ಲಿಂಗದೇವ.

ಅಹಂಕಾರ ರಹಿತವಾದಲ್ಲಿ ಲಿಂಗದೇವರು ನಮ್ಮಲ್ಲಿ ವಾಸಿಸುತ್ತಾನೆ.

ನಮ್ಮ ಧರ್ಮ ಬಂಧುಗಳು, ಸಂಘಟನೆಯಲ್ಲಿ ಭಾಗಿಗಳಾದವರು ಹಾಗು ಇತರ ಧರ್ಮ ಬಂಧುಗಳು ವಿಶೇಷ ಸಾಧನೆ ಮಾಡಿದಾಗ, ಸಮಾಜದಲ್ಲಿ ಉನ್ನತ ಹುದ್ದೆ ಅಲಂಕರಿಸಿದಾಗ ಮತ್ತು ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಾಗ, ಪ್ರಥಮ ವರ್ಗದಲ್ಲಿ ಪಾಸಾದಾಗ ಅಂಥವರನ್ನು ಬಸವ ಮಂಟಪದ ಪ್ರಾರ್ಥನಾ ಸಭೆಗೆ ಕರೆದು ಸತ್ಕರಿಸುವ ಪರಿಪಾಠವನ್ನು ಬೆಳೆಸಿ ಕೊಳ್ಳಬೇಕು. ಬಡತನದಿಂದ ಮೇಲೆದ್ದು ಬಂದು ಯಾವುದೇ ಉನ್ನತ ಸಾಧನೆ ಮಾಡಿದ ಯಾವುದೇ ಜಾತಿ ಮತ ಪಂಥದವರಿರಲಿ ಕರೆದು ಸತ್ಕರಿಸಬೇಕು. ಇದರಿಂದ ಧರ್ಮವು ನನ್ನ ಹಿಂದೆ ಇದೆ ಎನ್ನುವ ಭಾವನೆ ಅವರಿಗೆ ಬರುತ್ತದೆ ಮತ್ತು ಅವರಿಂದ ಸಮಾಜ ಸೇವಾ ಕಾರ್ಯವೂ ಆಗುತ್ತದೆ.

"ಅಪ್ಪನು ನಮ್ಮ ಮಾದಾರ ಚನ್ನಯ್ಯಾ ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯಾ" ಎಂದು ಗುರು ಬಸವಣ್ಣನವರು ಎಲ್ಲ ಜಾತಿ ಮತ ಪಂಥದವರನ್ನು ಅಪ್ಪಿಕೊಂಡು ಲಿಂಗದೀಕ್ಷೆಯನ್ನು ನೀಡಿ ಅವರನ್ನು ಲಿಂಗಾಯತ ಧರ್ಮದ ಅನುಯಾಯಿಗಳನ್ನಾಗಿ ಮಾಡಿದರು. ಲಿಂಗಾಯತ ಧರ್ಮ ಹುಟ್ಟಿದ್ದೇ ಕೆಳಗೆ ಬಿದ್ದವರನ್ನು ಮೇಲೆ ಎತ್ತಿಕೊಳ್ಳಲಿಕ್ಕೆ, ಕಲ್ಯಾಣ ಕ್ರಾಂತಿ ನಡೆದುದೇ ಸಮಾನತೆಗಾಗಿ. ಅದಕ್ಕಾಗಿ ಬೇರೆ ಬೇರೆ ಜಾತಿಗಳಿಂದ ನಮ್ಮ ಪ್ರಾರ್ಥನೆಗೆ, ಸಂಘಟನೆಗೆ, ಧರ್ಮಕ್ಕೆ ಬರುವಂಥವರನ್ನು ಆತ್ಮೀಯತೆಯಿಂದ ಬರಮಾಡಿಕೊಂಡು ಗೌರವಿಸಬೇಕು.

ಆವ ಕುಲವಾದಡೇನು ಲಿಂಗವಿದ್ದವನೆ ಕುಲಜನು
ಕುಲವನರಸುವರೆ ಶರಣರಲ್ಲಿ ಜಾತಿ ಸಂಕರನಾದ ಬಳಿಕ?
ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ ಲಿಂಗದೇವಾ
ನಂಬುವೆ ನಿಮ್ಮ ಶರಣರನು.

ಕೂಸು ಎಂದರೆ ಹೆಣ್ಣು ಮಗು, ಕುನ್ನಿ ಎಂದರೆ ಗಂಡು ಮಗು. ಯಾರೇ ಇರಲಿ ಅವರು ಲಿಂಗದೀಕ್ಷೆ ಹೊಂದಿ ಲಿಂಗಾಯತರಾದಾಗ ಅವರೊಡನೆ ಕೊಡುಕೊಳ್ಳುವ ವೈವಾಹಿಕ ಸಂಬಂಧಗಳನ್ನು ಬೆಳೆಸಬೇಕು ಎಂದು ಧರ್ಮಪಿತರು ಆದೇಶಿಸಿದ್ದಾರೆ. ಕೂಸು ಕೊಡುವೆ ಎಂದರೆ ನಮ್ಮ ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆ ಎನ್ನುತ್ತಾರೆ. ಅದಕ್ಕಾಗಿ ರಾಷ್ಟ್ರೀಯ ಬಸವ ದಳದ ಶರಣರು ಹೃದಯ ವೈಶಾಲ್ಯತೆಯನ್ನು ಬೆಳೆಸಿಕೊಳ್ಳಬೇಕು. ಕೆಲವೊಂದು ಊರುಗಳಲ್ಲಿ ಈ ರೀತಿ ದಲಿತ ವರ್ಗದಿಂದ ಬಂದ ಶರಣರಿಗೆ ಕೆಲವರು ಮಾನಸಿಕವಾಗಿ ನೋವನ್ನುಂಟು ಮಾಡುತ್ತಿರುವುದು, ಸೂಕ್ಷ್ಮವಾದ ಮಾತುಗಳ ಮುಖಾಂತರ ಚುಚ್ಚು ಮಾತನಾಡುವುದು ನಮ್ಮ ಗಮನಕ್ಕೆ ಬಂದಿದೆ. ದಯವಿಟ್ಟು ಈ ರೀತಿ ಮಾತನಾಡಬೇಡಿರಿ *"ಹಲವು ಕಾಲ ಒಟ್ಟಿದ ಬಣವೆಯು ಒಂದು ಮಿಡುಕುರಿಯಲ್ಲಿ ಬೇವಂತೆ,"* ಎನ್ನುವ ಧರ್ಮಪಿತರ ವಾಣಿಯಂತೆ ಹಲವು ಕಾಲ ಮಾಡಿದ ಭಕ್ತಿಯು ಇಂಥ ವರ್ತನೆಯಿಂದ ಕುಂದುತ್ತದೆ. ಧರ್ಮಪಿತರ ಆವಕೃಪೆಗೆ

ಪಾತ್ರರಾಗಬೇಕಾಗುತ್ತದೆ. ಅದಕ್ಕಾಗಿ ಶರಣರು ಎಲ್ಲರನ್ನು ಇಂಬಿಟ್ಟುಕೊಳ್ಳಬೇಕು ಎಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಕ್ರಿಯಾಮೂರ್ತಿಗಳಿಗೆ ಇಂಥ ಅವಕಾಶ ಸಿಕ್ಕಾಗ ಎಲ್ಲಾ ಜಾತಿಯವರಿಗೂ ದೀಕ್ಷೆ ನೀಡಬೇಕು. ಮಾತ್ರವಲ್ಲ ದೀನ ದಲಿತರಿಗೆ ಧರ್ಮದ ಪರುಷ ಸ್ಪರ್ಶ ಮಾಡಿಸಬೇಕು. ಅವರನ್ನು ಅಜ್ಞಾನ, ಮೂಢ ನಂಬಿಕೆಯ ಕೂಪದಿಂದ ಮೇಲೆತ್ತಬೇಕು.

ರಾಷ್ಟ್ರೀಯ ಬಸವ ದಳದ ಸಂಘಟನೆಯಲ್ಲಿ ತೊಡಗಿಸಿಕೊಂಡ ಸಮಷ್ಟಿ ಪ್ರಜ್ಞೆಯುಳ್ಳ ಶರಣರು ಗಮನಿಸಬೇಕಾದ ಸೂಕ್ಷ್ಮವಾದ ವಿಷಯವೊಂದಿದೆ. ತಮಗೆ ಬಸವ ತತ್ವವನ್ನು ಪರಿಚಯಿಸಿ ಧರ್ಮ ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ಮಾಡಿದವರು ಕೆಲವೊಮ್ಮೆ ಅಲ್ಪಾಕಾಂಕ್ಷಿಗಳಾಗಿ ತಾವೇ ಬೋಧನೆ ಮಾಡಿದಂಥ ಮಾರ್ಗದಿಂದ ಹಿಂದೆ ಸರಿಯಬಹುದು, ಆಸೆ ಆಮಿಷಗಳಿಗೆ ಬಲಿಯಾಗಿ ತನ್ನ ಮೂಲ ತತ್ವದಿಂದ ಸರಿದು ಬೇರೊಂದು ದಾರಿಯಲ್ಲಿ ಅವರು ನಡೆಯಬಹುದು. ಆಗ ಶರಣರು ದೃಢ ಮನಸ್ಸಿನವರಾಗಿ ನಮ್ಮ ಮೂಲ ಪಥವಾದ ಬಸವ ಧರ್ಮ ಪೀಠದ ದಾರಿಯಲ್ಲಿಯೇ ನಾವು ನಡೆಯಬೇಕು. ಬಸವ ಧರ್ಮ ಪೀಠದ ಆದೇಶಗಳನ್ನು ನಾವು ಪಾಲಿಸಬೇಕು. ಇದು ಬಿಟ್ಟು ನನಗೆ ದೀಕ್ಷೆ ಕೊಟ್ಟವರೇ ಬೇರೆ ದಾರಿ ಹಿಡಿದಿದ್ದಾರೆ ನಾನೇಕೆ ಪ್ರಾರ್ಥನೆಗೆ ಹೋಗಬೇಕು? ನಾನೇಕೆ ಪೂಜೆ ಮಾಡಬೇಕು? ಎಂದು ಅಳಿ ಮನಸ್ಸಿನವರಾಗಬಾರದು. ಋಣ ಎನ್ನುವಂಥದ್ದು, ಪುಣ್ಯದ ಬುತ್ತಿ ಎನ್ನುವಂಥದ್ದು ತೀರಿದಾಗ ಕೆಲವೊಮ್ಮೆ ಈ ರೀತಿ ಆಗುತ್ತದೆ. ಅದಕ್ಕಾಗಿ ಶರಣ ಬಂಧುಗಳು ಮೂಲ ದಾರಿಯಲ್ಲಿಯೇ ನಡೆದು ನಮ್ಮ ಅಮೂಲ್ಯ ಸಂಸ್ಥೆಯಾದ ಬಸವ ಧರ್ಮ ಪೀಠವನ್ನು ನಾವು ಬೆಳೆಸಬೇಕು.

ಸಂಘಟನೆಯ ಮುಂದಾಳುಗಳೂ, ಸಮಾಜದ ಪ್ರಮುಖರು ಬೋಧನೆ ಮಾಡುವವರು, ಪ್ರವಚನ ಮಾಡುವವರು ಕೂಡ ಅಷ್ಟೇ; ಹರಿಯುವ ನದಿಯೊಂದಿಗೆ ಬೆರೆತು ತಾನು ಪರಮಾತ್ಮನ ಶರಧಿಯನ್ನು ಸೇರಬೇಕೇ ಹೊರತು, ಸ್ವತಂತ್ರವಾಗಿ ಹರಿಯುತ್ತೇನೆ ಎಂದರೆ ಸಾಧ್ಯವಿಲ್ಲ, ಗುರಿ ಮುಟ್ಟುವುದಕ್ಕಿಂತ ಮುಂಚೆಯೇ ಬತ್ತಿ ಹೋಗಬಹುದು. ಮತ್ತು ಅಂಥವರಿಗೆ ಅಳಿವು ಎನ್ನುವಂಥದ್ದು ಖಚಿತವಾದುದು ಎಂದು ಧರ್ಮಪಿತರು ಹೇಳುತ್ತಾರೆ.

ಒಡೆಯರುಳ್ಳ ಆಳಿಂಗೆ ಕೇಡಿಲ್ಲ ಕಾಣಿರೋ
ಊರೆನ್ನದೆ ಅಡವಿಯೆನ್ನದೆ ಆಳನರಸಿ ಬಹ ಆಳ್ದರುಂಟೇ?
ಜೋಳವಾಳಿ ಬಿಜ್ಜಳಂಗೆ ಆಳಾದಡೇನು
ವೇಳೆ ವಾಳಿಂಗೆ ಕೂಡಿ ಕೊಂಡಿಪ್ಪ ನಮ್ಮ ಲಿಂಗದೇವಾ.

ಗುರು ಬಸವಣ್ಣನವರಂಥ, ಅಪ್ಪಾಜಿ - ಮಾತಾಜಿಯವರಂಥ ಒಡೆಯರನ್ನು ಹೊಂದಿರುವವರಿಗೆ ಯಾವುದೇ ಕೇಡು ಎನ್ನುವಂಥದ್ದೇ ಇಲ್ಲ.

ಒಡೆಯರುಳ್ಳ ತೊತ್ತಾನು; ತಾಯಿಯುಳ್ಳ ಶಿಶುವಾನು;
ಸ್ವತಂತ್ರವೇಕಯ್ಯಾ, ನಿನ್ನವರ ನಡುವೆ ಎನಗೆ?
ನಿಮ್ಮವರು ಎನ್ನನೊಲ್ಲದಿಪ್ಪ ದುಃಖವನು ಮರೆವೆನೇ ನಾನು
ನಿಮ್ಮವರಾಜ್ಞೆಯ ಮೀರಿದೆನಾಯಿತ್ತಾದಡೆ ನಿಮ್ಮಾಣೆಯಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನ.

ನಾವು ಅನಾಥರಲ್ಲ ಮಾತಾಜಿಯವರಂಥ ತಾಯಿ, ಬಸವ ಧರ್ಮ ಪೀಠದಂಥ ತಂದೆಯನ್ನು ಹೊಂದಿರುವವರು. "ಗುರು ಬಸವಣ್ಣನವರು - ವಚನ ಸಾಹಿತ್ಯವೆಂಬ ತಂದೆ -ತಾಯಿಯನ್ನು ಹೊಂದಿರುವಾಗ ನಾವು ಅನಾಥರಂತೆ ಅಲೆಯುವುದೇಕೆ? ನಮಗೆ ಸ್ವತಂತ್ರವೇಕೆ?" ಎನ್ನುತ್ತಾರೆ ಗುರು ಸಿದ್ಧರಾಮೇಶ್ವರರು. ಅದಕ್ಕಾಗಿ ರಾ.ಬ.ದಳದ ಶರಣರು ಯಾರೇ ಇರಲಿ ವೈಯಕ್ತಿಕವಾಗಿ ಬೆಳೆಯುವ ಮನೋಭಾವವನ್ನು ಬಿಟ್ಟು ಸಾಂಸ್ಥಿಕ ಪ್ರಜ್ಞೆಯನ್ನು ಮೈಗೂಡಿಸಿಕೊಳ್ಳಬೇಕು.

ಈ ಮೇಲಿನ ನಮ್ಮ ಎಲ್ಲಾ ಕಾರ್ಯಗಳು ಕಾಯಕ ಎನ್ನುವ ರಂಗಭೂಮಿಯ ಮೇಲೆ ನಡೆಯಬೇಕು. ಪೂಜ್ಯ ಮಾತಾಜಿಯವರು ಹೇಳುತ್ತಾರೆ."ಪೂಜೆ ಧ್ಯಾನಗಳೆಂದರೆ, ಹೋಳಿಗೆಯೂಟವಿದ್ದ ಹಾಗೆ,ಮೂರು ಹೊತ್ತು ಅದನ್ನೇ ತಿನ್ನಲಿಕ್ಕೆ ಸಾಧ್ಯವಿಲ್ಲ, ಆದರೆ ಕಾಯಕ ಎಂದರೆ ರೊಟ್ಟಿ/ ಮುದ್ದೆ ಊಟವಿದ್ದ ಹಾಗೆ ಮೂರು ಹೊತ್ತು ದಿನಾಲು ಸ್ವೀಕರಿಸಬಹುದು.

“ಚಿತ್ತ ಶುದ್ಧದಲ್ಲಿ ಕಾಯಕ ಮಾಡುವ ಸದ್ಭಕ್ತರಿಗೆ
ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು”

ಎನ್ನುವ ಆಯ್ದಕ್ಕಿ ಲಕ್ಕಮ್ಮನವರ ವಚನದಂತೆ, ಪ್ರತಿಯೊಬ್ಬರೂ ಕಾಯಕ ಜೀವಿಗಳಾಗಲೇಬೇಕು. ಶರಣ ಧರ್ಮದಲ್ಲಿ ಆಲಸ್ಯಕ್ಕೆ ಸ್ಥಾನವಿಲ್ಲ.

ಕೊನೆಯದಾಗಿ ಇನ್ನೂ ಒಂದು ಮಾತು. ವಚನ ಸಾಹಿತ್ಯ ಜೀವನದಲ್ಲಿ ಎಂದೋ ಒಂದು ದಿನ ಓದುವಂಥ ಸಾಹಿತ್ಯವಲ್ಲ. ಜೀವನದ ಆರಂಭದಿಂದ ಓದುವಂಥ ಸಾಹಿತ್ಯ ಇದಾಗಿದೆ. ನಮ್ಮ ಲೌಕಿಕ ಜೀವನದ ಕಾರ್ಯದಕ್ಷತೆ ವಚನ ಸಾಹಿತ್ಯ ಓದುವುದರಿಂದ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳು ಇದನ್ನು ಓದುವುದರಿಂದ ಅವರ ಗ್ರಹಣ ಶಕ್ತಿ, ಸ್ಮರಣ ಶಕ್ತಿ ಹೆಚ್ಚಾಗುತ್ತದೆ. ಅದಕ್ಕಾಗಿ ವಚನ ಸಾಹಿತ್ಯವು ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಬೇಕು. ಅದನ್ನು ಓದಿ ಅರಿತು, ಅಳವಡಿಸಿಕೊಂಡು ಆಚರಿಸಬೇಕು. ಈ ರೀತಿ ನಾವು ಧರ್ಮ ಮಾರ್ಗದಲ್ಲಿ ನಡೆದಾಗ ಧರ್ಮಪಿತರು ತಮ್ಮ ತನು ಮನಗಳ ಬಗೆದು ಇಂಬಿಟ್ಟುಕೊಳ್ಳುತಾರೆ. ಧರ್ಮಪಿತರ ಮನೋರಥದಂತೆ ನಡೆದು ಅವರ ಕೃಪೆಗೆ ಪಾತ್ರರಾಗೋಣ. ಸೃಷ್ಟಿಕರ್ತ ಲಿಂಗದೇವನ ಮೆಚ್ಚುಗೆಯ ಮಕ್ಕಳಾಗೋಣ.

- ಶರಣ. ಸಚ್ಚಿದಾನಂದ, ಬೆಂಗಳೂರು

ಬಸವ ಧರ್ಮ ಪೀಠಾಧ್ಯಕ್ಷರ ಪರವಾಗಿ

ಶರಣ. ಸಚ್ಚಿದಾನಂದ ಅವರು ದಿ.2-4-2007ರಂದು ಅಕ್ಕಮಹಾದೇವಿ ಪೀಠಾರೋಹಣದ 37ನೆಯ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತ ಒಂದು ಬಹಳ ಮಹತ್ವ ಪೂರ್ಣ ವಿಷಯ ತಿಳಿಸಿದರು. “ನಾನು ರೇಲ್ವೆ ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರ್. ರೇಲ್ವೆ ಇಲಾಖೆ ಕೇಂದ್ರ ಸರ್ಕಾರದ್ದು. ನಾವು ಯಾರೇ ಇರಲಿ ಚೀಫ್ ಇಂಜಿನಿಯರ್‌ರಿಂದ ಹಿಡಿದು ಜೂನಿಯರ್ ಇಂಜಿನಿಯರ್ ತನಕ ಏನಾದರೂ ಗುತ್ತಿಗೆ ಕೊಡುವಾಗ In the name of President of India ಎಂದು ಒಪ್ಪಂದ ಮಾಡಲಾಗುತ್ತದೆ. ಇದರಿಂದಾಗಿ ಇಲಾಖೆಯಲ್ಲಿ ಒಂದು ಹಿಡಿತ ಇದೆ ಮತ್ತು ಕೆಲವೊಂದು ಗೊಂದಲಗಳಿಗೆ ಇದರಿಂದಾಗಿ ಅಲ್ಲಿ ಅವಕಾಶವಿಲ್ಲ. ಅದೇರೀತಿ ರಾಷ್ಟ್ರೀಯ ಬಸವ ದಳದವರು, ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು, ಬ.ಧ.ಪೀಠದ ವಿಧಿ ವಿಧಾನ ನಡೆಸಲು ಅನುಮತಿ/ದೀಕ್ಷೆ ಪಡೆದ ಕ್ರಿಯಾ ಮೂರ್ತಿಗಳು ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರತಿನಿಧಿಯಾಗಿ ನಾನು ದೀಕ್ಷೆ /ಗೃಹ ಪ್ರವೇಶ/ವಿವಾಹ/ ಪ್ರಾರ್ಥನೆ ಮಾಡಿಸುತ್ತಿದ್ದೇನೆ ಎಂದು ಹೇಳಿ ಕಾರ್ಯ ನೆರವೇರಿಸಬೇಕು ಎಂದು.

ಕೇಳಿ ನಿಜಕ್ಕೂ ನನಗೆ ಸಂತೋಷವೆನಿಸಿತು. ಸಚ್ಚಿದಾನಂದ ನಿಷ್ಠಾವಂತ ಶರಣ ಮಾತ್ರವಲ್ಲದೆ ಸ್ವತಂತ್ರವಾಗಿ ಆಲೋಚನೆ ಮಾಡುತ್ತಾರೆ ಮತ್ತು ಉತ್ತಮ ವಿಚಾರಗಳನ್ನು ಮಂಡಿಸುತ್ತಿರುತ್ತಾರೆ. ಆದ್ದರಿಂದ ಉತ್ತಮ ಸಲಹೆಯ ಹಿನ್ನೆಲೆಯಲ್ಲಿ ಇನ್ನು ಮುಂದೆ ಪ್ರಾರ್ಥನೆ ಮಾಡಿಸುವ, ಬಸವೇಶ್ವರ ಪೂಜಾವ್ರತವನ್ನು, ವಿಶೇಷ ಸಂದರ್ಭಗಳಲ್ಲಿ ಮಾಡಿಸುವ ದೀಕ್ಷೆ, ಲಿಂಗಧಾರಣೆ ಇತ್ಯಾದಿ ಮಾಡುವ ಜಂಗಮ ಮೂರ್ತಿಗಳು, ಕ್ರಿಯಾ ಮೂರ್ತಿಗಳು ಕೆಳಗಿನಂತೆ ಉಚ್ಚರಿಸಬೇಕು.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ


ಧರ್ಮಗುರು ಬಸವಣ್ಣನವರ ಸಾಕ್ಷಿಯಾಗಿ, ಜಗತ್ಕರ್ತ ಲಿಂಗದೇವನ ಸಾಕ್ಷಿಯಾಗಿ, ಎಲ್ಲ ಶರಣರ ಸಾಕ್ಷಿಯಾಗಿ

ನಾನು, (ಕ್ರಿಯೆ ಮಾಡಿಸುವವರ ಹೆಸರು) ಧರ್ಮಕ್ಷೇತ್ರ ಕೂಡಲ ಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರತಿನಿಧಿಯಾಗಿ ಇಂದು ಸಾಮೂಹಿಕ ಪ್ರಾರ್ಥನೆ/ದೀಕ್ಷೆ /ಗೃಹ ಪ್ರವೇಶ/ಅಂಗಡಿ ಪ್ರಾರಂಭೋತ್ಸವ/ನಿಶ್ಚಯ/ಲಿಂಗೈಕ್ಯ ಸಂಸ್ಕಾರ ಕಾರ್ಯಕ್ರಮ ಇತ್ಯಾದಿ ನೆರವೇರಿಸುತ್ತಿದ್ದೇನೆ.” ಎಂದು ಹೇಳಬೇಕು. ಅಂದು ಯಾವ ಕ್ರಿಯೆಯನ್ನು ಮಾಡ -ಲಾಗುವುದೋ ಅದನ್ನು ಹೆಸರಿಸಿದರೆ ಸಾಕು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ



ದಿ.22-4-2007ರಂದು ಶರಣ.ಎನ್.ಪುಟ್ಟರುದ್ರರಿಗೆ 80 ವರ್ಷ ಪೂರೈಸಿದಕ್ಕೆ ಅಭಿನಂದನೆ




ಜಿ.ಪಿ.ಓ. ಪದೋನ್ನತಿಗಾಗಿ ಡಾ|| ಬಿ. ಸೋಮಶೇಖರ್ ಅವರಿಗೆ, ಅವರ ಧರ್ಮಪತ್ನಿ ಸರ್ವಮಂಗಳಾ ಅವರಿಗೆ ದಿ.22-4-2007ರಂದು ಅಭಿನಂದನೆ.

CPMG/KA/BGW-50/2006-2008 WPP (W)-17 R.No.19980/70



ದಿ.2-5-2007ರಂದು ಮಧ್ಯಾಹ್ನ 4 ಗಂಟೆಗೆ ಭಯಂಕರ ಗಾಳಿ ಎದ್ದು, ಬಿದ್ದ ಮಳೆಗೆ ಪೆಂಡಾಲ್ ಪೂರ್ತಿ ಕುಸಿಯಿತು. ಸಂಜೆ 6.30ಕ್ಕೆ ರಾಜೀವ ದೀಕ್ಷಿತರ ಭಾಷಣವಿದ್ದಿತಆಗ ಎಲ್ಲಾ ರಾ.ಬ.ದಳ ಹಾಗೂ ಗಣಾಚಾರದಳದ ಶರಣ ಶರಣೆಯರು ಶೀಘ್ರವಾಗಿ ಕೆಲಸ ಮಾಡಿ ಕೇವಲ ವೇದಿಕೆ ರಚಿಸಿ, ಲೈಟುಗಳನ್ನು ಹಾಕಲು ಸಾಧ್ಯವಾಯಿತು. ಬಯಲು ರಂಗ ಮಂದಿರದಲ್ಲಿಯೇ ನಡೆದ ರಾತ್ರಿ ಕಾರ್ಯಕ್ರಮದ ಒಂದು ಮನೋಹರ ದೃಶ್ಯ.



ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳ ಪೀಠಾರೋಹಣದ ನಂತರ ಪೂಜ್ಯ ಮಾತಾಜಿಯವರಿಂದ ರುದ್ರಾಕ್ಷಿ ಮುಕುಟ ಧಾರಣೆ